ಸಂಪುಟ: 15 Volume | ಸಂಚಿಕೆ: 03 Issue | ಪುಟಗಳು 08 Pages | ಶುಕ್ರವಾರ 03 ಏಪ್ರಿಲ್ 2026 | ₹4 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

**ಬೆಳಗು**

ನಿಮ್ಮಷ್ಟಕ್ಕೆ ನೀವೇ ಬೆಳೆಯಬೇಕು.ಅದಕ್ಕಾಗಿ ಬೇರೊಬ್ಬ ಶಿಕ್ಷಕನಿರುವುದಿಲ್ಲ.

–ಸ್ವಾಮಿ ವಿವೇಕಾನಂದ

ಸಿಲೆಂಡರ್: ಸಾಲಿನಲ್ಲಿ ಜನರ ನರಳಾಟ 6

ಅರ್ಥಪೂರ್ಣ ಶರಣೆ ದಾನಮ್ಮ ದೇವಿ ಉತ್ಸವ 7

ಭೀಮಣ್ಣ ಖಂಡ್ರೆ ಪ್ರಶಸ್ತಿಗೆ ರಾಮು ಪಾಟೀಲ ಆಯ್ಕೆ 8



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡು ಇಲ್ಲಿನ ಶಿವಾಜಿನಗರದಲ್ಲಿರುವ ಹಜರತ್ ಖಡಕ್ ಶಾ ವಲಿ ದರ್ಗಾಗೆ ಭೇಟಿ ನೀಡಿ ಪ್ರಾರ್ಥನೆಯಲ್ಲಿ ಪಾಲ್ಗೊಂಡರು. ಸಚಿವರಾದ ಈಶ್ವರ್ ಖಂಡ್ರೆ, ಎಸ್.ಎಸ್. ಮಲ್ಲಿಕಾರ್ಜುನ್ ಮತ್ತು ವಿಧಾನ ಪರಿಷತ್ ಸದಸ್ಯರಾದ ಗೋವಿಂದರಾಜು ಸೇರಿ ಹಲವು ನಾಯಕರು ಉಪಸ್ಥಿತರಿದ್ದರು.

## ಸಚಿವರ ತವರಲ್ಲಿ ಹೆಚ್ಚು ತೆರಿಗೆ ಸಂಗ್ರಹ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ತವರು ಜಿಲ್ಲೆಯಿಂದ ಒಮದು ಗುಡ್ ನ್ಯೂಸ್ ಬಂದಿದೆ..! ಜಿಲ್ಲೆಯ ಗ್ರಾ.ಪಂಗಳು ಈ ಬಾರಿ ದಾಖಲೆಯ ಮಟ್ಟದಲ್ಲಿ ಆಸ್ತಿ ತೆರಿಗೆ ಸಂಗ್ರಹಿಸಿವೆ. ಶೇ. 89.80ರಷ್ಟು ತೆರಿಗೆ ಸಂಗ್ರಹವಾಗಿದ್ದು, ಜಿಲ್ಲೆಯ ಮಟ್ಟದಲ್ಲಿ ಹೊಸ ದಾಖಲೆ ನಿರ್ಮಾಣವಾಗಿದೆ. ಪ್ರತಿ ವರ್ಷ ಗ್ರಾ.ಪಂಗಳಿಂದ 10ರಿಂದ 15 ಕೋಟಿ ರೂ. ತೆರಿಗೆ ಸಂಗ್ರಹಿಸಲಾಗುತ್ತಿತ್ತು. ಎರಡು ವರ್ಷಗಳಿಂದ ತೆರಿಗೆ ಸಂಗ್ರಹದಲ್ಲಿ ಗಣನೀಯ ಏರಿಕೆಯಾಗಿದೆ. 2024–25 ನೇ ಸಾಲಿನಲ್ಲಿ 25.81 ಕೋಟಿ ರೂ. ಸಂಗ್ರಹವಾಗಿದ್ದರೆ, 2025–26 ರ ಮಾರ್ಚ್ 31 ರ ಅಂತ್ಯಕ್ಕೆ 33.44 ಕೋಟಿ ರೂ. ಸಂಗ್ರಹಿಸಲಾಗಿದೆ.

ಜಿಲ್ಲೆಯಲ್ಲಿ261 ಗ್ರಾಮ ಪಂಚಾಯಿತಿಗಳಿದ್ದು, ಅದರಲ್ಲಿ71 ಪಂಚಾಯಿತಿಗಳು ಶೇ.100ರಷ್ಟು ಆಸ್ತಿ ತೆರಿಗೆ ಸಂಗ್ರಹ ಮಾಡಿವೆ. ಇನ್ನು 90ಕ್ಕೂ ಹೆಚ್ಚು ಪಂಚಾಯಿತಿಗಳು ಶೇ.90ರಷ್ಟು ವಸೂಲಿ ಸಾಧಿಸಿವೆ. ಕಳೆದ 9 ವರ್ಷಗಳಲ್ಲಿ ಇದೇ ಅತ್ಯಧಿಕ ಸಂಗ್ರಹವಾಗಿರುವುದು ಗಮನ ಸೆಳೆದಿದೆ.

## ಸಮರ್ಥ್ ಪರ ಖಂಡ್ರೆ ರೋಡ್ ಶೊ

• ಮಲ್ಲಮ್ಮ ನುಡಿ ವಾರ್ತೆ ದಾವಣಗೆರೆ



ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಅಂಗವಾಗಿ ಇಂದು ನಡೆದ ಪ್ರಚಾರ ಕಾರ್ಯಕ್ರಮದಲ್ಲಿ ಅರಣ್ಯ ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸಮರ್ಥ ಶಾಮನೂರು ಪರವಾಗಿ ಭರ್ಜರಿ ರೋಡ್ ಶೋ ನಡೆಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಈಶ್ವರ ಖಂಡ್ರೆ ಅವರು, ಅಭಿವೃದ್ಧಿ, ಜನಪರ ಯೋಜನೆಗಳು ಹಾಗೂ ಸದೃಢ ನಾಯಕತ್ವಕ್ಕಾಗಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವ ಅಗತ್ಯವಿದೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರೀ ಸಮರ್ಥ ಶಾಮನೂರು ಅವರನ್ನು ಭಾರೀ ಮತಗಳ ಅಂತರದಿಂದ ಗೆಲ್ಲಿಸುವಂತೆ ಮತದಾರರಿಗೆ ಮನವಿ ಮಾಡಿದ್ದಾರೆ.

ರೋಡ್ ಶೊ ವೇಳೆ ಸಾರ್ವಜನಿಕರಿಂದ ಅಪಾರ ಬೆಂಬಲ ವ್ಯಕ್ತವಾಗಿದ್ದು, ಕಾಂಗ್ರೆಸ್ ಪಕ್ಷದ ಪರವಾಗಿ ಉತ್ಸಾಹಭರಿತ ವಾತಾವರಣ ನಿರ್ಮಾಣಗೊಂಡಿತ್ತು. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಗೆಲುವು ನಿಶ್ಚಿತ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

### ಕಲ್ಯಾಣ ಹಾಗೂ ಧ್ವಜ ದಿನಾಚರಣೆ



**ವಿಜಯಪುರ:** ಜಿಲ್ಲಾ ಪೊಲೀಸ್ ಕಲ್ಯಾಣ ಹಾಗೂ ಧ್ವಜ ದಿನಾಚರಣೆಯನ್ನು ಇಂದು ವಿಜಯಪುರ ಜಿಲ್ಲಾ ಪೊಲೀಸ್ ಕವಾಯತ ಮೈದಾನದಲ್ಲಿ ವಿಜಯಪುರ ಜಿಲ್ಲಾ ಪೊಲೀಸ್ ಕಲ್ಯಾಣ ಹಾಗೂ ಧ್ವಜ ದಿನಾಚರಣೆಯನ್ನು ಅರ್ಥ ಪೂರ್ಣವಾಗಿ ಆಚರಿಸಲಾಯಿತು ಮುಖ್ಯ ಅಥಿತಿಗಳಾಗಿ ಶ್ರೀ ಎಸ್. ಕೆ.ಮಾರಿಹಾಳ ಕೆ. ಎಸ್. ಪಿ. ಎಸ್. ನಿವೃತ್ತ ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಡಾ:ಆನಂದ ಕೆ. ಭಾ.ಆ.ಸೇ. ಜಿಲ್ಲಾಧಿಕಾರಿಗಳು ವಿಜಯಪುರ ಹಾಗೂ ಶ್ರೀ ರಿಷಿ ಆನಂದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ್ ವಿಜಯಪುರ ಉಪಸ್ಥಿತರಿದ್ದರು.

### ಮಗು ಸಾವು, ತಾಯಿ ಆತ್ಮಹತ್ಯೆ

**ಬೆಂಗಳೂರು:** ಬೆಂಗಳೂರಿನ ಭೈರವೇಶ್ವರ ನಗರದಲ್ಲಿ ಚಿಕ್ಕ 11 ವರ್ಷದ ಮಗು, ಬಕೆಟ್ ನೀರಿನಲ್ಲಿ ಮುಳುಗಿ ಮೃತಪಟ್ಟಿದೆ. ಇದನ್ನು ಕಂಡ ತಾಯಿ ನೊಂದು ಆತ್ಮಹತ್ಯೆಗೆ ಮಾಡಿಕೊಂಡಿದ್ದಾಳೆ. ಚಂದ್ರಾಲೇಔಟ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಮಗು ತಿಳಿಯದೆ ,ಬಕೆಟ್ ನೀರಲ್ಲಿ ಬಿದ್ದು ಸತ್ತಿದೆ. ಆದರೆ ತಾಯಿ ಹೃದಯಕ್ಕೆ ಅದನ್ನು ಸಹಿಸಲಾಗದೆ ತಾನೂ ಜೀವನ ಅಂತ್ಯಗೊಳಿಸುವ ನಿರ್ಧಾರ–ಕ್ಕೆ ಬಂದಿದ್ದಾರೆ. ಅಲ್ಲದೆ ಈ ಬಗ್ಗೆ ಡೆತ್ ನೋಟ್ ಬರೆದಿಟ್ಟ ಪ್ರತಿಭಾ ಕೊನೆಯುಸಿರು ಎಳೆದಿದ್ದಾರೆ.

### ಜಮೀರ್‌ಗೆ ಎಐಸಿಸಿಯಲ್ಲಿ ಸ್ಥಾನ..!

**ಬೆಂಗಳೂರು:** ಕೇರಳ ವಿಧಾನ ಸಭೆ ಚುನಾವಣೆ ಸ್ಟಾರ್ ಪ್ರಚಾರಕರಾಗಿ ಹತ್ತು ದಿನಗಳಿಂದ ಪ್ರಚಾರ ನಡೆಸುತ್ತಿರುವ ಸಚಿವ ಜಮೀರ್ ಅಹಮದ್‌ಖಾನ್ ಅವರಿಗೆ ಎಐಸಿಸಿ ಮಟ್ಟದಲ್ಲಿ ಮಹತ್ವದ ಸ್ಥಾನಮಾನ ದೊರೆತಿದೆ. ಎಐಸಿಸಿ ಅಲ್ಪಸಂಖ್ಯಾತರ ಘಟಕದ ಸಲಹಾ ಪರಿಷತ್‌ನಲ್ಲಿ ಜಮೀರ್ ಅಹಮದ್ ಖಾನ್ ಅವರಿಗೆ ಸ್ಥಾನ ದೊರೆತಿದೆ.ತಾರೀಖ್ ಅನ್ವರ್, ಸಲ್ಮಾನ್ ಖುರ್ಶಿದ್, ಅಭಿಷೇಕ್ ಮನು ಸಿಂಗ್ವಿ, ಇಮ್ರಾನ್ ಪ್ರತಾಪ್ ಗಡಿ ಅವರು ಈ ಪರಿಷತ್ ನಲ್ಲಿದ್ದಾರೆ.

# ಗರಿಬಿಟ್ಟ ಗ್ಯಾಸ್ ಟ್ರಬಲ್

## ನಾಡಿಗೂ ತಾಕಿದ ಯುದ್ಧದ ಎಫೆಕ್ಟ್ | ಅಡುಗೆ ಮನೆಯಲ್ಲೂ ಹಾಹಾಕಾರ | ಆಟೊಚಾಲಕರ ಪರದಾಟ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು/ದೆಹಲಿ

ಅಮೆರಿಕ, ಇರಾನ್ ಮತ್ತು ಇಸ್ರೇಲ್ ಯುದ್ಧದ ಎಫೆಕ್ಟ್ ಇಡೀ ವಿಶ್ವಕ್ಕೆ ತಟ್ಟಿದೆ. ಭಾರತಕ್ಕೂ ಇದರ ಬಿಸಿ ತಾಕಿದ್ದು ಜನರು ಫುಲ್ ಆತಂಕಕ್ಕೆ ಒಳಗಾಗಿದ್ದಾರೆ. ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಆಟೊಗಳಿಗೂ ಗ್ಯಾಸ್ ಇಲ್ಲದೆ ಪರದಾಡುವಂತಾಗಿದೆ.

ವಿಶೇಷವಾಗಿ, ಬೆಂಗಳೂರ, ಮೈಸೂರು, ವಿಜಾಪುರ, ಕಲ್ಬುರ್ಗಿ, ಬೀದರ್, ಬಳ್ಳಾರಿ ಸೇರಿದಂತೆ ರಾಜ್ಯದ ಅನೇಕ ಕಡೆ ಆಟೊಗಳಿಗೆ ಗ್ಯಾಸ್ ಇಲ್ಲದೆ ಅವುಗಳನ್ನು ನಿಲ್ಲಿಸಿರುವ ಚಾಲಕರು ತಲೆಮೇಲೆ ಕೈ ಇಟ್ಟು ಕೂತಿದ್ದಾರೆ.

**ಗ್ಯಾಸ್ ವಿತರಣೆ ಇಲ್ಲ:** ಊರು ಬಿಟ್ಟು ನಗರಕ್ಕೆ ಬಂದವರು ಜೀವನ ನಡೆಸೋದೇ ಕಷ್ಟವಾಗಿದೆ. ಗ್ಯಾಸ್ ಸಪ್ಲೈ ಇಲ್ಲದೇ ಬೆಂಗಳೂರು ಸೇರಿದಂತೆ ಹಲವೆಡೆ ಹೋಟೆಲ್‌ಗಳು ಬಾಗಿಲು ಮುಚ್ಚಿವೆ. ಇದು ಹೀಗೆ ಮುಂದುವರಿದ್ರೆ ಮುಂದೆ ಏನಾಗುತ್ತೆ ಅನ್ನೋದನ್ನು ಊಹಿಸಿಕೊಳ್ಳಲು ಅಸಾಧ್ಯವಾಗಿದೆ.

**ಅಡುಗೆ ಮನೆ ಟೆನ್ಷನ್:** ಭೀಕರ ಯುದ್ಧ ನಡೆಯುತ್ತಿದೆ. ಕ್ಷಿಪಣಿಗಳ ಅಬ್ಬರ, ಡ್ರೋನ್‌ಗಳ ಆರ್ಭಟದ ನಡುವೆ ಸಾವಿರಾರು ಕಿ.ಮೀ.ದೂರದಲ್ಲಿರುವ ಭಾರತದ ಅಡುಗೆಮನೆಗಳಲ್ಲಿ ಇದೀಗ ಟೆನ್ಷನ್ ಶುರುವಾಗಿದೆ. ದಿನಬೆಳಗಾದರೆ ಸಾಕು, ಗ್ಯಾಸ್ ಸಿಲಿಂಡರ್ ಸರಿಯಾದ ಸಮಯಕ್ಕೆ ಸಿಗುತ್ತೋ ಇಲ್ಲವೋ ಎಂಬ ಆತಂಕ ಜನಸಾಮಾನ್ಯರನ್ನು ಕಾಡಲಾರಂಭಿಸಿದೆ.



### ಸ್ವಾವಲಂಬನೆಯ ಗ್ಯಾಸ್..?

ಕೇವಲ ಒಂದು ಪ್ರದೇಶವನ್ನು ನಂಬಿಕೊಂಡು ಕೂತರೆ ಮುಂದೊಂದು ದಿನ ದೊಡ್ಡ ಅಪಾಯ ಕಟ್ಟಿಟ್ಟ ಬುತ್ತಿ ಎಂಬುದನ್ನು ಅರಿತಿರುವ ಭಾರತ, ಈಗ ತನ್ನ ಆಮದು ಮೂಲಗಳನ್ನು ವ್ಯವಸ್ಥಿತವಾಗಿ ಬದಲಾಯಿಸುತ್ತಿದೆ. ಕತಾರ್, ಯುಎಇ ಮೇಲಿನ ಅವಲಂಬನೆ ಕಡಿಮೆ ಮಾಡಿ, ಅಮೆರಿಕ, ಆಸ್ಟ್ರೇಲಿಯಾ, ನಾರ್ವೆ, ಕೆನಡಾ, ಅಲ್ಜೀರಿಯಾ ಮತ್ತು ರಷ್ಯಾದತ್ತ ಮುಖ ಮಾಡಿದೆ. ಗ್ಯಾಸ್ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲು ಯತ್ನಿಸುತ್ತಿದೆ.

ಯುದ್ಧದ ಭೀತಿಯಿಂದಾಗಿ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ಏರುಪೇರಾಗುವ ಸಾಧ್ಯತೆಗಳಿದ್ದರೂ, ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಭಾರತವು ಸರ್ವಸನ್ನದ್ಧವಾಗಿದೆ. ಇಂಧನ ವಿತರಣಾ ವ್ಯವಸ್ಥೆಯಲ್ಲಿ ಉಂಟಾಗಬಹುದಾದ ಅಡೆತಡೆಗಳನ್ನು ನಿವಾರಿಸಲು ಸರ್ಕಾರವು ಮುನ್ನೆಚ್ಚರಿಕಾ ಕ್ರಮಗಳನ್ನು ಈಗಾಗಲೇ ರೂಪಿಸಿದೆ.

–ರಾಜ್‌ನಾಥ್ ಸಿಂಗ್
ಕೇಂದ್ರ ರಕ್ಷಣಾ ಸಚಿವ

### ಆಟೊ ಚಾಲಕರ ಕ್ಯೂ..!

ಆಟೊ ಎಲ್ಪಿಜಿ ಮತ್ತು ಸಿಎನ್‌ಜಿ ಕೊರತೆಯಿಂದ ಬೆಂಗಳೂರು, ಮೈಸೂರು, ಬೆಳಗಾವಿ, ಹುಬ್ಬಳ್ಳಿ, ಕಲ್ಬುರ್ಗಿ, ಯಾದಗಿರಿ, ಸೇರಿ ನಾಡಿನಾದ್ಯಂತ ದರ ಚಾಲಕರು ತತ್ತರಿಸಿದ್ದಾರೆ. ಒಂದು ತಿಂಗಳ ಅವಧಿಯಲ್ಲಿ ಆಟೊ ಎಲ್ಪಿಜಿ ದರವು ಕೆ.ಜಿಗೆ 36 ರೂ. ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಕೆಲ ಆಟೊ ಚಾಲಕರು ನಿಗದಿಗಿಂತ ಹೆಚ್ಚು ಪ್ರಯಾಣ ದರಕ್ಕೆ ಬೇಡಿಕೆ ಇಡುತ್ತಿರುವ ದೂರುಗಳು ಕೇಳಿಬಂದಿವೆ.

### ಉದ್ವಿಗ್ನತೆ ನಡುವೆ ರಕ್ಷಣೆ

ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಭಾರತದಲ್ಲಿ ಇಂಧನ ಅಥವಾ ಅನಿಲದ ಕೊರತೆಯಾಗುವ ಯಾವುದೇ ಆತಂಕವಿಲ್ಲ ಎಂದು ರಾಜನಾಥ್ ಸಿಂಗ್ ಸ್ಪಷ್ಟಪಡಿಸಿದ್ದಾರೆ. ಸೂಕ್ಷ್ಮ ಪ್ರದೇಶವಾದ ಹಾರ್ಮುಜ್ ಜಲಸಂಧಿ ಮೂಲಕ ಸಂಚರಿಸುವ ಭಾರತದ ತೈಲ ಟ್ಯಾಂಕರ್‌ಗಳಿಗೆ ಭಾರತ ನೌಕಾಪಡೆಯು ಪೂರ್ಣ ರಕ್ಷಣೆ ನೀಡುತ್ತಿದ್ದು, ಅವು ಸುರಕ್ಷಿತವಾಗಿ ಬಂದರು ತಲುಪಿಸುತ್ತಿವೆ ಎಂದಿದ್ದಾರೆ.

## ತಾಕತ್ತಿದ್ದರೆ ವಿದ್ಯಾರ್ಥಿ ಮತದಾರರನ್ನು ಬಂಧಿಸಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ



ಸುರ್ಜೇವಾಲಾ ಅವರೇ, ಸರಕಾರ ನಿಮ್ಮದೇ ಇದೆ. ನಿಮಗೆ ತಾಕತ್ತಿದ್ದರೆ ವಿದ್ಯಾರ್ಥಿ ಮತದಾರರನ್ನು ಇವತ್ತೇ ಬಂಧಿಸಿ ತೋರಿಸಿ ಎಂದು ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಸವಾಲು ಹಾಕಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಯುವಕರು, ಕಾಲೇಜು ವಿದ್ಯಾರ್ಥಿಗಳು ಮತ ಹಾಕಿದರೆ ಬಂಧಿಸುವುದಾಗಿ ಹೇಳುವ ಮೂಲಕ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು ಭಯ ಸೃಷ್ಟಿಸುತ್ತಿದ್ದಾರೆ ಎಂದು ಆಕ್ಷೇಪಿಸಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ. ರಾಜ್ಯದಲ್ಲಿ ಇನ್ನೂ ಎಸ್.ಐ.ಆರ್. ಆಗಿಲ್ಲ ಎಂದು ತಿಳಿಸಿದ್ದಾರೆ. ಸೋಲಿನ ಭಯದಿಂದ ಈ ರೀತಿ ಮಾತನಾಡುತ್ತಾರೆ. ಆಶಾ–ಅಂಗನವಾಡಿ ಕಾರ್ಯಕರ್ತೆಯರು, ಶಿಕ್ಷಕರನ್ನು ಮನೆ ಮನೆಗೆ ಕಳಿಸಿ ನೀವು ಕಾಂಗ್ರೆಸ್ಗೆ ಮತ ಹಾಕದೇ ಇದ್ದರೆ, ನಿಮ್ಮ 5 ಗ್ಯಾರಂಟಿ ರದ್ದಾಗುತ್ತವೆ ಎಂದು ಭಯ ಹುಟ್ಟಿಸುತ್ತಿದ್ದಾರೆ.

## ಜಮೀರ್‌ಗೆ ದಾವಣಗೆರೆ ಬಿಸಿತುಪ್ಪ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯು ಸಚಿವ ಜಮೀರ್ ಅಹ್ಮದ್‌ಖಾನ್ ಅವರಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಕಾಂಗ್ರೆಸ್ ಮುಸ್ಲಿಂ ನಾಯಕರ ಎರಡು ಬಣಗಳಲ್ಲಿ ಸಮರ್ಥ್ ಕುರಿತಾಗಿ ಭಿನ್ನವಾದ ಅಭಿಪ್ರಾಯವಿದೆ. ಒಂದು ಬಣ ಸಮರ್ಥ್ ಗೆಲುವಿಗೆ ಪ್ರಯತ್ನ ನಡೆಸಿದರೆ, ಮತ್ತೊಂದು ಬಣ ಮುಸ್ಲಿಮರಿಗೆ ಟಿಕೆಟ್ ಕೊಡದೆ ಇರುವುದಕ್ಕೆ ಅಸಮಾಧಾನವನ್ನು ವ್ಯಕ್ತಪಡಿಸುತ್ತಲೇ ಇದೆ. ಈ ನಡುವೆ ಸಚಿವ ಜಮೀರ್ ಅಹ್ಮದ್ ಅವರ ನಡೆ ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ.

ಟಿಕೆಟ್ ಕೊಡುವಾಗ ಮುಸ್ಲಿಮರನ್ನು ಪರಿಗಣಿಸಬೇಕು ಎಂಬುವುದು ಜಮೀರ್ ಬೇಡಿಕೆಯಾಗಿತ್ತು. ಇದಕ್ಕೆ ಕೆಲವು ಮುಸ್ಲಿಂ ಶಾಸಕರು ಸಾಥ್ ನೀಡಿದ್ದರು. ಆದರೆ ಸಮರ್ಥ್‌ಗೆ ಟಿಕೆಟ್ ಪಡೆಯುವಲ್ಲಿ ಎಸ್‌ಎಸ್‌ಮಲ್ಲಿಕಾರ್ಜುನ್ ಯಶಸ್ವಿಯಾಗಿದ್ದಾರೆ. ಈ ವೇಳೆ ಮಲ್ಲಿಕಾರ್ಜುನ್–ಜಮೀರ್ ನಡುವೆ ಜಟಾಪಟಿಯಾಗಿದೆ.

## ಹನುಮನ ಪ್ರಗತಿಗೆ ಪಾಟೀಲರ ಕೊಡುಗೆ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ತಾಲೂಕಿನ ಶಿವಪುರ ಗ್ರಾಮದ ಪ್ರಸಿದ್ಧ ಹನುಮಾನ ದೇವಸ್ಥಾನದ ಅಭಿವೃದ್ಧಿಗೆ ಮಾಜಿ ಸಚಿವ ರಾಜಶೇಖರ ಬಿ.ಪಾಟೀಲ ಅವರ ಕೊಡುಗೆ ಅಪಾರವಾಗಿದೆ ಎಂದು ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ ಪಾಟೀಲ ಹೇಳಿದ್ದಾರೆ. ದೇವಸ್ಥಾನವು ಭಕ್ತರ ಪ್ರಮುಖ ಆರಾಧನಾ ಕೇಂದ್ರವಾಗಿದ್ದು, ಅದರ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಪಾಟೀಲರು ಹಲವು ಕಾರ್ಯಗಳನ್ನು ಕೈಗೊಂಡಿದ್ದಾರೆ. ಭಕ್ತರಿಗೆ ಕುಡಿಯುವ ನೀರಿನ ಸೌಲಭ್ಯ ಕ್ಕಾಗಿ ಕೊಳವೆ ಬಾವಿ, ಗರ್ಭಡಿ, ಗೊಪುರ, ಮಹಾದ್ವಾರ, ದೇವಸ್ಥಾನದ ಆವರಣದಲ್ಲಿ ಸಿಸಿ ಬೇಡ್, ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಗಳು ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಮುಮದೆಯೂ ಕೂಡಾ ಈ ದೇವಸ್ಥಾನದ ಉಳಿದ ಕಾಮಗಾರಿಯನ್ನು ಮಾಡಿಸಲಾಗುವುದೆಂದು ಭರವಸೆ ನೀಡಿದ್ದಾರೆ.

**ಅಭಿವೃದ್ಧಿಗೆ ಸ್ಥಳೀಯರ ಮೆಚ್ಚುಗೆ:** ದೇವಸ್ಥಾನಕ್ಕೆ ಬರುವ ಭಕ್ತರಿಗೆ ಅನುಕೂಲವಾಗುವಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದಾರೆ. ದೇವಸ್ಥಾನದ ಪರಿಸರವನ್ನು ಸುಂದರಗೊಳಿಸುವುದು, ರಸ್ತೆ, ನೀರಿನ ವ್ಯವಸ್ಥೆ ಮಾಡಿಸುವುದು ಸೇರಿದಂತೆ ಅನೇಕ ಅಭಿವೃದ್ಧಿ ಕಾಮಗಾರಿಗಳಿಗೆ ಸಹಕಾರ ನೀಡಿರುವುದು ಸ್ಥಳೀಯರ ಮೆಚ್ಚುಗೆಗೆ ಪಾತ್ರವಾಗಿದೆ. ಶಿವಪುರ ಹನುಮಾನ ದೇವಸ್ಥಾನವು ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಆಧ್ಯಾತ್ಮಿಕ ಶಕ್ತಿಯ ಕೇಂದ್ರವಾಗಿದ್ದು, ಇಲ್ಲಿ ಪ್ರತಿದಿನವೂ ಅನೇಕ ಭಕ್ತರು ಆಗಮಿಸುತ್ತಾರೆ. ಈ ದೇವಸ್ಥಾನದ ಅಭಿವೃದ್ಧಿಗೆ ಪಾಟೀಲರು ನೀಡಿದ ಸಹಕಾರದಿಂದ ಭಕ್ತರಿಗೆ ಉತ್ತಮ ಸೌಲಭ್ಯಗಳು ಲಭಿಸುತ್ತಿವೆ.



### ಸ್ಥಳೀಯರು ಹೇಳೋದು..?

ಗ್ರಾಮದ ಹಿರಿಯರು ಹಾಗೂ ಭಕ್ತರು ಹೇಳುವಂತೆ, ದೇವಸ್ಥಾನದ ಅಭಿವೃದ್ಧಿಯಲ್ಲಿ ಪಾಟೀಲರ ಪಾತ್ರ ಸದಾ ಸ್ಮರಣೀಯವಾಗಿದ್ದು, ಪಾಟೀಲರ ಸೇವೆಯನ್ನು ನಾವು ಸದಾ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತೇವೆ ಎನ್ನುತ್ತಾರೆ ಜಗನ್ನಾಥ ರಾವ ಧುಮಾಳೆ, ಮಾಣಿಕರೆಡ್ಡಿ ಕರಣೆ, ರಾಮರೆಡ್ಡಿ ಕಂಚಟಿ. ಮಹೋನ ರೆಡ್ಡಿ ಮುಡಬಿ. ಶಿವಾರೆಡ್ಡಿ ಮುಡಬಿ. ರಮೇಶರೆಡ್ಡೆ ಉಸ್ತೇಲಿ, ದೇವಿದಾಸ, ಪೀರಪ್ಪಾ, ರಮೇಶ ಜಾಧವ, ಜಗದೀಶ, ಸೇರಿದಂತೆ. ಮರಗೆಮ್ಮಾ ದೇವಸ್ಥಾನದ ಆಡಳಿತ ಮಂಡಳಿಯ ಮಹಿಳೆಯರು ಸೇರಿ ಅನೇಕರು.

## ಬೌಗುಡವ ಬೀದಿ ನಾಯಿ, ಭಯದ ಸ್ಥಿತಿ..!

• ಮಲ್ಲಮ್ಮ ನುಡಿ ವಾರ್ತೆ ಗಂಗಾವತಿ

ಜಿಲ್ಲೆಯಾದ್ಯಂತ ಇತ್ತೀಚೆಗೆ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ರಸ್ತೆಗಳಲ್ಲಿ ಓಡಾಡಲು ಜನರು ಭಯಪಡುವ ಸ್ಥಿತಿ ನಿರ್ಮಾಣವಾಗಿದೆ. ಮಕ್ಕಳು ಹಾಗೂ ವೃದ್ಧರ ಮೇಲೆ ನಾಯಿಗಳು ಏಕಾಏಕಿ ದಾಳಿ ಮಾಡುತ್ತಿದ್ದು, ಆತಂಕಕ್ಕೆ ಕಾರಣವಾಗಿದೆ.

ನಗರದಲ್ಲಿ ಹಿರೇಜಂತಕಲ್, ವಿರುಪಾಪೂರ ತಾಂಡ, ವಾರ್ಡ್ ಗಳಲ್ಲಿ ನಾಯಿಗಳು ಗುಂಪು ಗುಂಪಾಗಿ ಸುತ್ತಾಡುತ್ತಿವೆ. ಹಲವು ನಾಯಿಗಳನ್ನು ಹಿಡಿದು ಸಂತಾನ ಶಕ್ತಿ ಹರಣ ಚಿಕಿತ್ಸೆ ಮಾಡಲಾಗಿದ್ದು, ಉಳಿದ ತಾಲೂಕಿನಲ್ಲಿ ನಾಯಿಗಳ ಹಾವಳಿ ಯಥಾಪ್ರಕಾರ ಮುಂದುವರಿದಿದೆ.

**ಇಲ್ಲೆಲ್ಲಾ ನಾಯಿಗಳದ್ದೇ ಕಾರ್‌ಬಾರ್:** ಗಂಗಾವತಿ ಕೇಂದ್ರ ಬಸ್ ನಿಲ್ದಾಣ ಸುತ್ತಮುತ್ತ, ಹಾಗೂ ಇತರೆ ಪ್ರದೇಶಗಳಲ್ಲಿ ಬೀದಿನಾಯಿಗಳು ಗುಂಪು ಗುಂಪಾಗಿ ಓಡಾಡುತ್ತಿವೆ. ಇಲ್ಲಿ 10ಕ್ಕೂ ಹೆಚ್ಚು ನಾಯಿಗಳು ಇರುತ್ತವೆ. ಹಗಲು ಹಾಗೂ ರಾತ್ರಿ ಎನ್ನದೇ ಜನರ ಮೇಲೆ ದಾಳಿ ಮಾಡುತ್ತಿವೆ. ರಾತ್ರಿಯಂತೂ ಜನರ ಓಡಾಟವೇ ಕಷ್ಟವಾಗಿದೆ' ಎಂದರು ಒಂಟಿಯಾಗಿ ಓಡಾಡುವವರನ್ನು ಕಂಡರೆ, ಬೊಗಳುತ್ತಿವೆ. ದಾಳಿ ಸಹ ಮಾಡಿ ಗಾಯಗೊಳಿಸುತ್ತಿವೆ.



ನಾಯಿ ದಾಳಿಯಿಂದ ಗಾಯಗೊಂಡಿರುವ ಹೆಣ್ಣು ಮಗಳು ವಂದನಾ ಬುದೇಶ ಕಂಪ್ಲಿ ಅಂಗಡಿಗೆ ಹೋಗಿ ಬರುವಾಗ, ಗುಂಪಿನಲ್ಲಿ ಬೀದಿನಾಯಿಗಳು ಬಂದವು. ಕೆಲ ಕ್ಷಣಗಳಲ್ಲಿ ನಾಯಿಯೊಂದು ನನ್ನ ಮೇಲೆ ದಾಳಿ ಮಾಡಿ, ಕಚ್ಚಿತು. ಲವರು, ಸ್ಥಳಕ್ಕೆ ಬಂದು ನಾಯಿ ಓಡಿಸಿ ನನ್ನನ್ನು ರಕ್ಷಿಸಿದರು. ಹಿರೇಜಂತಕಲ್‌ನಲ್ಲಿ ನಾಯಿಗಳ ಹೆಚ್ಚು ಆಗಿದೆ. ಅದಕ್ಕೆ ನಗರಸಭೆದವರು ಕೂಡಲೇ ನಾಯಿಗಳು ಹಿಡಿಯಬೇಕು

–ಗವಿಸಿದ್ದಪ್ಪ ಆರಾಳ, ಹಿರೇಜಂತಕಲ್ ನಿವಾಸಿ.

**ಒಂದು ಉಪಚುನಾವಣೆ ಗೆಲುವಿಗಾಗಿ ಬಾಗಲಕೋಟೆಯಲ್ಲಿ ಸಿಎಂ ನಾಲ್ಕು ದಿನ ತಂಗುವುದು ಎಷ್ಟು ಸರಿ?: ಅಭ್ಯರ್ಥಿ ಚರಂತಿ ಮಠ**

# ಎನ್‌ಎಸ್‌ಎಸ್‌ನಿಂದಾಗಿ ತಾಳ್ಮೆಗುಣ



ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರದಲ್ಲಿ ಪಾಲ್ಗೊಳ್ಳುವುವ ಮೂಲಕ ಅವರಲ್ಲಿ ತಾಳ್ಮೆಗುಣ ಬೆಳೆಯುತ್ತದೆ ಎಂದು ಶ್ರೀ ಚನ್ನಬಸವೇಶ್ವರ ಪದವಿ ಕಾಲೇಜಿನ ಪ್ರಾಚಾರ್ಯ ಡಾ.ಸಂತೋಕುಮಾರ ತೀರ್ಥೆ ಅಭಿಪ್ರಾಯಪಟ್ಟರು.

ತಾಲೂಕಿನ ಅಂಬೆಸಾಂಗವಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಭಾಲ್ಕಿಯ ಚನ್ನಬಸವೇಶ್ವರ ಪದವಿ ಕಾಲೇಜಿನವರು ಹಮ್ಮಿಕೊಂಡ ರಾಷ್ಟ್ರೀಯ ಸೇವಾ ಯೋಜನೆಯ (ರಾ.ಸೆ.ಯೋ.)ವಿಶೇಷ ಶಿಬಿರದ 5ನೇ ದಿವಸದ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು.ಪರಿಸರ ಮಾಲಿನ್ಯ ತಡೆಗಟ್ಟಲು ನಿಯಂತ್ರಣಾಕ್ರಮಗಳನ್ನು ಕೈಕೊಳ್ಳಬೇಕು.ಪ್ರತಿ ವ್ಯಕ್ತಿಗೆ ಉಸಿರಾಡಲು ಆಮ್ಲಜನಕ ಅತ್ಯಾವಶ್ಯಕವಾಗಿರುವುದರಿಂದ ಗಿಡ–ಮರ ಬೆಳೆಸಿ ಉಳಿಸಿಕೊಳ್ಳುವುದು ಅಗತ್ಯವಾಗಿದೆ ಎಂದರು.ನಿವೃತ್ತ ಪ್ರಾಚಾರ್ಯ ಅಶೋಕ ರಾಜೋಳೆ ಮಾತನಾಡಿ,ನಮ್ಮ ದೇಶದಲ್ಲಿ ಪರಿಸರ ಸಂರಕ್ಷಣೆಗಾಗಿ ನಡೆದ ಸುಂದರಲಾಲ್ ಬಹುಗುಣ ಅವರ ನೇತೃತ್ವದಲ್ಲಿ ಚಿಪ್ಕೊ ಆಂದೋಲನ,ಕರ್ನಾಟಕದಲ್ಲಿ ನಡೆದ ಅಪ್ಪಿಕೊ ಚಳುವಳಿ ಮತ್ತು ವೃಕ್ಷಮಾತೆ ಸಾಲುಮರದ ತಿಮ್ಮಕ್ಕ 5 ಕಿ.ಮೀ.ವರೆಗೆ ಆಲದ ಮರ ನೆಟ್ಟು ಪೋಷಿಸಿದ ಕಾರ್ಯ ನಮ್ಮೆಲ್ಲರಿಗೆ ಪ್ರೇರಣೆ ನೀಡಿದೆ ಎಂದರು. ಡಾ.ವಾಯ್.ಎ.ದೇವರುಷಿ ಮಾತನಾಡಿ ಎನ್‌ಎಸ್‌ಎಸ್ ಸೇವಾ ಗುಣ ಕಲಿಸಿದರೆ ಎನ್‌ಸಿಸಿ ರಕ್ಷಣೆ ಮಾಡುವ ಕೌಶ್ಯಲತೆ ತಿಳಿಸಿಕೊಡುತ್ತದೆ ಎಂದರು.

ಎನ್‌ಎಸ್‌ಎಸ್ ಅಧಿಕಾರಿ ಡಾ.ಮಂಜು ಮಾಲೇಕರ ಪ್ರಾಸ್ತಾವಿಕ ಮಾತನಾಡಿದರು.

ಪ್ರೊ.ನಾಗಮಣಿ,ಪ್ರೊ.ಸುಜಾತಾ,ಪ್ರೊ.ಮೇಘರಾಣಿ ಸೇರಿದಂತೆ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.ಪ್ರೊ. ಅರುಣ ಶಿಂದೆ ಪ್ರಾರ್ಥನೆ ಗೀತೆ ನುಡಿದರು. ಡಾ.ಶ್ರೀನಿವಾಸ ಬೇಂದ್ರೆ ನಿರೂಪಿಸಿದರು.ಪ್ರೊ.ಲಕ್ಷ್ಮಣ ಬೇಂದ್ರೆ ವಂದಿಸಿದರು.

# ಸಂತೋಷ್‌ಗೆ ಮುಖ್ಯಮಂತ್ರಿ ಪದಕ

- ಮಲ್ಲಮ್ಮ ನುಡಿ ವಾರ್ತೆ ಬೀದರ



ಬೀದರ ಜಿಲ್ಲೆಯಲ್ಲಿ ಅತ್ಯುತ್ತಮ ಕಾರ್ಯನಿರ್ವಹಿಸಿದ ಇಲ್ಲಿನ ಜಿಲ್ಲಾ ಪೊಲೀಸ್ ಕಚೇರಿಯ ಜಿಲ್ಲಾ ಗುಪ್ತದಳ ವಿಭಾಗ (ಡಿಎಸ್‌ಬಿ) ಹೆಡ್ ಕಾನ್ಸಟೇಬಲ್ ಸಂತೋಷಮಹಾರಾಜ ಅವರಿಗೆ ಗುರುವಾರ ಬೆಂಗಳೂರಿನ ಕೊರಮಂಗಲದಲ್ಲಿರುವ ಕೆಎಸ್ ಆರ್ ಪಿ ಪರೆಡ್ ಮೈದಾನದಲ್ಲಿ 2025ನೇ ಸಾಲಿನ ಮುಖ್ಯಮಂತ್ರಿ ಪದಕ ನೀಡಿ ಸಿಎಂ ಸಿದ್ದರಾಮಯ್ಯ ಅವರು ಗೌರವಿಸಿದರು,

ಸಂತೋಷ ಮಹಾರಾಜ ಕ್ರಿಯಾಶೀಲ ಪೊಲೀಸ್ ಪೇದೆ ಯಾಗಿದ್ದಾರೆ.

ಡಿಎಸ್‌ಬಿ ಘಟಕದ ಸೇವೆ ಮೂಲಕ ಅಪರಾಧ ಚಟುವಟಿಕೆಗಳಿಗೆ ತಡೆಗಟ್ಟುವ ಜೊತೆಗೆ ವಿವಿಧ ಅಪರಾಧದ ಕಾರ್ಯಗಳು, ಸಮಾಜದಲ್ಲಿಯ ವಿವಿಧ ಚಟುವಟಿಕೆ ಮೇಲೆ ನಿಗಾ ಇರಿಸಿ ಕುರಿತು ಮೇಲಧಿಕಾರಿಗಳಿಗೆ ಸಮರ್ಪಕ ಮಾಹಿತಿ

ನೀಡಿ ಸಹಾಯ ಮಾಡಿದ್ದಕ್ಕಾಗಿ ಸಿಎಂ ಪದಕ ಗೌರವಕ್ಕೆ ಭಾಜನರಾಗಿದ್ದಾರೆ. ಬೀದರ್

ತಾಲೂಕಿನ ನವಲಾಸಪುರ ಗ್ರಾಮದ ಸಂತೋಷ ಮಹಾರಾಜ 2002ರಲ್ಲಿ ಪೊಲೀಸ್ ಇಲಾಖೆಗೆ ಸೇರಿದ್ದಾರೆ.ವಿವಿಧೆಡೆ ಇವರು ಉತ್ತಮ ಕರ್ತವ್ಯ ನಿರ್ವಹಣೆ ಮಾಡಿದ್ದಾರೆ.ಮುಖ್ಯಮಂತ್ರಿ ಪದಕ ಬಂದಿದ್ದು ನಮ್ಮ ಜವಾಬ್ದಾರಿ ಮತ್ತಷ್ಟು ಹೆಚ್ಚಿಸಿದೆ ಎಂದು ಸಂತೋಷ ಹಾಗೂ ಸಂತಸ ಹಂಚಿಕೊಂಡಿದ್ದಾರೆ.

ಇದಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು ಸಂತಸ ವ್ಯಕ್ತಪಡಿಸಿದರು,

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ಶಿಕ್ಷಣವೇ ಮಕ್ಕಳಿಗೆ ನಿಜವಾದ ಸಂಪತ್ತು

ಪ್ರತಿ ಪಾಲಕರೂ ತಮ್ಮ ಮಕ್ಕಳ ಭವಿಷ್ಯ ಉಜ್ವಲವಾಗಿರಲಿ ಎಂದು ಕನಸು ಕಾಣುತ್ತಾರೆ. ಆ ಕನಸನ್ನು ನನಸು ಮಾಡುವ ಪ್ರಮುಖ ಮಾರ್ಗವೇ ಶಿಕ್ಷಣ. ಮಕ್ಕಳಿಗೆ ಆಸ್ತಿ, ಹಣ, ಜಮೀನು ನೀಡುವುದಕ್ಕಿಂತ ಉತ್ತಮ ಶಿಕ್ಷಣ ನೀಡುವುದು ಅವರ ಜೀವನಕ್ಕೆ ನಿಜವಾದ ಸಂಪತ್ತನ್ನು ನೀಡಿದಂತಾಗುತ್ತದೆ.

ಶಿಕ್ಷಣವು ವ್ಯಕ್ತಿಯ ಚಿಂತನೆಗೆ ಬೆಳಕು ನೀಡುತ್ತದೆ. ಜ್ಞಾನದಿಂದ ವ್ಯಕ್ತಿಯ ವ್ಯಕ್ತಿತ್ವ ಬೆಳೆದು, ಸಮಾಜದಲ್ಲಿ ಗೌರವಯುತ ಸ್ಥಾನವನ್ನು ಪಡೆಯಲು ಸಾಧ್ಯವಾಗುತ್ತದೆ. ಹಣ ಅಥವಾ ಆಸ್ತಿ ಯಾವುದಾದರೂ ಒಂದು ದಿನ ಕಡಿಮೆಯಾಗಬಹುದು, ಆದರೆ ಶಿಕ್ಷಣದಿಂದ ಬಂದ ಜ್ಞಾನ ಮತ್ತು ಕೌಶಲ್ಯ ಜೀವನಪೂರ್ತಿ ವ್ಯಕ್ತಿಯ ಜೊತೆಯಲ್ಲೇ ಇರುತ್ತದೆ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ಶಿಕ್ಷಣವಿಲ್ಲದೆ ಮುಂದುವರಿಯುವುದು ಕಷ್ಟಕರವಾಗಿದೆ. ಆದ್ದರಿಂದ ಪಾಲಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಶಾಲೆ–ಕಾಲೇಜುಗಳಲ್ಲಿ ಓದಿಸುವುದಷ್ಟೇ ಅಲ್ಲದೆ, ನೈತಿಕ ಮೌಲ್ಯಗಳು, ಶಿಸ್ತು, ಪರಿಶ್ರಮ ಮತ್ತು ಮಾನವೀಯತೆ ಎಂಬ ಗುಣಗಳನ್ನು ಕೂಡ ಮಕ್ಕಳಿಗೆ ಕಲಿಸಬೇಕು.

ಶಿಕ್ಷಣ ಪಡೆದ ಮಕ್ಕಳು ತಮ್ಮ ಕುಟುಂಬವನ್ನಷ್ಟೇ ಅಲ್ಲದೆ ಸಮಾಜ ಮತ್ತು ದೇಶದ ಅಭಿವೃದ್ಧಿಗೂ ಕಾರಣರಾಗುತ್ತಾ–ರೆ. ಆದ್ದರಿಂದ ಪ್ರತಿಯೊಬ್ಬ ಪಾಲಕರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರನ್ನು ಜ್ಞಾನದಲ್ಲಿ ಶ್ರೀಮಂತರನ್ನಾಗಿ ಮಾಡುವುದು ಕಾಲದ ಅಗತ್ಯವಾಗಿದೆ.

# ಅಂತರಂಗ ಶುದ್ಧಿಗೆ ಪ್ರವಚನ ಸಹಕಾರಿ



> "ಅನುಭಾವಿ ಮತ್ತು ಉತ್ತಮ ವಾಗ್ಮಿಗಳು ಆಗಿರುವ ಶಿವಾನಂದ ಸ್ವಾಮೀಜಿ ಅವರು 20 ದಿವಸ ನಡೆಸಿ ಕೊಡುವ ಪ್ರವಚನಕ್ಕೆ ಭಕ್ತರು ಶಿಸ್ತು ಜತೆಗೆ ಸಮಯ ಪಾಲಿಸಿ ಪ್ರವಚನ ಆಲಿಸಬೇಕು.
> ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ಭಾಲ್ಕಿ

- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪ್ರತಿಯೊಬ್ಬರ ಅಂತರಂಗ ಶುದ್ಧಿಗೆ ಪ್ರವಚನ ಸಹಕಾರಿಯಾಗಿದೆ. ಹಾಗಾಗಿ ಒತ್ತಡದ ಬದುಕಿನ ನಡುವೆ ಬಿಡುವು ಮಾಡಿಕೊಂಡು ಪ್ರವಚನ ಆಲಿಸಬೇಕು ಎಂದು ತಳವಾಡೆ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಶೈಲಜಾ ಡಾ.ಅನಿಲಕುಮಾರ ತಳವಾಡೆ ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಹಿರೇಮಠ ಸಂಸ್ಥಾನ ಮತ್ತು ಅಭಿನಂದನಾ ಸಮಿತಿ ವತಿಯಿಂದ ಬಸವ ಜಯಂತಿ, ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ, ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಬುಧವಾರ ಆಯೋಜಿಸಿದ್ದ ಬಸವ ದರ್ಶನ ಪ್ರವಚನ ಉದ್ಘಾಟಿಸಿ ಅವರು ಮಾತನಾಡಿದರು.

12ನೇ ಶತಮಾನದಲ್ಲಿ ಬಸವಾದಿ ಶರಣರು ತಮ್ಮ ಅನುಭಾವದ ಮೂಲಕ ರಚಿಸಿರುವ ವಚನಗಳಲ್ಲಿ ನಿಜ ಜೀವನದ ಅರ್ಥ ಅಡಗಿವೆ. ಹಾಗಾಗಿ ಪ್ರತಿಯೊಬ್ಬರು ಬಸವಾದಿ ಶರಣರ ಕುರಿತು ನಡೆಯುವ ಪ್ರವಚನದ ಸಾರವನ್ನು ಆಲಿಸಿ ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಸುಂದರವಾಗಿ ರೂಪಗೊಳ್ಳಲಿದೆ ಎಂದು ತಿಳಿಸಿದರು.ಬಸವ ಗುರುವಿನ ಪೂಜೆ ನೆರವೇರಿಸಿದ ಯುವ ಮುಖಂಡ ಪ್ರಸನ್ನ ಖಂಡ್ರೆ ಮಾತನಾಡಿ, ಪೂಜ್ಯರು, ಅನುಭಾವಿಗಳು ನಡೆಸಿ ಕೊಡುವ ಪ್ರವಚನಗಳಲ್ಲಿ ಬದುಕಿನ ಮೌಲ್ಯಗಳು ಅಡಗಿರುತ್ತದೆ ಎಂದು ತಿಳಿಸಿದರು.

ನೇತೃತ್ವ ವಹಿಸಿದ್ದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಾತನಾಡಿ, ಪ್ರವಚನ ಆಲಿಸುವುದರಿಂದ ಮನಸ್ಸು ವಿಕಾಸಗೊಳ್ಳುತ್ತದೆ. ಬದುಕಿನಲ್ಲಿ ಶಾಂತಿ ನೆಮ್ಮದಿ ಲಭಿಸುತ್ತದೆ ಎಂದು ತಿಳಿಸಿದರು.

ಹಂದಿಗುಂದ ಹಂದಿಗುಂದ ಸಿದ್ದೇಶ್ವರ ಮಠದ ಶಿವಾನಂದ ಸ್ವಾಮೀಜಿ ಮಾತನಾಡಿ, 12ನೇ ಶತಮಾನದಲ್ಲಿ ದುರ್ಬಲವರ್ಗ ಮತ್ತು ಸಮಾಜದಲ್ಲಿ ತುಳಿತಕ್ಕೊಳಗಾದವರನ್ನು ಮೇಲೆತ್ತುವ ಕೆಲಸ ಮಾಡಿದ ವಿಶ್ವಗುರು ಬಸವಣ್ಣನವರನ್ನು ಪ್ರತಿಯೊಬ್ಬರು ಧರ್ಮಗುರು ಎಂದು ಒಪ್ಪಿಕೊಳ್ಳಬೇಕು ಎಂದು ತಿಳಿಸಿದರು.ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿದರು. ಅನ್ನದಾಸೋಹ ಶಾರದಾ ಹೋಟೆಲ್‌ನ ಮಾಲೀಕರಾದ ಶ್ರೀಮತಿ ಶಾರದಾ ಬಾಬುರಾವ ಹುಣಜೆ ಅವರು ಮೊದಲ ದಿನದ ಅನ್ನದಾಸೋಹ ವಹಿಸಿ ಕೊಂಡಿದ್ದರು. ಹಿರಿಯ ಮುಖಂಡ ಸುಭಾಷ ಕಾರಾಮುಂಗೆ ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಜಯರಾಜ ದಾಬಶೆಟ್ಟೆ, ಶಾರದಾ ಹೋಟೆಲ್‌ನ ಮಾಲೀಕ ಬಾಬುರಾವ ಹುಣಜೆ, ಶಾರದಾ ಹುಣಜೆ ಸೇರಿದಂತೆ ಹಲವರು ಇದ್ದರು.ಗುರುಪ್ರಸಾದ ಶಾಲೆಯ ಮಕ್ಕಳು ವಚನ ಗಾಯನ ನಡೆಸಿ ಕೊಟ್ಟರು.ಪ್ರವಚನ ಸೇವಾ ಸಮಿತಿ ಅಧ್ಯಕ್ಷೆ ಪಂಕಜಾ ಶಿವು ಲೋಖಂಡೆ ಸ್ವಾಗತಿಸಿದರು. ದೀಪಕ ಠಮಕೆ ನಿರೂಪಿಸಿದರು. ರೇಖಾ ಮಹಾಜನ್ ವಂದಿಸಿದರು.

ಕಲಾವಿದರಾದ ಸಂಗಮೇಶ ಪಾಟೀಲ್, ತೋಂಟೆಂದ್ರಕುಮಾರ ಕರಡಕಲ್ ಸಂಗೀತ ಸೇವೆ ನಡೆಸಿ ಕೊಟ್ಟರು.

# ಬಸವಜ್ಯೋತಿ ಯಾತ್ರೆಗೆ ವೈಭವದ ಸ್ವಾಗತ



- ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ

ತಾಲೂಕಿನ ನಾವದಗಿ ಗ್ರಾಮದಲ್ಲಿ ಹಿರೇಮಠ ಸಂಸ್ಥಾನ ಭಾಲ್ಕಿಯಿಂದ ಆಗಮಿಸಿದ ಬಸವಜ್ಯೋತಿ ಯಾತ್ರೆಗೆ ವೈಭವದಿಂದ ಸ್ವಾಗತಿಸಿಕೊಳ್ಳಲಾಯಿತು.

ವಚನಜಾತ್ರೆ 2026, ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ, ಡಾ। ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಹಾಗು ವಿಶ್ವಗುರು ಬಸವಣ್ಣನವರ ಜಯಂತಿ ಮಹೋತ್ಸವ ನಿಮಿತ್ಯ ನಡೆಯುವ ಉತ್ಸವದ ಪೂರ್ವಭಾವಿಯಾಗಿ ಜಿಲ್ಲೆಯಾದ್ಯಂತ ಬಸವಜ್ಯೋತಿ ಯಾತ್ರೆ ನಡೆಸಲಾಗುತ್ತಿದೆ. ಈ ನಿಟ್ಟಿನಲ್ಲಿ ಬುಧವಾರ ಅಖಿಲಭಾರತ ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಪ್ರೊ। ಶಂಭುಲಿಂಗ ಕಾಮಣ್ಣ, ವಚನ ಸಾಹಿತ್ಯ ಪರಿಷತ್ ಅಧ್ಯಕ್ಷ ಗುಂಡಪ್ಪ ಸಂಗಮಕರ ರವರ ನೇತೃತ್ವದಲ್ಲಿ ಭಾಲ್ಕಿಯಿಂದ ನಾವದಗಿಯ ವರೆಗೆ ಬಸವಜ್ಯೋತಿ ಯಾತ್ರೆ ನಡೆಸಲಾಗಿತ್ತು. ಬುದವಾರ ಸಂಜೆ ನಾವದಗಿಗೆ ಆಗಮಿಸಿದ ಬಸವಜ್ಯೋತಿ ಯಾತ್ರೆಗೆ ಗ್ರಾಮಸ್ಥರೆಲ್ಲರೂ ಸೇರಿ ವೈಭವದಿಂದ ಸ್ವಾಗತಿಸಿಕೊಂಡರು.ಗ್ರಾಮದ ಸುಮಂಗಲೆಯರು ಕುಂಭ ಕಳಸಹೊತ್ತು, ರೇವಪ್ಪಯ್ಯಾ ಮಂದಿರದ ಭಜನಾ ಮಂಡಳಿಯವರು ವಾದ್ಯವೃಂದದೊಂದಿಗೆ ಭಜನೆ ಮಾಡುತ್ತ ಗ್ರಾಮದ ವಿವಿಧ ಬೀದಿಗಳಲ್ಲಿ ಬಸವಜ್ಯೋತಿಯನ್ನು ಮೆರವಣಿಗೆ ಮೂಲಕ ಸಂಚರಿಸಿದರು. ಮೆರವಣಿಗೆಯು ಗ್ರಾಮದ ಹನುಮಾನ ದೇವಾಲಯದಿಂದ ಶ್ರೀ ರೇವಪ್ಪಯ್ಯಾ ಸ್ವಾಮಿಗಳ ದೇವಸ್ಥಾನದ ವರೆಗೆ ವೈಭವದಿಂದ ಸಾಗಿತು. ಈ ಸಂದರ್ಭದಲ್ಲಿ ಪ್ರಮುಖರಾದ ಪ್ರೊ। ಶಂಭುಲಿಂಗ ಕಾಮಣ್ಣ, ಗುಂಡಪ್ಪ ಸಂಗಮಕರ, ಕಾಶಿನಾಥ ಭೂರೆ, ಶಿಖರೇಶ್ವರ ಶಟಕಾರ, ನಾಗಶೆಟ್ಟಿ ಚೋಳಾ, ರಮೇಶ ಬಾಬು, ಶಿವಾನಂದ ಪರಶಣೆ, ಗ್ರಾ.ಪಂ. ಅಧ್ಯಕ್ಷ ರಾಜಶೇಖರ ಬಿರಾದಾರ, ನಾವದಗಿಯ ಮುಖಂಡರಾದ ಶಾಂತವೀರ ಸ್ವಾಮಿ, ರಾಜೇಪ್ಪ ಶೇರಿಕಾರ, ಮಲ್ಲಿಕಾರ್ಜುನ ಕನಕಟ್ಟೆ, ಶಿವರಾಜ ಬಿರಾದಾರ (ನಿಂಗಯ್ಯನೋರ), ಮಲ್ಲಿಕಾರ್ಜುನ ಉಚ್ಚೆಕರ, ಬಸಪ್ಪ ಧಾಬಶೆಟ್ಟಿ, ಶಿವರಾಜ ಕಾಶೆಪ್ಪ ಬಿರಾದಾರ, ಶಿವಪುತ್ರ ದಾಬಶೆಟ್ಟಿ, ಪ್ರವೀಣಾಬಾಯಿ ರಾಜಶೇಖರ ಬಿರಾದಾರ, ಶ್ರೀದೇವಿ ವಿಶ್ವನಾಥ ಮೊಳಕೇರೆ, ಮಹಾದೇವ ಮೂಲಗೆ, ನಾಗಯ್ಯ ಸ್ವಾಮಿ, ಸೇರಿದಂತೆ ಹಲವರು ಇದ್ದರು.

> "ಬರುವ ಏ.22 ರಂದು ಬಸವಜಯಂತಿ, ವಚನ ಜಾತ್ರೆ 2026, ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ, ಡಾ। ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಒಟ್ಟಿಗೆ ನಾಲ್ಕು ಉತ್ಸವಗಳ ಸಂಗಮ ಭಾಲ್ಕಿಯ ಚನ್ನಬಸವಾಶ್ರಮದಲ್ಲಿ ನಡೆಯಲಿದೆ ಭಕ್ತಾದಿಗಳು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಪುನಿತರಾಗಬೇಕು.
> ಪ್ರೊ। ಶಂಭುಲಿಂಗ ಕಾಮಣ್ಣ, ಜಿಲ್ಲಾಧ್ಯಕ್ಷರು, ಶರಣ ಸಾಹಿತ್ಯ ಪರಿಷತ್ ಬೀದರ.

# ತೆರಿಗೆ ಪಾವತಿಸಿ ಶೇಕಡಾ 5% ರಿಯಾಯಿತಿ ಪಡೆಯಿರಿ

- ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ಸರ್ಕಾರದ ಆದೇಶದಂತೆ ಪಟ್ಟಣದ ಎಲ್ಲಾ ಸಾರ್ವಜನಿಕರು ಪ್ರಸ್ತುತ ವರ್ಷದ 2026–27ನೇ ಸಾಲಿನ ತಮ್ಮಗೆ ಸಂಬಂಧಿಸಿದ ಆಸ್ತಿಯ ತೆರಿಗೆಯನ್ನು ದಿನಾಂಕ: 30–04–2026ರ ಒಳಗೆ ಪಾವತಿಸಿ ಸರ್ಕಾರದಿಂದ

ಆಸ್ತಿ ತೆರಿಗೆಯಲ್ಲಿ ಶೇ.5% ರಷ್ಟು ರಿಯಾಯಿತಿಯ ಸದುಪಯೋಗ ಪಡೆದುಕೊಳ್ಳಬೇಕು ಹಾಗೂ ಈ ಹಿಂದಿನ ವರ್ಷ ಆಸ್ತಿ ತೆರಿಗೆ, ನೀರಿನ ತೆರಿಗೆ ಮತ್ತು ಉದ್ದಿಮೆ ಪರವಾನಿಗೆ ತೆರಿಗೆಯನ್ನು ಕೂಡ ಪಾವತಿಸಿ ಪಟ್ಟಣದ ಅಭಿವೃದ್ಧಿಗೆ ಸಹಕರಿಸಬೇಕೆಂದು ಪುರಸಭೆ ಮುಖ್ಯಾಧಿಕಾರಿ ಸತೀಶ ಗುಡ್ಡೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹಿಂದಿ ಅಂಕಗಳನ್ನು ಪರಿಗಣಿಸಲು ಆಗ್ರಹ



- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪಟ್ಟಣದ ಬಿಇಒ ಕಛೇರಿಯಲ್ಲಿ 2026ರ ಎಸ್‌ಎಸ್‌ಎಲ್‌ಸಿ ಹಿಂದಿ ಮುಖ್ಯ ಪರೀಕ್ಷೆಯ ವಿಷಯದ ಅಂಕಗಳನ್ನು ಯಥಾವತ್ತಾಗಿ ಮುಂದುವರೆಸಲು ಆಗ್ರಹಿಸಿ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಕರ್ನಾಟಕ ರಾಜ್ಯ ಪ್ರೌಢಶಾಲಾ ಶಿಕ್ಷಕರ ಸಂಘದ ವತಿಯಿಂದ ಬರೆದ ಮನವಿ ಪತ್ರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ರವಾನಿಸಲಾಯಿತು.

ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ ಇತ್ತೀಚೆಗೆ 2026 ಎಸ್‌ಎಸ್‌ಎಲ್‌ಸಿ ಹಿಂದಿ ಮುಖ್ಯ ಪರೀಕ್ಷೆಯ ವಿಷಯದ ಅಂಕಗಳನ್ನು ಕೇವಲ ಗ್ರೇಡಿಂಗ್‌ಗಳಿಗಾಗಿ ಮಾತ್ರ ಪರಿಗಣಿಸಲಾಗುತ್ತದೆ ಎಂದು ಆದೇಶಿಸಿದ್ದು ಅವೈಜ್ಞಾನಿಕವಾಗಿದೆ. ಕಾರಣ ಹಿಂದಿ ವಿಷಯ ಬೋಧನೆ ಮಾಡುವ ಶಿಕ್ಷಕರ ವೃತ್ತಿ ಬದುಕು ಬೀದಿ ಪಾಲಾಗುತ್ತದೆ. ಮತ್ತು ವರ್ಷವಿಡಿ ಹಿಂದಿ ವಿಷಯ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಘೋರ ಅನ್ಯಾಯ ಮಾಡಿದಂತಾಗುತ್ತದೆ.ಹಿಂದಿ ಕೇವಲ ಒಂದು ವಿಷಯವಲ್ಲ.ಅದು ರಾಷ್ಟ್ರದ ವಿವಿಧ ರಾಜ್ಯಗಳ ನಡುವೆ ಸಂಪರ್ಕ ಸಾಧಿಸುವ ಪ್ರಮುಖ ಭಾಷೆಯಾಗಿದೆ.ದಕ್ಷಿಣ ಭಾರತದ ಅನೇಕ ರಾಜ್ಯಗಳಲ್ಲಿ ಬಹು ಸಂಖ್ಯಾತ ಜನರ ವ್ಯವಹಾರಿಕ ಭಾಷೆ ಹಿಂದಿಯಾಗಿದೆ.ಆದುದರಿಂದ ಈ ಹಿಂದೆ ಶಿಕ್ಷಣ ಇಲಾಖೆಯಲ್ಲಿದ್ದ ತ್ರಿಭಾಷಾ ಸೂತ್ರವನ್ನು ಯಥಾವತ್ತಾಗಿ ಮುಂದುವರೆಸಿ ವಿದ್ಯಾರ್ಥಿ ,ಶಿಕ್ಷಕರಿಗೆ ನ್ಯಾಯ ದೊರಕಿಸಿ ಕೊಡಬೇಕು ಎಂದು ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ದತ್ತಾತ್ರಿ ಕಾಟಕರ ಸೇರಿದಂತೆ ಇತರೆ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

ದಿಲೀಪ್ ಬಿರಾದಾರ,ಹಣಮಂತ ಕಾರಾಮುಂಗೆ, ನಂದ ಕುಮಾರ್ ಜಾದವ್, ಅನಿಲ್ ಮಾಟೆ ,ಬಸಿರುದ್ದೀನ್ ,ಸಂಜೀವ್ ಉಪಾಸೆ, ಕಿಶೋರ್ ರುಪ್ನೂರೆ ಆಶಾ ರಾಥೋಡ್, ಸ್ವರೂಪ ರಾಣಿ, ಕಾಳಿದಾಸ ಶಿಂಧೆ ವೈಭವ ಪಾಂಡ್ರೆ, ಶ್ರೀಮಂತ ಇನ್ನಿತರರು ಉಪಸ್ಥಿತರಿದ್ದರು.

# ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಹಸಿರು ಪರದೆ ಅಳವಡಿಸುವಂತೆ ಸುನೀಲ ಭಾವಿಕಟ್ಟಿ ಮನವಿ



- ಮಲ್ಲಮ್ಮ ನುಡಿ ವಾರ್ತೆ, ಬೀದರ್

ನಗರದಲ್ಲಿ ದಿನದಿಂದ ದಿನಕ್ಕೆ ಬೇಸಿಗೆಯ ಬಿಸಿಲಿನ ತಾಪ ಹೆಚ್ಚುತ್ತಿದ್ದು, ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ. ವಿಶೇಷವಾಗಿ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ನಿಲ್ಲಬೇಕಾಗುವ ದ್ವಿಚಕ್ರ ವಾಹನ ಸವಾರರು ಉರಿ ಬಿಸಿಲಲ್ಲಿ ನಿಂತುಕೊಳ್ಳುವುದು ಬಹಳ ಕಷ್ಟಕರವಾಗಿದೆ. ಹೀಗಾಗಿ ನಗರದ ಪ್ರಮುಖ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ಹಸಿರು ಪರದೆಯ ನೆರಳಿನ ವ್ಯವಸ್ಥೆ ಕಲ್ಪಿಸಬೇಕು ಎಂದು ಗುರುವಾರ ಬೆಳಿಗ್ಗೆ ಕರ್ನಾಟಕ ಯುವ ಸಂಘ ಸಂಸ್ಥೆಗಳ ಒಕ್ಕೂಟದಿಂದ ಬರೆದ ಮನವಿ ಪತ್ರವನ್ನು ಮಹಾನಗರ ಪಾಲಿಕೆ ಆಯುಕ್ತರಾದ ಮುಕುಲ್ ಜೈನ್ ಅವರಿಗೆ ಸಲ್ಲಿಸಲಾಯಿತು.

ದಿನದಿಂದ ದಿನಕ್ಕೆ ತಾಪಮಾನ ಹೆಚ್ಚಾಗುತ್ತಿದ್ದು, ಸದ್ಯವೇ ಸುಮಾರು 35 ರಿಂದ 38 ಡಿಗ್ರಿ ಸೆಲ್ಸಿಯಸ್ ತಲುಪಿದೆ. ಇನ್ನೂ ಮುಂದಿನ ದಿನಗಳಲ್ಲಿ ಬಿಸಿಲಿನ ತಾಪ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಇಂತಹ ಸಂದರ್ಭದಲ್ಲಿ ಜನರು ಮನೆಯಿಂದ ಹೊರ ಬಂದರೆ ಟ್ರಾಫಿಕ್ ಸಿಗ್ನಲ್ ಬಳಿ ನಿಲ್ಲುವಾಗ ಬಿಸಿಲಿನ ತಾಪ ಸಹಿಸಲು ಆಗದ ಪರಿಸ್ಥಿತಿ ಎದುರಾಗುತ್ತದೆ.

ನಗರದ ಅಂಬೇಡ್ಕರ್ ಚೌಕ್, ಭಗತ್ ಸಿಂಗ್ ಚೌಕ್, ಬಸವೇಶ್ವರ ಚೌಕ್ ಹಾಗೂ ಗುಂಪಾ ರಿಂಗ್ ರೋಡ್ ಸಿಗ್ನಲ್ ಬಳಿ ವಾಹನ ಸಂಚಾರ ಹೆಚ್ಚಿರುವ ಪ್ರಮುಖ ಸ್ಥಳಗಳಾಗಿವೆ. ಇಲ್ಲಿ ಸಿಗ್ನಲ್ ಬೀಳುವಾಗ ನೂರಾರು ವಾಹನಗಳು ಸಾಲಾಗಿ ನಿಂತುಕೊಳ್ಳುತ್ತವೆ. ಈ ವೇಳೆ ಸವಾರರು ಬಿರು ಬಿಸಿಲಲ್ಲೇ ಕಾಯಬೇಕಾಗುತ್ತದೆ.

ಹೀಗಾಗಿ ಈ ಪ್ರಮುಖ ವೃತ್ತಗಳಲ್ಲಿ ಹಸಿರು ನೆರಳಿನ ಪರದೆ ಅಳವಡಿಸಿದರೆ ಜನರಿಗೆ ತುಂಬಾ ಅನುಕೂಲವಾಗಲಿದೆ ಎಂದು ತಿಳಿಸಿದ್ದಾರೆ.

ಈಗಾಗಲೇ ರಾಜ್ಯದ ಕೆಲ ಜಿಲ್ಲೆಗಳಲ್ಲಿ ಬೇಸಿಗೆಯ ಉರಿ ಬಿಸಿಲಿನಿಂದ ವಾಹನ ಸವಾರರನ್ನು ರಕ್ಷಿಸಲು ಟ್ರಾಫಿಕ್ ಸಿಗ್ನಲ್‌ಗಳಲ್ಲಿ ನೆರಳಿನ ಪರದೆ ಅಳವಡಿಸುವ ಕ್ರಮ ಕೈಗೊಳ್ಳಲಾಗಿದೆ. ಅದೇ ಮಾದರಿಯನ್ನು ಬೀದರ ಮಹಾನಗರ ಪಾಲಿಕೆ ಕೂಡ ಅನುಸರಿಸಿದರೆ ನಗರದ ಜನರಿಗೆ ತುಂಬಾನೇ ಉಪಯೋಗವಾಗಲಿದೆ ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ಯುವ ಸಂಘ ಸಂಸ್ಥೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಸುನೀಲ ಭಾವಿಕಟ್ಟಿ, ಮುಖಂಡರಾದ ಬಾಬುರಾವ್ ಕುಂಬಾರ್, ಗಣಪತಿ ಶಕ್ರಪ್ಪನೋರ್, ಚಂದ್ರಕಾಂತ ಹಳ್ಳಿಖೇಡಕರ್, ಶರಣಬಸವ.ಕೆ, ಇದ್ದರು.

# ಅಕ್ಕಮಹಾದೇವಿ ವಿಚಾರಧಾರೆ ಸ್ತ್ರೀಕುಲಕ್ಕೆ ಮಾದರಿ: ಭಾಲ್ಕಿ ಶ್ರೀ



- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಅಕ್ಕಮಹಾದೇವಿ ಅವರ ವಿಚಾರಧಾರೆಗಳು ಸ್ತ್ರೀಕುಲಕ್ಕೆ ಮಾದರಿಯಾಗಿವೆ ಎಂದು ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದ ಅಕ್ಕಮಹಾದೇವಿ ವೃತ್ತದಲ್ಲಿ ಅಕ್ಕಮಹಾದೇವಿ ಜಯಂತಿ ನಿಮಿತ್ತ ಗುರುವಾರ ಅಕ್ಕಮಹಾದೇವಿ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ ಅವರು ಮಾತನಾಡಿದರು.

ಅಕ್ಕಮಹಾದೇವಿಯ ವೈಚಾರಿಕ ಪ್ರಜ್ಞೆಯ ಬದುಕು ಇಂದಿಗೂ ವಿಸ್ಮಯವಾಗಿದ್ದು, ಅಕ್ಕ ಜಗದ ಸ್ತ್ರೀ ಕುಲದ ಬೆಳಕಾಗಿದ್ದಾರೆ. ಬದುಕಿನ ಕಷ್ಟಗಳು, ಸುಖ–ದುಃಖಗಳನ್ನು ಸಮರ್ಥವಾಗಿ ಎದುರಿಸಲು ಅಕ್ಕನ ವಚನಗಳು ಮತ್ತು ಬದುಕು ಇಂದಿನ ಮಹಿಳೆಯರಿಗೆ ಸ್ಪೂರ್ತಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಮಾಜಿ ಅಧ್ಯಕ್ಷ ಶಶಿಧರ ಕೋಸಂಬೆ, ತಾಲೂಕು ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷ ಬಸವರಾಜ ಮರೆ, ತಾಲೂಕು ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷೆ ಮಲ್ಲಮ್ಮ ನಾಗನಕೇರೆ, ಕಸಾಪ ರಾಜ್ಯ ಮಹಿಳಾ ಪ್ರತಿನಿಧಿ ಮಲ್ಲಮ್ಮ ಆರ್ ಪಾಟೀಲ್, ಪ್ರಮುಖರಾದ ಸುವರ್ಣಾ ಬಲ್ಲೂರೆ, ಮಂಗಲಾ ಜಡಗೆ, ರೇಖಾ ಮಹಾಜನ, ನಲೀನಿ ಕಲಬುರಗಿ, ಮೇಘಾ ಮಾತಾಜೀ, ಬಸಮ್ಮ ತಾಯಿ, ಮಧು ವಾಲೆ ಸೇರಿದಂತೆ ಹಲವರು ಇದ್ದರು.

# ಶಿವಯೋಗಿಗಳ ಸ್ಮಾರಕ ನಿರ್ಮಿಸುವಂತೆ ಮನವಿ



• ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ

ಶೈಕ್ಷಣಿಕ ಕ್ರಾಂತಿಯ ಹರಿಕಾರ, ಅಕ್ಷರ ದಾಸೋಹಿ ಬಂಥನಾಳದ ಲಿಂಗೈಕ್ಯ ಸಂಗನಬಸವ ಶಿವಯೋಗಿಗಳು ವಿಜಯಪುರ ಜಿಲ್ಲೆಯಾದ್ಯಂತ ಶಿಕ್ಷಣ ಕ್ರಾಂತಿ ಮಾಡಿದ್ದಾರೆ. ಅಂತಹ ಮಹಾ ಪುರುಷರ ಜೀವನ ಆದರ್ಶಗಳು ನಮ್ಮ ಯುವ ಪೀಳಿಗೆಗೆ ತಿಳಿಸುವಂತೆ ಶಾಶ್ವತವಾಗಿ ಉಳಿಯಲು ಜಿಲ್ಲೆಯಲ್ಲಿ ಶ್ರೀ ಸಂಗನಬಸವ ಶಿವಯೋಗಿಗಳ ಭವ್ಯ ಸ್ಮಾರಕವಾಗಬೇಕು.ಈ ನಿಟ್ಟಿನಲ್ಲಿ ಸರಕಾರ ಚಿಂತನೆ ನಡೆಸಬೇಕು ಎಂದು ಸ್ಥಳೀಯ ವಿವೇಕ್ ಬ್ರಿಗೇಡ್ ಸಂಸ್ಥೆ ಗುರುವಾರ ಸರ್ಕಾರಕ್ಕೆ ಸ್ಥಳೀಯ ಗ್ರೇಡ್ 2 ತಹಶೀಲ್ದಾರ್ ಎಚ್ ಎಸ್ ಅರಕೇರಿ ಅವರ ಮೂಲಕ ಮನವಿ ಸಲ್ಲಿಸಿತು. ಈ ಸಂದರ್ಭದಲ್ಲಿ ವಿನೂತ ಕಲ್ಲೂರ ಮಾತನಾಡಿದರು.ಶಿವರುದ್ರಯ್ಯ ಹಿರೇಮಠ, ಮಣಿಕಂಠ ಕಲ್ಲೂರ, ರವಿಗೌಡ ಚಿಕ್ಕೊಂಡ, ಉಮೇಶ ಅವಟಿ, ಮಲ್ಲು ಬನಾಶಿ, ಶಿವಾನಂದ ಮ್ಯಾಗೇರಿ,ಸಂಗನಗೌಡ ಪಾಟೀಲ, ಸಚಿನ್ ಕಲ್ಲೂರ, ಭೀಮು ಬಸ್ತಾಳ, ಶಿವಾನಂದ್ ಭಟ್ಟಲ, ಶ್ರೀಶೈಲ ಕೋಲ್ಕರ, ಬಸವರಾಜ್ ಉಳ್ಳಾಗಡ್ಡಿ ಉಪಸ್ಥಿತರಿದ್ದರು.

# ತಳಕಲ್ಲ ತಳಬಾಳ ಗ್ರಾಮದ ಉಡು ರಾಜಮುಖಿ ಜಾತ್ರೆ

ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಜಿಲ್ಲೆ ಕುಕನೂರು ತಾಲ್ಲೂಕಿನ ತಳಕಲ್ಲ ಗ್ರಾಮದ ಅರಳಿಬೆಂಚಿ ಉಡರಾಜಮುಖಿ (ಉಡಚಮ್ಮದೇವಿ) ಜಾತ್ರಾ ಮಹೋತ್ಸವವಿದ್ದು, ಜಾತ್ರಾನಿಮಿತ್ತವಾಗಿ ರಥೋತ್ಸವ,ಸಾಮೂಹಿಕ ವಿವಾಹಗಳು,ತುಲಾಭಾರ, ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ವಿಶೇಷ ಪೂಜಾಲಂಕಾರ, ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ ಸಮಾರಂಭ ಹಾಗೂ ನಾಡಿನ ಗಣ್ಯರ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಶಿವಾನುಭವ ಧರ್ಮಸಭೆಯನ್ನು ಏರ್ಪಡಿಸಲಾಗಿದ್ದು ನಾಡಿನ ಗಣ್ಯರು ಪೂಜ್ಯರು ಭಾಗವಹಿಸಲಿದ್ದು ಅನ್ನ ಸಂತರ್ಪಣೆ ನೆರವೇರಲಿದ್ದು ಸಂಜೆ ಭಕ್ತ ಸಮೂಹದ ಮಧ್ಯೆ ನೂತನ ರಥೋತ್ಸವ ಜರುಗಲಿದೆ ಎಂದು ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ

# ಹೇಮಾವತಿ ಅಮ್ಮನವರ ಹುಟ್ಟು ಹಬ್ಬ: ಹಣ್ಣು ವಿತರಣೆ



• ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

ಸ್ಥಳೀಯ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ ವತಿಯಿಂದ ಧರ್ಮಾಧಿಕಾರಿಯವರ ಧರ್ಮಪತ್ನಿ ಹಾಗೂ ಅನೇಕ ಮಹಿಳೆಯರ ಬದುಕಿಗೆ ಜ್ಞಾನ ವಿಕಾಸ ಕಾರ್ಯಕ್ರಮದ ಮೂಲಕ ಆಶಾ ಕಿರಣವಾಗಿರುವ ಮಾತೃಶ್ರೀ ಹೇಮಾವತಿ ಹೆಗ್ಗಡೆ ಅಮ್ಮನವರ ಹುಟ್ಟು ಹಬ್ಬದ ಪ್ರಯುಕ್ತವಾಗಿ ತಾಲೂಕಿನಾದ್ಯಂತ ವಾತ್ಸಲ್ಯ ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ತಿಂಗಳು ಸಂಸ್ಥೆಯು ಅಸಹಾಯಕ ಹಾಗೂ ಅಶಕ್ತರಿಗೆ ತಾಲೂಕಿನಲ್ಲಿ 54 ಜನರಿಗೆ ತಲಾ ರೂ1000/–ಹಾಗೂ ಸಿರಿ ಧಾನ್ಯದಿಂದ ತಯಾರಿಸಿರುವ ಪುಷ್ಟಿಯನ್ನು ಪಡೆದುಕೊಳ್ಳುತ್ತಿರುವ ಮಾಶಾಸನ ಫಲಾನುಭವಿಗಳ ಮನೆ ಬಾಗಿಲಿಗೆ ತೆರಳಿ, ಆರೋಗ್ಯ ವಿಚಾರಿಸಿ ಹಣ್ಣು ಹಂಪಲುಗಳನ್ನು ವಿತರಿಸಲಾಯಿತು. ತಾಲೂಕಿನ ಯೋಜನಾಧಿಕಾರಿ ಪ್ರಸನ್ನ ಆರ್. ಮೇಲ್ವಿಚಾರಕರು ಜ್ಞಾನ ವಿಕಾಸ ಸಂಯೋಜಕಿ ಹಾಗೂ ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಸೈಬರ್ ಅಪರಾಧ ತಡೆಗೆ ಪೊಲೀಸ್ ಸನ್ನದ್ಧತೆ ಅಗತ್ಯ: ಷರೀಫ್

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಹೆಚ್ಚುತ್ತಿರುವ ಸೈಬರ್ ವಂಚನೆ ಮತ್ತು ಮಾದಕ ದ್ರವ್ಯ ಜಾಲದ ವಿರುದ್ಧ ಪರಿಣಾಮಕಾರಿ ಹೋರಾಟ ನಡೆಸಲು ಪೊಲೀಸ್ ಇಲಾಖೆ ತಂತ್ರಜ್ಞಾನದ ಸದುಪಯೋಗ ಮಾಡಿಕೊಳ್ಳಬೇಕು ಎಂದು ನಿವೃತ್ತ ಸಹಾಯಕ ಪೊಲೀಸ್ ಆಯುಕ್ತ ಮೊಹಮ್ಮದ್ ಇಸ್ಮಾಯಿಲ್ ಷರೀಫ್ ಹೇಳಿದರು.

ಗುರುವಾರ ನಗರದ ಸಶಸ್ತ್ರ ಪೊಲೀಸ್ ಕವಾಯತು ಮೈದಾನದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆ ಅಂಗವಾಗಿ ಗೌರವ ವಂದನೆ ಸ್ವೀಕರಿಸಿ ಮಾತನಾಡಿ, ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ 'ಮನೆ ಮನೆಗೆ ಪೊಲೀಸ್' ಯೋಜನೆಯಡಿ ನಿಖರ ದತ್ತಾಂಶ ಸಂಗ್ರಹಿಸುವುದು ಮತ್ತು ಅಪರಾಧಿಗಳ ಪತ್ತೆಗೆ 'ಹೂ ಈಸ್ ಹೂ' ಡೈರಿಗಳನ್ನು ನಿರ್ವಹಿಸುವುದು ಅತ್ಯಗತ್ಯ ಎಂದು ಅವರು ಸಲಹೆ ನೀಡಿದರು. ಜೊತೆಗೆ, ಪೊಲೀಸ್ ಸಿಬ್ಬಂದಿಗಳು ಆರ್ಥಿಕ ಭದ್ರತೆಗಾಗಿ ಉಳಿತಾಯದ ಕಡೆಗೆ ಹಾಗೂ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕೆಂದು ತಿಳಿಸಿದರು.

ಸೈಬರ್ ಅಪರಾಧ ಪ್ರಕರಣಗಳಲ್ಲಿ ಕರ್ನಾಟಕ ರಾಜ್ಯವು ದೇಶದಲ್ಲೇ ಎರಡನೇ ಸ್ಥಾನದಲ್ಲಿರುವುದು ಹಾಗೂ ಸಾವಿರಾರು ಕೋಟಿ ರೂಪಾಯಿ ವಂಚನೆ ನಡೆಯುತ್ತಿರುವುದು ಗಂಭೀರ ಆತಂಕಕಾರಿ ಸಂಗತಿ ಎಂದು ಅವರು ತಿಳಿಸಿದರು.

ಜಿಲ್ಲಾ ಪೊಲೀಸ್ ಅಧೀಕ್ಷಕ ಅಡ್ಡೂರು ಶ್ರೀನಿವಾಸಲು ಸ್ವಾಗತಿಸಿ ಮಾತನಾಡಿ, 1965ರ ಏಪ್ರಿಲ್ 2ರಂದು ಕರ್ನಾಟಕ ರಾಜ್ಯ ಪೊಲೀಸ್ ಕಾಯ್ದೆ ಜಾರಿಗೆ ಬಂದ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತಿದ್ದು, 1984ರಿಂದ ಪೊಲೀಸ್ ಧ್ವಜ ದಿನ ಮತ್ತು ಪೊಲೀಸ್ ಕಲ್ಯಾಣ ದಿನಗಳನ್ನು ಒಂದಾಗಿ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ., ಪೊಲೀಸ್ ಇಲಾಖೆ ಜನಸ್ನೇಹಿ ಸೇವೆಯ ಮೂಲಕ ಸಾರ್ವಜನಿಕರ ವಿಶ್ವಾಸ ಗಳಿಸಬೇಕು ಎಂದು ಅಭಿಪ್ರಾಯಪಟ್ಟರು. ಅತ್ಯುತ್ತಮ ಸೇವೆ ಸಲ್ಲಿಸಿದ 153 ಸಿಬ್ಬಂದಿಗಳಿಗೆ 'ಮುಖ್ಯಮಂತ್ರಿಗಳ ಚಿನ್ನದ ಪದಕ' ಹಾಗೂ 'ಡಿಜಿ ಕಮೆಂಡೇಶನ್ ಡಿಸ್ಕ್' ನೀಡಲಾಗುವುದು. ಅದರಲ್ಲಿ ನಮ್ಮ ಜಿಲ್ಲೆಯ ಐದು ಜನರಿಗೆ ಚಿನ್ನದ ಪದಕ ನೀಡಿ ಗೌರವಿಸಲಾಗುತ್ತದೆ. ಸಿಬ್ಬಂದಿಗಳ ಕಲ್ಯಾಣಕ್ಕಾಗಿ ಶೈಕ್ಷಣಿಕ ಧನಸಹಾಯ ಮತ್ತು ಆರೋಗ್ಯ ಯೋಜನೆಗಳ ಸದ್ಬಳಕೆಗೆ ಒತ್ತು ನೀಡಲಾಯಿತು. ಮುಖ್ಯವಾಗಿ, ಕನಿಷ್ಠ ಪ್ರೀಮಿಯಂನಲ್ಲಿ ಕುಟುಂಬಕ್ಕೆ ಗರಿಷ್ಠ ಆರ್ಥಿಕ ಭದ್ರತೆ ನೀಡುವ 'ಟರ್ಮ್ ಇನ್ಶೂರೆನ್ಸ್' ಪ್ರತಿಯೊಬ್ಬ ಸಿಬ್ಬಂದಿಯೂ ಮಾಡಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹಧನ ವಿತರಿಸಲಾಯಿತು. ವಿವಿಧ ವೃತ್ತಿಪರ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ □30,000 ರಿಂದ □50,000 ವರೆಗೆ ಧನಸಹಾಯ ನೀಡಲಾಯಿತು. ನಿವೃತ್ತ ಪೊಲೀಸ್ ಸಿಬ್ಬಂದಿಗಳಿಗೆ ವೈದ್ಯಕೀಯ ನೆರವೂ ಒದಗಿಸಲಾಯಿತು.

ಕಲಬುರಗಿ ಸಬರ್ಬನ್ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಶಿವಪುತ್ರಪ್ಪ ಅಣ್ಣಾರಾವ್ ಶಳಗೆ ಅವರು ಕರ್ತವ್ಯದ ಅವಧಿಯಲ್ಲಿ ಹೃದಯಾಘಾತದಿಂದ ನಿಧನರಾಗಿದ್ದರು. ಅವರ ಕುಟುಂಬದ ಆರ್ಥಿಕ ಸಂಕಷ್ಟವನ್ನು ಅರಿತ ಪೊಲೀಸ್ ಆಯುಕ್ತರು ಮತ್ತು ಇಲಾಖೆಯ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿಗಳು ಸ್ವಯಂಪ್ರೇರಿತರಾಗಿ ದೇಣಿಗೆ ಸಂಗ್ರಹಿಸಿದ್ದರು. ಸಂಗ್ರಹವಾದ 9 ಲಕ್ಷ ರೂಪಾಯಿಗಳ ಮೊತ್ತದ ಚೆಕ್ಕನ್ನು ಶಿವಪುತ್ರಪ್ಪ ಅವರ ಪತ್ನಿ ಕಾವೇರಿ ಮತ್ತು ಮಕ್ಕಳಿಗೆ ಹಸ್ತಾಂತರಿಸಲಾಯಿತು. ಈ ಮೊತ್ತವು ಮಕ್ಕಳ ಶಿಕ್ಷಣ ಮತ್ತು ಕುಟುಂಬದ ಭವಿಷ್ಯಕ್ಕೆ ಆಸರೆಯಾಗಲಿದೆ ಎಂದು ಆಶಿಸಲಾಗಿದೆ. ಅಲ್ಲದೆ, ಅನುಕಂಪದ ಆಧಾರದ ಮೇಲೆ ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡುವ ಪ್ರಕ್ರಿಯೆಯ ಬಗ್ಗೆಯೂ ಭರವಸೆ ನೀಡಲಾಯಿತು.

ಕಾರ್ಯಕ್ರಮದ ಅಂಗವಾಗಿ ವಿವಿಧ ಪೊಲೀಸ್ ತುಕಡಿಗಳ ಪಥಸಂಚಲನ ನಡೆಯಿತು. ಪರೇಡ್ ಕಮಾಂಡರ್ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಎಂಟು ತುಕಡಿಗಳು ಶಿಸ್ತಿನ ಪ್ರದರ್ಶನ ನೀಡಿದವು. ಮಹಿಳಾ ಪೊಲೀಸ್ ತುಕಡಿ ಸೇರಿದಂತೆ ವಿವಿಧ ಘಟಕಗಳು ಭಾಗವಹಿಸಿ ಕಾರ್ಯಕ್ರಮಕ್ಕೆ ಮೆರುಗು ತಂದವು.

ಕಾರ್ಯಕ್ರಮದಲ್ಲಿ ಈಶಾನ್ಯ ವಲಯ ಪೊಲೀಸ್ ಉಪಮಹಾನಿರೀಕ್ಷಕ ಶಾಂತನು ಸಿನ್ಹಾ, ಆಂತರಿಕ ಭದ್ರತೆ–ಯ ಗುಪ್ತ ವಾರ್ತೆಯ ಎಸ್.ಪಿ. ಎ.ಆರ್.ಕರ್ನಲ್, ಜಿಲ್ಲಾ ಉಪ ಪೊಲೀಸ್ ಆಯುಕ್ತ ಪ್ರವೀಣ್ ಎಚ್. ನಾಯಕ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಹೇಶ್ ಮೇಘಣ್ಣನವರ್, ಜಿಲ್ಲಾ ಶಸ್ತ್ರ ಮೀಸಲು ಪಡೆಯ ಡಿವೈಎಸ್‌ಪಿ ಶರಣಪ್ಪ ಸೇರಿದಂತೆ ಅಧಿಕಾರಿಗಳು ನಿವೃತ್ತ ಪೋಲಿಸ ಅಧಿಕಾರಿಗಳು ಸಿಬ್ಬಂದಿಗಳು ಇದ್ದರು.

# 5ಕ್ಕೆ ಬಾಬು ಜಗಜೀವನರಾಮ ಜನ್ಮದಿನಾಚರಣೆ

• ಮಲ್ಲಮ್ಮ ನುಡಿ ವಾರ್ತೆ, ಬಸವನಬಾಗೇವಾಡಿ

ತಾಲೂಕಾ ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಸಿರು ಕ್ರಾಂತಿಯ ಹರಿಕಾರ ಡಾ. ಬಾಬು ಜಗಜೀವನರಾಮಜಿಯವರ 119 ಜನ್ಮ ದಿನಾಚರಣೆಯನ್ನು ಪಟ್ಟಣದ ಬಸವ ಭವನದಲ್ಲಿ ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ. ಸಮಾರಂಭದಲ್ಲಿ ಸಚಿವರಾದ ಡಾ. ಎಂಬಿ ಪಾಟೀಲ, ಶಿವಾನಂದ ಪಾಟೀಲ, ಶಾಸಕರಾದ ಭೀಮನಗೌಡ ಪಾಟೀಲ ಸೇರಿದಂತೆ ಅನೇಕ ರಾಜ್ಯ ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಮುಖಂಡರುಗಳು ಆಗಮಿಸುವರು. ಇದೇ ಸಂದರ್ಭದಲ್ಲಿ ಉಪನ್ಯಾಸಕ ಬಸವರಾಜ ಜಾಲವಾದ ಅವರಿಂದ ಉಪನ್ಯಾಸ ನಡೆಯಲಿದೆ.

ಸಮಾರಂಭ ಮುನ್ನ ಡಾ. ಬಾಬು ಜಗಜೀವನರಾಮಜಿ ಅವರ ಭಾವಚಿತ್ರದ ಮೆರವಣಿಗೆ ಪಟ್ಟಣದ ಬಸವೇಶ್ವರ ವೃತ್ತದಿಂದ ಆರಂಭಗೊಂಡು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪ್ರಮುಖ ವೇದಿಕೆಗೆ ಬರಲಾಗುವುದು ತಾಲೂಕಿನ ಸಮಸ್ತ ಸಮಾಜದ ಬಾಂಧವರು,

ವಿವಿಧ ಸಂಘಟನೆಯ ಮುಖಂಡರು ಹಾಗೂ ಪದಾಧಿಕಾರಿಗಳು ಆಗಮಿಸುವಂತೆ ತಾಲೂಕು ಮಟ್ಟದ ಜಯಂತಿ ಉತ್ಸವ ಸಮಿತಿ ಅಧ್ಯಕ್ಷ ವಾಯ್. ಎಸ್ ಸೋಮನಕಟ್ಟಿ ಹಾಗೂ ಸದಸ್ಯ ಕಾರ್ಯದರ್ಶಿ ಮಂಜುಳಾ ಹಿರೇಮನಿ ತಿಳಿಸಿದ್ದಾರೆ.

# ಅಕ್ಕ ಮಹಾದೇವಿ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಪುರಸಭೆ ಕಾರ್ಯಲಯದಲ್ಲಿ ಅಕ್ಕ ಮಹಾದೇವಿ ಜಯಂತಿ ಬುಧುವಾರ ಆಚರಣೆ ಮಾಡಿದರು.

ಶಿವಶರಣೆ ಅಕ್ಕ ಮಹಾದೇವಿ ಅವರ ಭಾವ ಚಿತ್ರಕ್ಕೆ ಸಿರ್ಪಿ ರೇಣುಕಾ ಭೋವಿ ಪೂಜೆ ಸಲ್ಲಿಸಿ ಪುಷ್ಪರ್ಚನೆ ಮಾಡಿದರು.

ಪುರಸಭೆ ಮುಖ್ಯಾಧಿಕಾರಿ ಪ್ರವೀಣ್ ಕುಮಾರ ಭೋಗಾರ, ವ್ಯವಸ್ಥಾಪಕ ಸುರೇಶ ಎಸ್ ವನಹಳ್ಳಿ,ಇಂಜಿನಿಯರ್ ಪ್ರಿಯಾಂಕ, ಕಂದಾಯ ನಿರೀಕ್ಷಕ ಅಂತೋಣಿ,ಬಸವರಾಜ,ಬೀಬಿಫಾತಿಮಾ, ರಂಗನಾಥ, ಜಹಾಂಗೀರ, ಹುಲಿಗೆಮ್ಮ, ದೀಪ ಬಡಿಗೇರ ಸೇರಿದಂತೆ ಇತರರಿದ್ದರು.

# ಅನೈತಿಕ ಚಟುವಟಿಕೆ ನಿಯಂತ್ರಿಸಲು ಜನರ ಸಹಕಾರ ಮುಖ್ಯ: ವೆಂಕಟೇಶ್



• ಮಲ್ಲಮ್ಮ ನುಡಿ ವಾರ್ತೆ, ಪಿರಿಯಾಪಟ್ಟಣ

ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿವತಿಯಿಂದ ನಿರ್ಮಾಣವಾದ ಗ್ರಹಗಳನ್ನು ಪಶು ಸಂಗೋಪನ ಮತ್ತು ರೇಷ್ಮೆ ಸಚಿವ ಕೆ ವೆಂಕಟೇಶ್ ಉದ್ಘಾಟಿಸಿದರು.

ತಾಲೂಕಿನ ಬೆಟ್ಟಪುರ ಗ್ರಾಮದ ಪೊಲೀಸ್ ಠಾಣೆ ಆವರಣದಲ್ಲಿ ನೂತನವಾಗಿ ಸುಮಾರು 2 ಕೋಟಿ 59 ಲಕ್ಷ ರೂ ವೆಚ್ಚದಲ್ಲಿ ನಿರ್ಮಿಸಿರುವ 12 ವಸತಿ ಗ್ರಹಗಳನ್ನು ಗುರುವಾರ ಪೊಲೀಸ್ ಬಂದಿಗಳಿಗೆ ಅರ್ಪಣೆ ಮಾಡಿದರು.

ನಂತರ ಮಾತನಾಡಿದ ಸಚಿವರು ಇಲ್ಲಿನ ಪೊಲೀಸ್ ಠಾಣೆಯಲ್ಲಿ 35ಕ್ಕೂ ಹೆಚ್ಚು ಸಿಬ್ಬಂದಿಗಳು ಇತ್ತು ಇನ್ನೂ ಸಹ ವಸತಿಗಳ ಅವಶ್ಯಕತೆ ಇದ್ದು ಜಾಗದ ಸೌಲಭ್ಯ ಇರುವುದರಿಂದ ಮುಂದಿನ ದಿನಗಳಲ್ಲಿ ಮತ್ತಷ್ಟು ಗೃಹ ಕಟ್ಟಡ ನಿರ್ಮಾಣಕ್ಕೆ ಸರ್ಕಾರದಲ್ಲಿ ಹಣ ಮಂಜೂರು ಮಾಡಿಸುವುದಾಗಿ ಭರವಸೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲ್ದಂಡಿ ಮಾತನಾಡಿ ಪೊಲೀಸ್ ಸಿಬ್ಬಂದಿಗಳಿಗೆ ಠಾಣೆಯ ಆವರಣದಲ್ಲಿ ವಸತಿ ಸೌಲಭ್ಯ ಇರುವುದರಿಂದ ಕಾನೂನು ಸುವ್ಯವಸ್ಥೆ ವ್ಯತ್ಯಾಸಗೊಂಡ ಸಂದರ್ಭದಲ್ಲಿ ಕಾರ್ಯ ನಿರ್ವಹಿಸಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಡ್ರಗ್ಸ್ ಮತ್ತು ಅಫೀಮ್ ಗಾಂಜಾ ಸೇರಿದಂತೆ ಇನ್ನಿತರ ಅನೈತಿಕ ಚಟುವಟಿಕೆಗಳನ್ನು ನಿಯಂತ್ರಣ ಮಾಡುವ ಉದ್ದೇಶದಿಂದ ಸನ್ಮಿತ್ರ ಎಂಬ ಕಾರ್ಯಕ್ರಮಗಳನ್ನು ಇಲಾಖೆ ರೂಪಿಸಿದ್ದು ಸಾರ್ವಜನಿಕರು ಸಹಕರಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ಹೆಚ್ಚುವರಿ ವರಿಷ್ಠಾಧಿಕಾರಿಗಳಾದ ಎಲ್ ನಾಗೇಶ್ ಮತ್ತು ಸಿ ಮಲ್ಲಿಕ್ ಡಿ ವೈ ಎಸ್ ಪಿ ರವಿ ಐದು ಗ್ಯಾರಂಟಿಗಳ ತಾಲೂಕು ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ನಿಗಮದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಂ ಮಹದೇವಸ್ವಾಮಿ ಪೊಲೀಸ್ ಸರ್ಕಲ್ ಇನ್ಸ್ಪೆಕ್ಟರ್ ಎಂ ಕೆ ದೀಪಕ್. ಪೊಲೀಸ್ ಸಬ್ ಇನ್ಸ್ಪೆಕ್ಟರ್ ಡಿ ಎನ್ ಅಜಯ್ ಕುಮಾರ್ ಜರಿದ್ದರು.

# ಧಾರ್ಮಿಕ ಕಾರ್ಯಕ್ರಮ ಮನುಷ್ಯನಿಗೆ ನೆಮ್ಮದಿ ಬದುಕು ಸಾಗಿಸಲು ಸನ್ಮಾರ್ಗದ ಹಾದಿ



• ಮಲ್ಲಮ್ಮ ನುಡಿ ವಾರ್ತೆ ಕುರುಗೋಡು

ಮನುಷ್ಯ ತನ್ನ ಪಾಪ ಕರ್ಮ ಗಳಿಂದ ಜೀವನದಲ್ಲಿ ಅಸುಖಿ ಯಾಗಿದ್ದಾನೆ ಸಾಕಷ್ಟು ಆಸ್ತಿ ಅಂತಸ್ತು ಇದ್ದಾರು ವೇಗದ ಬದುಕು ನಮ್ಮನ್ನು ಯಾಂತ್ರಿಕರನ್ನಾಗಿ ಮಾಡಿದೆ ಈ ಜಂಜಾಟದಿಂದ ಹೊರಬಂದು ನೆಮ್ಮದಿ ಜೀವನ ನಡೆಸಲು ಪ್ರತಿಯೊಬ್ಬರು ಇಂತಹ ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ದೇವರ ನಾಮಸ್ಮರಣೆ ದರ್ಶನ ಮಾಡಬೇಕು ಆಗ ಮಾತ್ರ ನೆಮ್ಮದಿಯ ಜೀವನ ಸಾಗಿಸಲು ಸಾಧ್ಯ ಎಂದು ಸಿದ್ದರಾಂಪುರ ಮಠದ ಚಿದಾನಂದ ಸ್ವಾಮಿಗಳು ಭಕ್ತರಿಗೆ ಆಶೀರ್ವಾಚನ ನೀಡಿದರು.

ಪಟ್ಟಣದ ಮುಷ್ಠಗಟ್ಟೆ ರಸ್ತೆಯಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನದಲ್ಲಿ ನಡೆಯುತ್ತಿರುವ ಮಹಾ ಮಹಿಮ ಶ್ರೀಗುಡದೂರು ದೊಡ್ಡ ಬಸವೇಶ್ವರ ತಾತನವರ 8ನೇ ವರ್ಷದ ಪುರಾಣ ಕಾರ್ಯಕ್ರಮ ಹಾಗೂ ಸುಮಂಗಲಿಯರಿಗೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಬುಧವಾರ ಅವರು ಮಾತನಾಡಿದರು.

ನಂತರ ಮಾತನಾಡಿದ ಎಚ್ ವೀರಾಪುರ ಮಠದ ಜಡೇಶ ಸ್ವಾಮಿಗಳು ಪುರಾಣ ಪ್ರವಚನ ಧಾರ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಸಂಸ್ಕೃತಿ ಸಂಸ್ಕಾರ ಬೆಳಸಲು ಸಹಕಾರಿಯಾಗುವ ಜೊತೆಗೆ ನೆಮ್ಮದಿ ಜೀವನಕ್ಕೆ ದಾರಿ ಮಾಡಿಕೊಡುತ್ತವೆ ಎಂದು ಹೇಳಿದರು.

ಮೊದಲಿಗೆ ಪುರಾಣ ಕಾರ್ಯಕ್ರಮದಲ್ಲಿ 108 ಜನ ಸುಮಂಗಲಿಯರಿಗೆ ಉಡಿತುಂಬುವ ಕಾರ್ಯಕ್ರಮ ನಡೆಯಿತು ಗುಡದೂರು ಶ್ರೀ ದೊಡ್ಡ ಬಸವೇಶ್ವರ ತಾತನವರ ಲೀಲೆಗಳನ್ನು ಸಾಕಷ್ಟು ಸಂಖ್ಯೆಯ ಭಕ್ತರು ಭಕ್ತಿಯಿಂದ ಶ್ರವಣ ಮಾಡಿದರು ಕಾರ್ಯಕ್ರಮದ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ಕೊನೆಯಲ್ಲಿ ಎಲ್ಲಾ ಸ್ವಾಮಿಜಿ ಗಳಿಗೆ ದೇವಸ್ಥಾನದ ವತಿಯಿಂದ ಸನ್ಮಾನ ಗೌರವ ಸಮರ್ಪಣೆ ಜರುಗಿತು.ಈ ವೇಳೆ ಕಾರ್ಯಕ್ರಮದಲ್ಲಿ ಆಗಮಿಸಿದ ಭಕ್ತರಿಗೆ ಅನ್ನ ಸಂತರ್ಪಣೆ ವ್ಯವಸ್ಥೆ ಕಲ್ಪಿಸಲಾಗಿತ್ತು.

ಈ ಸಂದರ್ಭದಲ್ಲಿ ಪುರಾಣ ಪ್ರವಚನ ಕಾರಾದ ಷಡಕ್ಷರಿ ಸ್ವಾಮಿ, ಚಂದ್ರ ಶೇಖರಯ್ಯ ಸ್ವಾಮಿ, ಗವಾಯಿಗಳು ಕೊಂಚಿಗೇರಿ ಶಿವಯ್ಯ, ಎಸ್ ಪ್ರಭುಲಿಂಗ ಗೌಡ ಹಾಗೂ ವ್ಯವಸ್ಥಾಪಕರಾದ ಎಸ್ ಭೀಮನಗೌಡ ಹಾಗೂ ಪುರೋಹಿತರಾದ ಜಡೇಯ್ಯಸ್ವಾಮಿಗಳು , ರುದ್ರ ಸ್ವಾಮಿ ಗೇಣಿಕೆಹಾಳು ,ಮುಷ್ಠಗಟ್ಟೆ, ಎಚ್ ವೀರಾಪುರ, ಮತ್ತು ಕುರುಗೋಡು ಪಟ್ಟಣದ ಸದ್ಭಕ್ತರು ಉಪಸ್ಥಿತರಿದ್ದರು

# ದಿಕ್ಕು ತಪ್ಪಿದ ತಾಲೂಕು ಬೇಡಿಕೆ ಹೋರಾಟ

> “ಮುದಗಲ್ ತಾಲ್ಲೂಕು ಕೇಂದ್ರ ಮಾಡುತ್ತೇವೆ ಎಂದು ಭರವಸೆ ನೀಡಿದ್ದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಈಗ ಮೌನಕ್ಕೆ ಜಾರಿದ್ದಾರೆ.
> ಶರಣಪ್ಪ ಕಟ್ಟಿಮನಿ
> ಡಿ.ಎಸ್.ಎಸ್ ತಾಲ್ಲೂಕು ಸಂಚಾಲಕ

> “ಮುದಗಲ್ ತಾಲ್ಲೂಕು ಕೇಂದ್ರವಾಗುವ ಎಲ್ಲ ಅರ್ಹತೆಯನ್ನೂ ಹೊಂದಿದೆ. ಸರ್ಕಾರ ಈ ದಿಸೆಯಲ್ಲಿ ದಿಟ್ಟ ಕ್ರಮ ಕೈಗೊಂಡು ತಾಲ್ಲೂಕು ಕೇಂದ್ರವಾಗಿ ಘೋಷಣೆ ಮಾಡಬೇಕು’.
> ಅಶೋಕಗೌಡ ಆದಾಪುರ
> ಪುರಸಭೆ ಮಾಜಿ ಅಧ್ಯಕ್ಷ

ಮುದಗಲ್:ಪ್ರತ್ಯೇಕ ತಾಲ್ಲೂಕು ಕೇಂದ್ರ ರಚನಾ ಬೇಡಿಕೆ ಹೋರಾಟಗಾರರ ವೈಯಕ್ತಿಕ ಪ್ರತಿಷ್ಠೆಯಿಂದ ದಿಕ್ಕು ತಪ್ಪುತ್ತಿದೆ. ಹೋರಾಟಕ್ಕೆ ವಿವಿಧ ರಾಜಕೀಯ ಪಕ್ಷದ ಜನಪ್ರತಿನಿಧಿಗಳು, ಮುಖಂಡರು,ಸಂಘಟನೆ ಮುಖಂಡರು, ಒಮ್ಮತ್ತದಿಂದ ಸೇರುತ್ತಿಲ್ಲ. ಇದರಲ್ಲಿ ರಾಜಕೀಯ ಲಾಭದ ಲೆಕ್ಕಾಚಾರ ನಡೆದಿದೆ. ಪ್ರತ್ಯೇಕ ತಾಲ್ಲೂಕಿಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಬಜೆಟ್ ನಲ್ಲಿ ಸೇರಿಸಿ ಎಂದು ಒತ್ತಡ ಹಾಕಲು ಶಾಸಕ ಮಾನಪ್ಪ ವಜ್ಜಲ ನೇತೃತ್ವದ ಬೆಂಗಳೂರಿಗೆ ತೆರಳಿದ ನಿಯೋಗದಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷದ ಮುಖಂಡರು ಹೋಗಲ್ಲಿಲ್ಲ.

ಜಿಲ್ಲೆಯಲ್ಲಿ ಮುದಗಲ್, ಭೌಗೋಳಿಕವಾಗಿ ದೊಡ್ಡ ಹೋಬಳಿಯಾಗಿದೆ. ಇದು 60 ಹಳ್ಳಿಗಳು,18 ತಾಂಡಾಗಳ ವ್ಯಾಪ್ತಿ ಹೊಂದಿದೆ. ಇಲ್ಲಿನ ಕೊನೆಯ ಗ್ರಾಮದ ಜನರು ಲಿಂಗಸುಗೂರು ತಾಲ್ಲೂಕು ಕೇಂದ್ರಕ್ಕೆ ಹೋಗಲು 50 ಕಿ.ಮೀ ದೂರ ಪ್ರಯಾಣಸಬೇಕು. ಕೆಲ ಗ್ರಾಮಗಳಿಂದ ದೂರದ ತಾಲ್ಲೂಕು ಕೇಂದ್ರಕ್ಕೆ ಹೋಗಲು ಹರ ಸಹಾಸ ಮಾಡಬೇಕಾಗಿದೆ. ಸಮರ್ಪಕವಾದ ಬಸ್ ಸೌಲಭ್ಯ ವಿಲ್ಲ. ಕಚೇರಿ ಕೆಲಸದ ನಿಮಿತ್ತ ಲಿಂಗಸುಗೂರಿಗೆ ಹೋಗಿ ಕೆಲಸ ಮಾಡಿಸಲು ಒಂದು ದಿನ ಕಳೆಯುತ್ತದೆ. ಕೃಷ್ಣಾನದಿ ಹತ್ತಿರದಲ್ಲಿದ್ದರೂ ಇಲ್ಲಿನ ಜನರು ನೀರಾವರಿ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಅಭಿವೃದ್ಧಿಗೆ ತಾಲ್ಲೂಕು ಕೇಂದ್ರದ ಘೋಷಣೆ ಮಾಡುವುದು ಅವಶ್ಯವಾಗಿದೆ.

**ತಾಲ್ಲೂಕು ಕೇಂದ್ರವಾಗಲು ಅರ್ಹತೆ:**

ಮುದಗಲ್ ಪಟ್ಟಣವು ಉತ್ತರಕ್ಕೆ 5 ಕಿ.ಮೀ, ಪಶ್ಚಿಮಕ್ಕೆ 4 ಕಿ.ಮೀ ವಿಸ್ತರಿಸಿಕೊಂಡಿದೆ. ಪ್ರಮುಖ ವ್ಯಾಪಾರ ಕೇಂದ್ರವೂ ಆಗಿದೆ. ಇಲ್ಲಿಂದ ಸರ್ಕಾರಕ್ಕೆ ಗರಿಷ್ಟ ಮಟ್ಟದಲ್ಲಿ ತೆರಿಗೆ ಹೋಗುತ್ತಿದೆ. ಈಗಾಗಲೇ ಇಲ್ಲಿ ಅನೇಕ ಇಲಾಖೆಗಳ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಪೊಲೀಸ್ ಠಾಣೆ, 30 ಹಾಸಿಗೆಯ ಸರ್ಕಾರಿ ಆಸ್ಪತ್ರೆ, ಬಸ್ ನಿಲ್ದಾಣ, ಎಪಿಎಂಸಿ, ಉಪ ತಹಶೀಲ್ದಾರ್ ಕಚೇರಿ, ರೈತ ಸಂಪರ್ಕ ಕೇಂದ್ರ, ನವೋದಯ ವಿದ್ಯಾಲಯ, ಇಂದಿರಾ ಗಾಂಧಿ ವಸತಿ ಶಾಲೆ, ಕಸ್ತೂರಿಬಾಯಿ ವಸತಿ ಶಾಲೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಡಿಪ್ಲೊಮಾ ಕಾಲೇಜು, ವಿವಿಧ ಶಾಲಾ– ಕಾಲೇಜುಗಳು, ಬಾಲಕ, ಬಾಲಕಿಯರ ವಸತಿ ನಿಲಯಗಳು, 110 ಕೆ.ವಿ ಕೆಇಬಿ, ಎಸ್.ಬಿ.ಐ, ಕೆನರಾ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ವಿವಿಧ ಬ್ಯಾಂಕ್ ಗಳು ಹಾಗೂ ಖಜಾನೆ ಇಲಾಖೆ ಕಚೇರಿ ಇಲ್ಲಿದೆ. ಅಗ್ನಿಶಾಮಕ ದಳದ ಕಚೇರಿ ನಿರ್ಮಾಣದ ಹಂತದಲ್ಲಿದೆ.

ಪಟ್ಟಣದ ಹೊರ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ, ರೈಲ್ವೆ ಮಾರ್ಗ ನಿರ್ಮಾಣ ಕಾರ್ಯ ನಡೆದಿದೆ. ಇಷ್ಟೆಲ್ಲ ಕಚೇರಿಗಳು ಇರುವುದರಿಂದ ತಾಲ್ಲೂಕು ಕೇಂದ್ರ ಮಾಡಿದರೆ, ತಾಲ್ಲೂಕು ಕೇಂದ್ರಕ್ಕೆ ಖರ್ಚು ಮಾಡುವ ಹೆಚ್ಚಿನ ಹೊರೆ ಕಡಿಮೆ ಆಗಲಿದೆ ಎನ್ನುವುದು ತಜ್ಞರ ಅಭಿಮತವಾಗಿದೆ.

**ಪ್ರಚಾರಕ್ಕೆ ಸೀಮಿತ:**

ಕಳೆದ ವಿಧಾನಸಭೆ ಚುನಾವಣೆ ಪ್ರಚಾರದಲ್ಲಿ ನಮ್ಮ ಪಕ್ಷ ಆಡಳಿತಕ್ಕೆ ಬಂದರೆ, ತಾಲ್ಲೂಕು ಕೇಂದ್ರವಾಗಿ ಮಾಡುತ್ತೇನೆ ಎಂದು ಸಿದ್ದರಾಮಯ್ಯ, ಎಚ್. ಡಿ. ಕುಮಾರಸ್ವಾಮಿ ಅವರು ಭರವಸೆ ನೀಡಿದ್ದರು. ಸಿದ್ದರಾಮಯ್ಯ ಮುಖ್ಯ ಮಂತ್ರಿಯಾಗಿ ಮೂರು ವರ್ಷ ಕಳೆಯುತ್ತ ಬಂದರೂ ತಾಲ್ಲೂಕು ಕೇಂದ್ರ ಘೋಷಣೆ ಮಾಡಿಲ್ಲ. ಈಗ ಮುದಗಲ್ ತಾಲ್ಲೂಕು ಕೇಂದ್ರ ಘೋಷಣೆ ಮಾಡಲು ಆಗುವುದಿಲ್ಲ ಎಂದು ತಮ್ಮನ್ನು ಭೇಟಿ ಮಾಡಲು ಬಂದ ನಿಯೋಗಕ್ಕೆ ಹೇಳಿ ಕಳಿಸಿದರು.

**ಇಚ್ಛಾ ಶಕ್ತಿ ಕೊರತೆ:**

ನೂತನ ತಾಲ್ಲೂಕು ಘೋಷಣೆಗೆ ಈ ಭಾಗದ ಜನ ನಾಲ್ಕು ದಶಕಗಳಿಂದ ಕಾಯುತ್ತಿದ್ದಾರೆ. ಮುದಗಲ್ ಹೋಬಳಿ 1952 ರಿಂದ 2008 ರವರೆಗೆ ಕುಷ್ಟಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿತ್ತು. 2008 ರಲ್ಲಿ ಕ್ಷೇತ್ರ ಪುನರ್ ವಿಂಗಡನೆ ವೇಳೆ ಲಿಂಗಸುಗೂರು ಕ್ಷೇತ್ರಕ್ಕೆ ಸೇರಿಸಿದರು. ಈ ಹೋಬಳಿಯಲ್ಲಿ ಅನೇಕರು ಪ್ರಭಾವಿ ಜನ ಪ್ರತಿನಿಧಿಗಳಿದ್ದಾರೆ. ವಿವಿಧ ಕೇತ್ರಗಳನ್ನು ಪ್ರತಿನಿಧಿಸಿ ಗೆದ್ದು ಶಾಸಕರು, ಸಚಿವರಾಗಿದ್ದಾರೆ. ಆದರೆ ಇವರು ಮುದಗಲ್ ತಾಲ್ಲೂಕು ಕೇಂದ್ರವನ್ನಾಗಿ ಮಾಡಿಸಲು ಮನಸ್ಸು ಮಾಡಿಲ್ಲ ಎಂಬುದು ಜನರ ನೋವಿಗೆ ಕಾರಣ.

**ಕುಡಿಯುವ ನೀರಿಗಾಗಿ ಹರಸಾಹಸ:**

ಇಲ್ಲಿ ಹೇಳಿಕೊಳ್ಳುವಂತ ಅಂಥ ಅಭಿವೃದ್ಧಿ ಕಾರ್ಯಗಳು ಆಗಿಲ್ಲ. ಗ್ರಾನೈಟ್ ಕಲ್ಲುಕ್ವಾರಿ ಉದ್ಯಮ ಒಂದು ಬಿಟ್ಟರೆ ಜನತೆಗೆ ಉದ್ಯೋಗ ನೀಡುವ ಕೈಗಾರಿಕೆಗಳು ಇಲ್ಲ. ಕೃಷಿಯನ್ನೆ ಅವಲಂಭಿತರಾಗಿದ್ದಾರೆ. ರೈತರು ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿದ್ದಾರೆ.


ಪಟ್ಟಣದ ಜನರು ಕುಡಿಯುವ ನೀರಿಗಾಗಿ ಹರಸಾಹಸ ಪಡುತ್ತಿದ್ದಾರೆ. 15 ದಿನಕೊಮ್ಮೆ ನೀರು ಸರಬರಾಜು ಆಗುತ್ತಿದೆ. ಕುಡಿಯುವ ನೀರು ಕೊಡಿ ಎಂದು ಅನೇಕ ಹೋರಾಟಗಳು ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ನಿರಂತರ ಕಡಿಯುವ ನೀರಿನ ಕಾಮಗಾರಿ ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿದೆ.

**ನಾಲ್ಕು ದಶಕದ ಕನಸು:**

ನಾಲ್ಕು ದಶಕದ ಹಿಂದೆ ಮುದಗಲ್ ತಾಲ್ಲೂಕು ಘೋಷಣೆಗೆ ಆಗ್ರಹಿಸಿ ಮಾಜಿ ಶಾಸಕ ಎಂ.ಗಂಗಣ್ಣ ಅವರ ನೇತೃತ್ವದಲ್ಲಿ ಹೋರಾಟ ಪ್ರಾರಂಭಿಸಿದ್ದರು. ಹೋರಾಟಕ್ಕೆ ಅಂಥ ಯಶಸ್ಸು ಸಿಗಲಿಲ್ಲ. ದಶಕದ ಹಿಂದೆ ಹೊಸ ತಲೆಮಾರಿನ ಯುವಜನತೆ ಮತ್ತೆ ತಾಲ್ಲೂಕು ರಚನೆಗಾಗಿ ನೂತನ ತಾಲ್ಲೂಕು ರಚನಾ ಹೋರಾಟ ಸಮಿತಿ ರಚಿಸಿ ಹೋರಾಟ ಪ್ರಾರಂಭಿಸಿದೆ. ತಾಲ್ಲೂಕಿಗಾಗಿ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ಪಾದಯಾತ್ರೆ ಮಾಡಿದರು. ಹೋರಾಟಕ್ಕೆ ಕರ್ನಾಟಕ ರಕ್ಷಣಾ ವೇದಿಕೆ, ಡಿ.ಎಸ್. ಎಸ್ ಸೇರಿ ಹಲವು ಸಂಘಟನೆಗಳು ಬೆಂಬಲ ನೀಡಿವೆ.

ಪ್ರಸುತ್ತ ಕ್ಷೇತ್ರದ ಜನ ಪ್ರತಿನಿಧಿಗಳು ಹಾಗೂ ಮುಖಂಡರ ಧ್ವಂದ್ವ ನೀತಿಯಿಂದಾಗಿ ಮುದಗಲ್ ಪ್ರತ್ಯೇಕ ತಾಲ್ಲೂಕು ರಚನೆ ಕನಸು ನನಸಾಗಿಲ್ಲ ಎನ್ನುವ ಕೊರಗು ಜನರಲ್ಲಿ ಕಾಡುತ್ತಿದೆ.

# ಜನಗಣತಿ ಕಾರ್ಯ ಚುರುಕು ಸ್ವಯಂ ಗಣತಿ ಸೌಲಭ್ಯ ಬಳಸಿಕೊಳ್ಳಲು ಘಂಟಿ ಮನವಿ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ತಾಲೂಕಿನಲ್ಲಿನಡೆಯುತ್ತಿರುವಜನಗಣತಿ ಕಾರ್ಯಕ್ಕೆ ಸಾರ್ವಜನಿಕರು ಪೂರ್ಣ ಸಹಕಾರ ನೀಡುವಂತೆ ಗುರುಮಠಕಲ್ ತಹಸೀಲ್ದಾರ ಚನ್ನಮಲ್ಲಪ್ಪ ಘಂಟಿ ಮನವಿ ಮಾಡಿದ್ದಾರೆ.

ಜನಗಣತಿ ಕಾರ್ಯವು ಅಭಿವೃದ್ಧಿ ಯೋಜನೆಗಳಿಗೆ ಮಹತ್ವದ ಮಾಹಿತಿಯನ್ನು ಒದಗಿಸುವುದರಿಂದ, ಪ್ರತಿಯೊಬ್ಬ ನಾಗರಿಕರೂ ತಮ್ಮ ಮಾಹಿತಿಯನ್ನು ನಿಖರವಾಗಿ ನೀಡುವುದು ಅಗತ್ಯವೆಂದು ಅವರು ತಿಳಿಸಿದ್ದಾರೆ.

ತಾಲೂಕನ್ನು ಒಟ್ಟು 218 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದ್ದು, ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಜನಗಣತಿ ಕಾರ್ಯ ಆರಂಭವಾಗಿದೆ. ಈ ಕಾರ್ಯದಲ್ಲಿ ಶಿಕ್ಷಕರು ಹಾಗೂ ಸಿಬ್ಬಂದಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ.

ಸರ್ಕಾರ ಒದಗಿಸಿರುವ ಸ್ವಯಂ ಗಣತಿ ಸೌಲಭ್ಯವನ್ನು ಬಳಸಿಕೊಂಡು, ಸಾರ್ವಜನಿಕರು ತಮ್ಮ ಮೊಬೈಲ್ ಮೂಲಕವೇ ಮಾಹಿತಿಯನ್ನು ಸಲ್ಲಿಸಬಹುದು. ಏಪ್ರಿಲ್ 1ರಿಂದ 15ರವರೆಗೆ ಈ ಸೌಲಭ್ಯ ಲಭ್ಯವಿದ್ದು, ಈ ಅವಧಿಯನ್ನು ಸದುಪಯೋಗಪಡಿಸಿಕೊಳ್ಳುವಂತೆ ತಹಸೀಲ್ದಾರರು ಮನವಿ ಮಾಡಿದ್ದಾರೆ.

# ಕರ್ತವ್ಯ ಲೋಪ ಹಿನ್ನೆಲೆ ಅಮಾನತು



• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ತಾಲೂಕಿನ ಮುನಿರಾಬಾದ್ ಪೊಲೀಸ್ ಠಾಣೆಯ ಪಿಎಸ್ಐ ಸುನಿಲ್ ಅವರನ್ನು ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಅಮಾನತ್ತು ಮಾಡಿ ಪೊಲೀಸ್ ವರಿಷ್ಠಾಧಿಕಾರಿ ಆದೇಶ ಹೊರಡಿಸಿರುತ್ತಾರೆ.

ಅಕ್ರಮ ವಿದೇಶಿ ಪಾರ್ಟಿಗಳು, ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಅನ್ನಭಾಗ್ಯ ಅಕ್ಕಿ ಇದ್ದಂತೆ ಸರಣಿ ಅಕ್ರಮಗಳನ್ನು ತಡೆಯಲು ವಿಫಲರಾದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿದುಬಂದಿದ್ದು. ಕರ್ತವ್ಯ ಲೋಪ ಮತ್ತು ಆಡಳಿತಾತ್ಮಕ ಹಿತ ದೃಷ್ಟಿಯಿಂದ ಕೊಪ್ಪಳ ತಾಲೂಕಿನ ಮುನಿರಾಬಾದ್ ಪೊಲೀಸ್ ಠಾಣೆಯ ಠಾಣಾಧಿಕಾರಿ ಸುನಿಲ್ ಅವರನ್ನು ಅಮಾನತುಗೊಳಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್ ಅರಸಿದಿ ಆದೇಶ ಹೊರಡಿಸಿರುತ್ತಾರೆ.

ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕಾರ್ಯನಿರ್ವಹಿಸುತ್ತಿದ್ದ ಸುನಿಲ್ ಅವರ ವಿರುದ್ಧ ಇತ್ತೀಚಿನ ದಿನಗಳಲ್ಲಿ ಅನೇಕ ದೂರುಗಳು ಕೇಳಿ ಬರುತ್ತಿದ್ದು ಕಾರ್ಯಾಲಯದ ಆಡಳಿತ ವಿಚಾರಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳದ ಕಾರಣ ಹಾಗೂ ಮುನಿಯಪ್ಪ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾನೂನುಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಶಿಸ್ತು ಕ್ರಮ ತಿರುಗಿಸಲಾಗಿದ್ದು ಮುನಿರಾಬಾದ್ ಠಾಣ ವ್ಯಾಪ್ತಿಯಲ್ಲಿ ಹಲವಾರು ಅಕ್ರಮ ಪ್ರಕರಣಗಳು ಬೆಳಕಿಗೆ ಬಂದಿದ್ದರು ಸಹ ಕ್ರಮ ಕೈಗೊಳ್ಳದೆ ಇರುವುದು ಪೊಲೀಸ್ ಇಲಾಖೆಗೆ ಮುಜುಗರವನ್ನು ತಿಳಿದುಬಂದಿರುತ್ತದೆ.

# ನೂತನ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ ಕುರುಗೋಡು

ಸಮೀಪದ ದಮ್ಮೂರು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷರ ಸ್ಥಾನಕ್ಕೆ ಚುನಾವಣೆ ಶಾಂತಿಯುತವಾಗಿ ಜರುಗಿ-ತು. ಪ್ರಾರಂಭದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಸ್ಥಾನಕ್ಕೆ ಜೆ.ಪುಷ್ಪನಾರಾಯಣರೆಡ್ಡಿ ಅವರು ನಾಮಪತ್ರಸಲ್ಲಿಸಿದರು. ಅವರ ವಿರುದ್ದ ಯಾವೊಬ್ಬ ಸಂಘದ ನಿರ್ದೇಶಕರು ನಾಮಪತ್ರಸಲ್ಲಿಸಲಿಲ್ಲ. ಆದ್ದರಿಂದ ಸಂಘದ ನೂತನ ಉಪಾಧ್ಯಕ್ಷರಾಗಿ ಜೆ.ಪುಷ್ಪನಾರಾಯಣರೆಡ್ಡಿ ಅವರು ಅವಿರೋಧವಾಗಿ ಅಯ್ಕೆಯಾಗಿದ್ದಾರೆ ಎಂದು ಸಂಘದ ಚುನಾವಣಾಧಿಕಾರಿ ವೆಂಕಾರೆಡ್ಡಿ ಅವರು ಎಲ್ಲರ ಸಮಕ್ಷಮದಲ್ಲಿ ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ದಮ್ಮೂರು ಕೃಷಿಪತ್ತಿನ ಸಹಕಾರಸಂಘದ ಅಧ್ಯಕ್ಷ ಪಿ.ಶಂಕರಗೌಡ, ನಿರ್ದೇಶಕರಾದ ಗಣಪಾಲ್‌ಸಂಜೀವರೆಡ್ಡಿ, ಸಿ.ಗೋಪಾಲ, ಎ.ಸರ್ವೋತ್ತಮಗೌಡ, ಪಿ.ಬಸವರಾಜ, ಎಂ.ದೇವರೆಡ್ಡಿ, ಕೆ.ಮಲ್ಲಿಕಾರ್ಜುನರೆಡ್ಡಿ, ಜೆ.ಮಂಗಮ್ಮ, ಚಲುವಾದಿಹಂಪಮ್ಮ, ಊರಿನ ಮುಖಂಡರಾದ ಗಣಪಾಲಯಂಕಾರೆಡ್ಡಿ, ಗಣಪಾಲಏನಾಥರೆಡ್ಡಿ, ಬಿಹೆಚ್.ತಿಮ್ಮಾರೆಡ್ಡಿ, ಜಾನೆಕುಂಟೆರಾಮಣ್ಣ, ಪೂಜಾರಿನಾಗರಾಜ, ಮೋಹನಪ್ರಕಾಶ, ಸಂಘದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಎಸ್‌ಎಂ.ರೇವಣಸಿದ್ದಯ್ಯ, ಊರಿನ ಮುಖಂಡರು ಹಾಗು ಸಂಘದ ಸಿಬ್ಬಂದಿವರ್ಗದವರು ಇದ್ದರು.

# ದರಪಟ್ಟಿ ಸಲ್ಲಿಸಲು ಅರ್ಜಿ ಆಹ್ವಾನ

ರಾಯಚೂರು: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ನಿರ್ದೇಶಕರ ಕಚೇರಿಯಲ್ಲಿ 2024-25ನೇ ಸಾಲಿನ ಹಾಗೂ 2025ರ ಏಪ್ರಿಲ್ ಮಾಹೆಯ ಕನ್ನಡ ಮತ್ತು ಇಂಗ್ಲಿಷ್ ದಿನಪತ್ರಿಕೆಗಳನ್ನು ವಿಲೇವಾರಿ ಮಾಡಲು ಆಸಕ್ತರಿಂದ ದರಪಟ್ಟಿ ಸಲ್ಲಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ತಮ್ಮ ದರಪಟ್ಟಿಗಳನ್ನು ಸಾರ್ವಜನಿಕ ರಜೆ ದಿನಗಳನ್ನು ಹೊರತುಪಡಿಸಿ, ಏಪ್ರಿಲ್ 10ರೊಳಗಾಗಿ ಕಚೇರಿಯ ವೇಳೆಯಲ್ಲಿ ನೇರವಾಗಿ ಸಲ್ಲಿಸಬಹುದಾಗಿದೆ. ನಿಗದಿತ ಅವಧಿಯ ನಂತರ ಬರುವ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹನುಮನ ಆದರ್ಶಗಳು ಎಲ್ಲರಿಗೂ ಮಾದರಿ: ಸಿದ್ದ ಚನ್ನಮಲ್ಲಿಕಾರ್ಜುನ ಶ್ರೀ



• ಮಲ್ಲಮ್ಮ ನುಡಿ ವಾರ್ತೆ, ಕೆಂಭಾವಿ

ಸಮೀಪದ ಮುದನೂರು ಪ್ರಸಿದ್ಧ ಕೋರಿಸಿದ್ದೇಶ್ವರ ಶಾಖಾಮಠದಲ್ಲಿ ಗುರುವಾರ ಹನುಮ ಜಯಂತಿಯನ್ನು ಅತ್ಯಂತ ಸಡಗರ ಹಾಗೂ ಭಕ್ತಿಭಾವದಿಂದ ಆಚರಿಸಲಾಯಿತು.

ಮಠದ ಪೀಠಾಧಿಪತಿ ಷ.ಬ್ರ ಪೂಜ್ಯ ಸಿದ್ದ ಚನ್ನಮಲ್ಲಿಕಾರ್ಜುನ ಸ್ವಾಮಿಗಳ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನೂರಾರು ಭಕ್ತರು ಪಾಲ್ಗೊಂಡಿದ್ದರು.

ಹನುಮ ಜಯಂತಿಯ ಅಂಗವಾಗಿ ಮಠದಲ್ಲಿ ಮುಂಜಾನೆಯೇ ಹನುಮಂತ ದೇವರಿಗೆ ವಿಶೇಷ ಅಭಿಷೇಕ, ಪಂಚಾಮೃತ ಸ್ನಾನ ಹಾಗೂ ಭವ್ಯ ಅಲಂಕಾರವನ್ನು ಮಾಡಲಾಗಿತ್ತು. ಮಠದ ಆವರಣದಲ್ಲಿ ಭಕ್ತರಿಂದ ನಾಮಸಂಕೀರ್ತನೆ ಹಾಗೂ ಧಾರ್ಮಿಕ ವಿಧಿವಿಧಾನಗಳು ನೆರವೇರಿದವು.

ಕಾರ್ಯಕ್ರಮದಲ್ಲಿ ಮಾತನಾಡಿದ ಪೂಜ್ಯ ಶ್ರೀ ಸಿದ್ದ ಚನ್ನ ಮಲ್ಲಿಕಾರ್ಜುನ ಸ್ವಾಮಿಗಳು, "ಹನುಮಂತನು ಭಕ್ತಿ, ಶಕ್ತಿ ಮತ್ತು ಯುಕ್ತಿಯ ಸಂಗಮ. ಪ್ರಭು ಶ್ರೀರಾಮನ ಮೇಲಿದ್ದ ಆತನ ನಿಷ್ಠೆ ಮತ್ತು ಸೇವಾ ಮನೋಭಾವ ಇಂದಿನ ಯುವ ಪೀಳಿಗೆಗೆ ಅತ್ಯಂತ ಅವಶ್ಯಕವಾಗಿದೆ. ಕಷ್ಟದ ಸಮಯದಲ್ಲಿ ಧೃತಿಗೆಡದೆ ಸನ್ಮಾರ್ಗದಲ್ಲಿ ನಡೆಯುವುದನ್ನು ನಾವು ಹನುಮನಿಂದ ಕಲಿಯಬೇಕು," ಎಂದು ಮಾರ್ಮಿಕವಾಗಿ ನುಡಿದರು. "ಸಮಾಜದಲ್ಲಿ ಶಾಂತಿ ಮತ್ತು ಸಹಬಾಳ್ವೆ ನೆಲೆಸಲು ಧಾರ್ಮಿಕ ಸಂಸ್ಕಾರಗಳು ಮುಖ್ಯ. ಹನುಮಂತನ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ," ಎಂದು ಪೂಜ್ಯರು ಭಕ್ತರಿಗೆ ಸಂದೇಶ ನೀಡಿದರು.

ಮಠದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು. ಕಾರ್ಯಕ್ರಮದ ನಂತರ ಮಠಕ್ಕೆ ಆಗಮಿಸಿದ ಸದ್ಭಕ್ತರಿಗೆ ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಮಹಾಂತಯ್ಯ ಸ್ವಾಮಿ, ಕೃಷ್ಣರಡ್ಡಿ ಮುದನೂರ, ಸಿದ್ದರಾಮರಡ್ಡಿ ಚೌದ್ರಿ, ವೀರಣ್ಣ ಕಲಕೇರಿ, ಡಾ. ಯಂಕನಗೌಡ ಪಾಟೀಲ್, ಸೂಗಯ್ಯ ಸ್ವಾಮಿ, ಮಹಿಬೂಬ್ ಹಂದ್ರಾಳ್ ಸೇರಿದಂತೆ ಸ್ಥಳಿಯ ಮುಖಂಡರು ಶ್ರೀಮಠದ ಭಕ್ತರು ಇದ್ದರು.

# ಶಿವಶರಣೆ ಅಕ್ಕಮಹಾದೇವಿ ಜಯಂತಿ ಪಟ್ಟಣದಲ್ಲಿ ಭಕ್ತಿಭಾವದ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್

ಪಟ್ಟಣದ ವಿವಿಧೆಡೆ ಕನ್ನಡದ ಪ್ರಥಮ ಕವಯಿತ್ರಿ ಹಾಗೂ ಕ್ರಾಂತಿಕಾರಿ ಶಿವಶರಣೆ ಅಕ್ಕಮಹಾದೇವಿ ಅವರ ಜಯಂತಿಯನ್ನು ಭಕ್ತಿಪೂರ್ವಕವಾಗಿ ಆಚರಿಸಲಾಯಿತು.

ಪಟ್ಟಣದ ತಹಸೀಲ್ದಾರ ಕಾರ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ತಹಸೀಲ್ದಾರ ಚನ್ನಮಲ್ಲಪ್ಪ ಘಂಟಿ ಅವರು ಅಕ್ಕಮಹಾದೇವಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಅವರ ವಚನ ಸಾಹಿತ್ಯದ

ಮಹತ್ವವನ್ನು ಸ್ಮರಿಸಿದರು. ಅಕ್ಕಮಹಾದೇವಿಯವರ ತತ್ವಚಿಂತನೆಗಳು ಇಂದಿಗೂ ಸಮಾಜಕ್ಕೆ ದಾರಿದೀಪವಾಗಿದ್ದು, ಯುವಪೀಳಿಗೆಗೆ ಪ್ರೇರಣೆಯಾಗಿವೆ ಎಂದು ಅಭಿಪ್ರಾಯಪಟ್ಟರು.

ಇನ್ನೊಂದೆಡೆ, ಪಟ್ಟಣದ ಬಸ್ ನಿಲ್ದಾಣದ ಎದುರುಗಡೆ ಇರುವ ಅಕ್ಕಮಹಾದೇವಿಯವರ ವಿಗ್ರಹಕ್ಕೆ ಬಹಳ ದಿನಗಳ ಬಳಿಕ ಪೂಜೆ ಸಲ್ಲಿಸಲಾಯಿತು.

ಅಕ್ಕಮಹಾದೇವಿ ಅಕ್ಕನ ಬಳಗ, ಶ್ರೀ ಭದ್ರಕಾಳಿ ಮಾತಾ ಮಹಿಳಾ ಸಂಘದ ಸದಸ್ಯರು,

ಜಯಕರ್ನಾಟಕ ಸಂಘಟನೆ ಪದಾಧಿಕಾರಿಗಳು,

ವೀರಶೈವ ಲಿಂಗಾಯತ ಸಮಾಜದವರು, ಆಟೋ ಚಾಲಕರು ಹಾಗೂ ಸಾರ್ವಜನಿಕರು ಭಾಗವಹಿಸಿ ಭಕ್ತಿಭಾವದಿಂದ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಶಿಕ್ಷಕಿ ಶ್ರೀಮತಿ ಶಾಂತ ಮಲ್ಲಿಕಾರ್ಜುನ

ಕಾಕಲವಾರ್ ಮಾತನಾಡಿ, ಅಕ್ಕಮಹಾದೇವಿಯವರು ಲೌಕಿಕ ಆಸೆಗಳನ್ನು ತೊರೆದು

ಮಲ್ಲಿಕಾರ್ಜುನನನ್ನೇ ಪತಿಯೆಂದು ಆರಾಧಿಸಿದ ತಪಸ್ವಿನಿ. 'ಚೆನ್ನಮಲ್ಲಿಕಾರ್ಜುನ' ಅಂಕಿತದ ಅವರ ವಚನಗಳು ಇಂದಿಗೂ ಮಾನವಕುಲಕ್ಕೆ ಆತ್ಮಜ್ಞಾನ ಮತ್ತು ಸನ್ಮಾರ್ಗದ ದೀಪವಾಗಿವೆ ಎಂದು ಹೇಳಿದರು.

ನಾರಾಯಣಪುರ ಬಡಾವಣೆಯ ಶ್ರೀ ವೀರಭದ್ರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಅಕ್ಕಮಹಾದೇವಿಯವರ ಜಯಂತಿ

ಅಂಗವಾಗಿ ತೊಟ್ಟಿಲು ಕಾರ್ಯಕ್ರಮವನ್ನು ಶ್ರೀ ಭದ್ರಕಾಳಿ ಮಾತಾ ಮಹಿಳಾ ಸಂಘದ ಸದಸ್ಯರು ಸಡಗರದಿಂದ ನೆರವೇರಿಸಿದರು.

# ಕೋರ್ಟ್ ಸ್ಟೇ ಇದ್ದರೂ ಮಠದ ಭೂಮಿಯಲ್ಲಿ ಕಾಮಗಾರಿ ಯತ್ನ, ಭಕ್ತರ ಆಕ್ರೋಶ

• ಮಲ್ಲಮ್ಮ ನುಡಿವಾರ್ತೆ ಕುಕನೂರು

ಪಟ್ಟಣದ ಗುದ್ನೇನೆಪ್ಪ ಮಠದ ದೇವಸ್ಥಾನದಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಗುದ್ದೇಶ್ವರ ಸ್ವಾಮಿಯ ಭಕ್ತರು ಮಠದ ಆಸ್ತಿಗೆ ಸಂಬಂಧಿಸಿದ ವಿಚಾರದಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ವಿಶೇಷವಾಗಿ ಹುಬ್ಬಳ್ಳಿ ಧಾರವಾಡ ಭಾಗದ ಭಕ್ತರು ಅಧಿಕಾರಿಗಳ ಕ್ರಮವನ್ನು ತೀವ್ರವಾಗಿ ಖಂಡಿಸಿದರು.

ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಗದಗ ಜಿಲ್ಲೆಯ ನೀಲಗುಂದ ಗ್ರಾಮದ ಭಕ್ತರಾದ ಬಸಪ್ಪ ಪೂಜಾರ್ ಹಾಗೂ ಪ್ರಭು ಅಂಗಡಿ, 2023ರಲ್ಲಿ ಸರ್ವೇ ನಂ. 78ರಲ್ಲಿ ಇರುವ ಗುಪ್ಪನ ಮಠದ 26 ಎಕರೆ ಭೂಮಿಯಲ್ಲಿ ವಿವಿಧ ಸರ್ಕಾರಿ ಕಟ್ಟಡಗಳನ್ನು ನಿರ್ಮಿಸಲು ಶಾಸಕರು ಧತ್ತಿ ಇಲಾಖೆ ಹಾಗೂ ಜಿಲ್ಲಾ ಆಡಳಿತದ ಮೂಲಕ ಆದೇಶಗಳನ್ನು ಮಾಡಿಸಿಕೊಂಡಿರುವುದಾಗಿ ಹೇಳಿದರು.

ಈ ಕ್ರಮದ ವಿರುದ್ಧ ಗ್ರಾಮದ 18 ಮಂದಿ ಸೇವಾದಾರರು ನ್ಯಾಯಾಲಯಕ್ಕೆ ಮೊರೆ ಹೋಗಿದ್ದು, ಭೂ ನ್ಯಾಯಮಂಡಳಿ 40 ಎಕರೆ ಭೂಮಿಯನ್ನು ಮಂಜೂರು ಮಾಡುವಂತೆ ಆದೇಶ ನೀಡಿದೆ. ಪ್ರಕರಣ ಧಾರವಾಡ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದು, ಪ್ರಸ್ತುತ ಸ್ಟೇ ಆದೇಶ ಜಾರಿಯಲ್ಲಿದೆ ಎಂದು ಅವರು ವಿವರಿಸಿದರು.

ಇಂತಹ ಸಂದರ್ಭದಲ್ಲಿಯೇ ಮತ್ತೆ 17 ಎಕರೆ ಭೂಮಿಯಲ್ಲಿ ಕಾಮಗಾರಿಗಳಿಗೆ ಆದೇಶಗಳನ್ನು ಪಡೆಯಲಾಗಿದ್ದು, ಅವನ್ನು ಜಾರಿಗೆ ತರುವ ಮೂಲಕ ನ್ಯಾಯಾಲಯದ ಆದೇಶವನ್ನು ಉಲಂಘಿಸಲಾಗುತ್ತಿದೆ ಎಂದು ಆರೋಪಿಸಿದರು.

ಸ್ಟೇ ಆದೇಶ ಇದ್ದರೂ ಅಧಿಕಾರಿಗಳು ಒತ್ತಡಕ್ಕೆ



ಒಳಗಾಗಿ ಕ್ರಮ ಕೈಗೊಳ್ಳುತ್ತಿರುವುದು ವಿಷಾದನೀಯ.

ಮಠದ ಭೂಮಿಯನ್ನು ಧಾರ್ಮಿಕ ಉದ್ದೇಶಗಳಿಗೆ ಮೀಸಲಿಟ್ಟಿರುವುದರಿಂದ, ಬೇರೆ ಉದ್ದೇಶಗಳಿಗೆ ಬಳಸಲು ಯಾವುದೇ ರೀತಿಯ ಅವಕಾಶ ನೀಡುವುದಿಲ್ಲ ಎಂದು ಭಕ್ತರು ಸ್ಪಷ್ಟಪಡಿಸಿದರು.

ಈ ವೇಳೆ ಪ್ರಭು ಅಂಗಡಿ ಮಾತನಾಡಿ, 'ಶಾಸಕರು ಐದು ವರ್ಷಕ್ಕೊಮ್ಮೆ ಬದಲಾಗುತ್ತಾರೆ; ಆದರೆ ನಾವು ಭಕ್ತರು ಶಾಶ್ವತ. ನ್ಯಾಯಾಲಯ ಯಾವ ತೀರ್ಪು ನೀಡಿದರೂ ಅದಕ್ಕೆ ನಾವು ಬದ್ಧರಾಗಿದ್ದೇವೆ. ಆದರೆ ತೀರ್ಪು ಬರುವ ಮೊದಲು ಯಾವುದೇ ಚಟುವಟಿಕೆ ಕೈಗೊಳ್ಳುವುದು ಸರಿಯಲ್ಲ ಎಂದರು.

ಪ್ರಾಣ ಕೊಡುತ್ತೇವೆ, ಭೂಮಿ ಕೊಡುವುದಿಲ್ಲ. ಮಠದ ಜಾಗದಲ್ಲಿ ಯಾವುದೇ ಕಟ್ಟಡ ನಿರ್ಮಾಣಕ್ಕೆ ಅವಕಾಶ ನೀಡುವುದಿಲ್ಲ,' ಎಂದು ಅವರು ಎಚ್ಚರಿಸಿದರು.

ಒಟ್ಟು 214 ಎಕರೆ ಮಠದ ಭೂಮಿಯಲ್ಲಿ ಈಗಾಗಲೇ ನವೋದಯ ಶಾಲೆ, ಐಟಿಐ ಕಾಲೇಜು, ಮುರಾರ್ಜಿ ಅಲ್ಪಸಂಖ್ಯಾತರ ಶಾಲೆ, ಸರ್ಕಾರಿ ಪದವಿ ಕಾಲೇಜು ಸೇರಿದಂತೆ ಹಲವು ಕಟ್ಟಡಗಳು ನಿರ್ಮಾಣಗೊಂಡಿವೆ. ಉಳಿದ ಭೂಮಿಯಲ್ಲಿ ಮತ್ತಷ್ಟು ಕಟ್ಟಡಗಳನ್ನು ನಿರ್ಮಿಸಿದರೆ ಜಾತ್ರೆ ಸೇರಿದಂತೆ ಧಾರ್ಮಿಕ ಚಟುವಟಿಕೆಗಳಿಗೆ ಅಡಚಣೆ ಉಂಟಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಸರ್ಕಾರಿ ಕಟ್ಟಡಗಳ ನಿರ್ಮಾಣಕ್ಕೆ ಪರ್ಯಾಯ ಸ್ಥಳವನ್ನು ಆಯ್ಕೆ ಮಾಡಬಹುದಾಗಿದೆ. ಅದಕ್ಕೆ ಭಕ್ತರು ಸಹಕಾರ ನೀಡಲು ಸಿದ್ಧರಾಗಿದ್ದಾರೆ. ಆದರೆ ಮಠದ ಭೂಮಿಯನ್ನು ಯಾವುದೇ ಕಾರಣಕ್ಕೂ ಬಿಡುವುದಿಲ್ಲ. ಈ ಸಂಬಂಧದ ವ್ಯಾಜ್ಯ ಈಗಾಗಲೇ ನ್ಯಾಯಾಲಯದಲ್ಲಿದ್ದು, ಅಂತಿಮ ತೀರ್ಪಿಗೆ ಬದ್ಧರಾಗಿರುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ, ಗ್ರಾಮದಲ್ಲಿ ಅನಾವಶ್ಯಕವಾಗಿ ಭೂ ಸರ್ವೇ ಹಾಗೂ ಮನೆಗಳ ಸರ್ವೇ ನಡೆಸಿ ಗ್ರಾಮಸ್ಥರನ್ನು ಭಯಭೀತರನ್ನಾಗಿ ಮಾಡಲಾಗುತ್ತಿದೆ. ಇದು ಅಧಿಕಾರ ದುರುಪಯೋಗದ ಉದಾಹರಣೆ ಎಂದು ದೂರಿದರು.

ನ್ಯಾಯಾಲಯದ ಅಂತಿಮ ಆದೇಶ ಬರುವವರೆಗೆ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳದಂತೆ ತಕ್ಷಣ ಕ್ರಮ ವಹಿಸಬೇಕು. ಇಲ್ಲವಾದಲ್ಲಿ ಸಂಭವಿಸಬಹುದಾದ ಅನಾಹುತಗಳಿಗೆ ಜಿಲ್ಲಾ ಆಡಳಿತ ಹಾಗೂ ಸರ್ಕಾರವೇ ನೇರ ಹೊಣೆಗಾರರಾಗುತ್ತದೆ ಎಂದು ಎಚ್ಚರಿಸಿದರು.

ಈಗಾಗಲೇ ನೀಡಿರುವ ಆದೇಶಗಳನ್ನು ರದ್ದುಪಡಿಸಿ, ಮಠದ ಆಸ್ತಿಯಲ್ಲಿ ಯಾವುದೇ ನಿರ್ಮಾಣ ಕಾರ್ಯ ಕೈಗೊಳ್ಳದಂತೆ ಕ್ರಮ ವಹಿಸುವಂತೆ ಭಕ್ತರು ಆಗ್ರಹಿಸಿದರು.

ಬಳಿಕ ಭಕ್ತರು ಕುಕನೂರು ತಹಶೀಲ್ದಾರ್ ಕಚೇರಿಗೆ ತೆರಳಿ ಶಿರಸ್ತೇದಾರ ಬಸವರಾಜ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಗುದ್ನೇಶ್ವರ ಸ್ವಾಮಿ ಭಕ್ತರಾದ ಗದಗ ಜಿಲ್ಲೆಯ ನೀಲಗುಂದ ಗ್ರಾಮದ ಶೇಖಪ್ಪ ಕಟ್ಟಳ್ಳಿ, ಬಸಯ್ಯ ಸಾಲಿಮಠ, ಮಂಜಪ್ಪ ಇಟಗಿ, ವೀರಭದ್ರಪ್ಪ ತಿರ್ಲಾಪುರ, ಚನ್ನಪ್ಪ ತಿರ್ಲಾಪುರ, ಸುಭಾಷ್ ಯತ್ನಳ್ಳಿ ಹಾಗೂ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ


ಮಲ್ಲಿಗೇವಾಡ್ ಗ್ರಾಮದ ಎನ್.ಡಿ. ಭಾವಿಕಟ್ಟಿ, ಶಿವಯ್ಯ ಬಾಗೇವಾಡ, ರಾಮಣ್ಣ ಮೆಣಸಿನಕಾಯಿ, ಗುರುಪಾದಯ್ಯ ಹೆಬ್ಬಾಳಮಠ, ಬುದಯ್ಯ, ಗುರಯ್ಯ ಕಡೆದ, ಚಂದ್ರಶೇಖರಪ್ಪ ಸುಗ್ನಳ್ಳಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕಾಲೇಜಿನಲ್ಲಿ ಚಿಕ್ಕ ಸೊಸೆ ನಾಟಕ ವಿದ್ಯಾರ್ಥಿಗಳಿಂದ ಸಂವಾದ

ಮುದಗಲ್ : ಪಟ್ಟಣದ ಶ್ರೀ ಪದ್ಮಾವತಿ ಬಾಯಿ ರಾಘವೇಂದ್ರರಾವ್ ದೇಶಪಾಂಡೆ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕವಿ ಪಿ.ಬಿ ಧುತ್ತರಗಿ ರಚಿತ ಚಿಕ್ಕ ಸೊಸೆ ನಾಟಕ ಕೃತಿ ಪರಿಚಯದಿಂದ ವಿದ್ಯಾರ್ಥಿಗಳ ಓದು- ಅಭಿಪ್ರಾಯ-ಸಂವಾದ ಕಾರ್ಯಕ್ರಮ ಗುರುವಾರ ಜರುಗಿತು.

ರಂಗಗೀತೆ ಮೂಲಕ ಇತಿಹಾಸ ವಿಭಾಗದ ಮುಖ್ಯಸ್ಥ ಭೀಮಶಂಕರ ಕಾರ್ಯಕ್ರಮದ ಉದ್ಘಾಟನೆ ಮಾಡಿದ ಬಳಿಕ ಮಾತನಾಡಿದ ಅವರು ಸಾಮಾನ್ಯವಾಗಿ ಅತ್ತೆ ಮತ್ತು ಸೊಸೆಯ ನಡುವಿನ ಮನಸ್ತಾಪದ ಕಲಹಗಳು ಬಹುತೇಕರ ಮನೆಯಲ್ಲಿ ಬಗೆಹರಿಸದ ಸಮಸ್ಯೆಯಾಗಿದೆ. ಇದರಲ್ಲಿ ಮುಖ್ಯವಾಗಿ ಹೊಂದಾಣಿಕೆ ಕಾರಣವಾಗಿದೆ. ಅತ್ತೆ ಸೊಸೆ ಸಂಬಂಧ ಅತ್ಯಂತ ಸೂಕ್ಷ್ಮವಾದದ್ದು. ಇವರಿಬ್ಬರಲ್ಲಿ ಭಿನ್ನಾಭಿಪ್ರಾಯ ಬಂದರೆ ಮನೆಯಲ್ಲಿ ಅಶಾಂತಿಯಾಗುವದು. ಸಾಮಾನ್ಯವಾಗಿ ಒಟ್ಟಿಗೆ ಇರುವುದಿಲ್ಲ. ಸೊಸೆಯನ್ನು ಶೋಷಣೆ ಮಾಡುವುದು ಹಿರಿತನದ ಹೆಗ್ಗಳಿಕೆಯೆಂದು ಭಾವಿಸುವ ಅತ್ತೆಯಾಗಲಿ ಕಾಣುವುದು ವಿರಳವಾಗಿದೆ ಹೀಗಾಗಿ ಮುಂಬರುವ ದಿನಗಳಲ್ಲಿ ತಾವೆಲ್ಲರೂ ಪ್ರತಿಯೊಬ್ಬರು ಮನೆಯ ಗ್ರಹಣಿ ಯಾಗುತ್ತಿರಿ ಇದಿನಿಂದಲೇ ನಾವು ಸಂಸ್ಕಾರವಂತರಾಗಿ, ಪರಸ್ಪರ ಒಬ್ಬರಿಗೊಬ್ಬರು ಗೌರವ ನೀಡುತ್ತಾ ಸಹ ಬಾಳ್ವೆಯಾ ಜೀವನ ಹಾದಿ ಹಿಡಿಯಬೇಕೆಂದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗ ಮುಖ್ಯಸ್ಥ ದೊಡ್ಡಬಸಪ್ಪ ಹುಡೆದಗಡ್ಡಿ ಚಿಕ್ಕ ಸೊಸೆ ಕೃತಿ ಪುಸ್ತಕ ಪರಿಚಯ ಮಾಡಿಸಿದರು, ಸಂಚಾಲಕ ಹಾಗೂ ಉಪನ್ಯಾಸಕ ಎಂ.ಡಿ ಚಿತ್ತರಗಿ ಪ್ರಾಸ್ತವಿಕ ನುಡಿ ಮಾತನಾಡಿದರು. ಕಾಲೇಜು ವಿದ್ಯಾರ್ಥಿಗಳಿಗೆ ಕೃತಿ




ಪರಿಚಯದಿಂದ ವಿದ್ಯಾರ್ಥಿಗಳ ಓದು-ಅಭಿಪ್ರಾಯ-ಸಂವಾದ ಜರುಗಿತು.

ಕಾರ್ಯಕ್ರಮದ ಅಧ್ಯಕ್ಷತೆ ಪಿಬಿ ಧುತ್ತರಗಿ ಟ್ರಸ್ಟ್ ಸೂಳೇಬಾವಿ ( ಬಾಗಲಕೋಟೆ ) ಎಸ್ಕೆ ಕೊನೆ ಸಾಗರ್ ವಹಿಸಿದ್ದರು. ಸಿದ್ದಲಿಂಗಪ್ಪ ಬೀಳಗಿ, ಸುನಂದ ಕಂದಗಲ್, ಡಾ. ರವಿಚಂದ್ರ, ಕಾಲೇಜ್ ಸಿಬ್ಬಂದಿಗಳು ನಾಗರಾಜ, ಅಯ್ಯಪ್ಪ, ಕು. ಭವ್ಯ, ಮರಿಯಪ್ಪ ಸೇರಿದಂತೆ ಕಾಲೇಜು ವಿದ್ಯಾರ್ಥಿಗಳು, ಉಪಉಪನ್ಯಾಸಕರು ಇದ್ದರು.

# ಸಂಭ್ರಮದ ಹನುಮನ ಜಯಂತಿ: ಹಣ್ಣಿನ ಅಲಂಕಾರದಲ್ಲಿ ಯಲಗೂರೀಶ ಹನುಮ

ಮಲ್ಲಮ್ಮ ನುಡಿ ವಾರ್ತೆ ಆಲಮಟ್ಟಿ

ಯಲಗೂರ ಗ್ರಾಮದ ಹನುಮಾನ ದೇವಸ್ಥಾನದಲ್ಲಿ ಬುಧವಾರ ಸಂಭ್ರಮದಿಂದ ಹನುಮಾನ ಜಯಂತಿ ಆಚರಿಸಲಾಯಿತು.

ಬೆಳಿಗ್ಗೆ ಪಲ್ಲಕ್ಕಿಯಲ್ಲಿ ಶ್ರೀ ಯಲಗೂರೇಶ್ವರನ ಉತ್ಸವ ಮೂರ್ತಿಯನ್ನು ನೂರಾರು ಭಕ್ತರ ಮಧ್ಯೆ ಸಕಲ ವಾದ್ಯಗಳೊಂದಿಗೆ ಕೃಷ್ಣಾ ನದಿಗೆ ತೆರಳಿ ಗಂಗಾಪೂಜೆ ಸಲ್ಲಿಸಿ, ನಂತರ ದೇವಸ್ಥಾನಕ್ಕೆ ತರಲಾಯಿತು.

ನಂತರ ಹನುಮನ ಉತ್ಸವ ಮೂರ್ತಿಯನ್ನು ತೊಟ್ಟಿಲಲ್ಲಿ ಹಾಕಿ ಪವನ ಸುತನ ಜಯಂತಿ ಭಕ್ತಿ ಭಾವದಿಂದ ಆಚರಿಸಲಾಯಿತು.

ನೆರೆದಿದ್ದ ಮಹಿಳೆಯರು ಪವನ ಸುತನ ಭಕ್ತಿಗೀತೆಗಳನ್ನು ಹಾಡಿದರು. ಯಲಗೂರೇಶನಿಗೆ ಸಾಮೂಹಿಕ ಪಂಚಾಮೃತ ಅಭೀಷೇಕ, ಮಹಾಪೂಜೆ, ಮಹಾನೈವೇದ್ಯ, ಅನ್ನಸಂತರ್ಪಣೆ ಜರುಗಿದವು.

ಹಣ್ಣಿನ ಅಲಂಕಾರ:

ಹನುಮ ಜಯಂತಿ ಅಂಗವಾಗಿ ಪಂಡರಾಪುರದ ಹಿರೇಮಠ ಭಕ್ತರು ನೀಡಿದ ಮಾವಿನ ಹಣ್ಣು ಹಣ್ಣುಗಳಿಂದ ಯಲಗೂರೇಶನಿಗೆ ಅಲಂಕಾರ ಮಾಡಲಾಗಿತ್ತು



ಹನುಮಜಯಂತಿ ವಿಶೇಷವಾಗಿತ್ತು

ಟ್ರಸ್ಟ್ ಕಮಿಟಿ ಅಧ್ಯಕ್ಷ ಅನಂತ ಓಂಕಾರ, ಶ್ಯಾಮ ಪಾತರದ, ವಿಠ್ಠಲಾಚಾರ್ಯ ಗದ್ದನಕೇರಿ, ಬದರಿನಾರಾಯಣ ಚಿಮ್ಮಲಗಿ, ಭೀಮಪ್ಪ ಪೂಜಾರ, ಗೋಪಾಲ ಗದ್ದನಕೇರಿ, ಸೇರಿದಂತೆ ಹಲವರು ಭಾಗಿಯಾದರು.

# ಗರ್ಭಿಣಿಯರ ರಕ್ತ ಹೀನತೆ ಎಚ್ಚರಿಕೆ ಕುರಿತು ತಾಯಂದಿರು ಮನವರಿಕೆ



• **ಮಲ್ಲಮ್ಮ ನುಡಿ ವಾರ್ತೆ , ಸಿಂಧನೂರು**

ತಾಲೂಕಿನ ಹೊಸಳ್ಳಿ( ಇಜೆ ) ಒಂದನೇ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಲ್ಲಿ ಗೀತಾ ಹಿರೇಮಠ್ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ತಾಲೂಕ ಅರೋಗ್ಯಾಧಿಕಾರಿಗಳ ಸಿಂಧನೂರು.

ಇವರು ಮಾತನಾಡಿ ತಾಯಂದಿರು ಮತ್ತು ಗರ್ಭಿಣಿಯರನ್ನು ಉದ್ದೇಶಿಸಿ ರಕ್ತ ಹೀನತೆಯ ಕುರಿತು ಬೇಸಿಗೆಯಲ್ಲಿ ತಗೆದುಕೋಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ತಾಯಂದಿರಿಗೆ ಮನವರಿಕೆ ಮಾಡಿಸಲಾಯಿತು

ಬೇಸಿಗೆಯಲ್ಲಿ ಮಕ್ಕಳ ಸುರಕ್ಷತೆ ತುಂಬ ಮುಖ್ಯ ಬೇಸಿಗೆಯಲ್ಲಿ ಮಕ್ಕಳನ್ನು ಆರೋಗ್ಯವಾಗಿಡಲು ಅವರನ್ನು ಹೈಡ್ರಿಕರಿಸಿದಂತೆ ಹೆಚ್ಚು ನೀರು ದ್ರವ ಪದಾರ್ಥ ಗಳಿಂದ ಸೇವಿಸುವಂತೆ ನೋಡಿಕೊಂಡು ಸಡಿಲವಾದ ಹತ್ತಿ ಬಟ್ಟೆಗಳನ್ನ ಧರಿಸಿ 11:00 ಯಿಂದ ಸಂಜೆ 4:00 ವರೆಗೆ ನೇರವಾಗಿ ಸೂರ್ಯನ ಬೆಳಕನ್ನು ತಪ್ಪಿಸಿ ಮತ್ತು ಹಾಗಾಗಿ ಸ್ನಾನ ಮಾಡಿಸಿ ಮಕ್ಕಳ ಚರ್ಮದ ರಕ್ಷಣೆ ಸಂಸ್ಕ್ರೀನ್ ಬಳಸಿ ಮತ್ತು ಸೋಂಕು ತಡೆಗಟ್ಟಲು ಕುದಿಸಿದೆ ಆರಿಸಿದ ನೀರನ್ನು ಕುಡಿಸಿ ಬೇಸಿಗೆಯಲ್ಲಿ ಮಕ್ಕಳ ಆರೈಕೆಯಾಗಿ ನಿರ್ಜಲೀಕರಣವಗದಂತೆ ಆರು ತಿಂಗಳಿಗಿಂತ ಮೇಲ್ಪಟ್ಟ ಮಕ್ಕಳಿಗೆ ಹಾಗಾಗಿ ನೀರು ಎಳೆನೀರು ಹಣ್ಣಿನ ರಸ ಮಜ್ಜಿಗೆಯನ್ನು ನೀಡಿ ಸ್ತನ್ಯ ಪಾನ ಮಾಡುವ ಶಿಶುಗಳಿಗೆ ಹೆಚ್ಚಾಗಿ ಹಾಲುಣಿಸಿಬೇಕು ಉಡುಪು ಮತ್ತು ಚರ್ಮದ ರಕ್ಷಣೆ ಅಗುರವಾದ ಸಡಿಲವಾದ ಹತ್ತಿ ಬಟ್ಟೆಗಳನ್ನ ಬಳಸಿ ಬಿಸಿಲಿಗೆ ಹೋದಾಗ ಟೋಪಿ ಮತ್ತು ಛತ್ರಿ ಇರುವಂತೆ ನೋಡಿಕೊಳ್ಳಬೇಕು

ಮಧ್ಯಾಹ್ನದ ಕಡು ಬಿಸಿಲಿನಲ್ಲಿ ಹೊರಾಂಗಣ ಆಟಗಳನ್ನು ತಪ್ಪಿಸಿ ತಂಪಾದ ವಾತಾವರಣವನ್ನು ಕೋಣೆ/ ಆರಂಭದಾಯಕವಾಗಿ ಇರಿಸಿ ಹಾಗಾಗಿ ಉಗುರು ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡಿಸಿ ಬೆವರು ದದ್ದುಗಳ ನಿವಾರಣೆ ಸುರಕ್ಷತೆ ಈ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವುದರಿಂದ ಮಕ್ಕಳನ್ನು ನಿರ್ಜಲೀಕರಣ ಸಂವರ್ ಮತ್ತು ಶಾಖದ ದದ್ದುಗಳಿಂದ ರಕ್ಷಿಸಬಹುದು ಮತ್ತು ವಯಸ್ಸಾದವರು ಅನಗತ್ಯವಾಗಿ ಹೊರಗಡೆ ಹೋಗದಂತೆ ನೋಡಿಕೊಳ್ಳುವುದು

ಹೊರಗಡೆ ಹೋಗುವ ಸಂದರ್ಭದಲ್ಲಿ ಛತ್ರಿ ಬಳಸುವುದು ಮತ್ತು ಪೌಷ್ಟಿಕ ಆಹಾರ ಸೇವನೆ ಸಾರ್ವತ್ರಿಕ ಮಕ್ಕಳ ಲಸಿಕಾ ಕರಣದಲ್ಲಿ ಲಸಿಕೆಗಳನ್ನು ಹಾಕಿಸುವುದು 12 ಮಾರಕ ರೋಗಗಳನ್ನು ತಡೆಗಟ್ಟುವುದರಿಂದ ಲಸಿಕೆಯನ್ನು ಹಾಕಿಸುವುದು ಮಕ್ಕಳನ್ನು ಲಸಿಕೆ ವಂಚನೆಯಾಗದಂತೆ ನೋಡಿಕೊಳ್ಳಬೇಕು ಎಂದು ಹೇಳಿದರು ಈ ಸಂದರ್ಭದಲ್ಲಿ. ನಿಂಗಮ್ಮ ಪಿಎಚ್ ಸಿಇಒ, ಮಲ್ಲಿಕಾರ್ಜುನ ಎ□□□ಒ, ಅಂಗನವಾಡಿ ಕಾರ್ಯಕರ್ತೆಯರು ಆಶಾ ಕಾರ್ಯಕರ್ತೆಯರು ತಾಯಂದಿರು ಗರ್ಭಿಣಿಯರು ಉಪಸ್ಥಿತರಿದ್ದರು.

# ಏ, 5 ಕ್ಕೆ ಉಪನ್ಯಾಸ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಇಲ್ಲಿನ ಡಾ.ರಾಜ್ಕುಮಾರ್ ರಸ್ತೆಯಲ್ಲಿರುವ ಪಾಂಚಜನ್ಯ ಸಭಾಂಗಣದಲ್ಲಿ ಏಪ್ರಿಲ್ 5ರಂದು ಸಂಜೆ 6 ಗಂಟೆಗೆ ವಿಜಯಪುರ–ಗದಗ ಶ್ರೀರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ


ಶ್ರೀ ಸ್ವಾಮಿ ನಿರ್ಭಯಾನಂದ ಸರಸ್ವತಿ ಅವರಿಂದ ಸಿಡಿಲ ಸನ್ಯಾಸಿ ಸ್ವಾಮಿ ವಿವೇಕಾನಂದರ

ಜೀವನ ಸಂದೇಶ ಕುರಿತಾದ ವಿವೇಕ ಮಂಟಪ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡ ಜೀರ್ಗ ಗುರುಮೂರ್ತಿ ಹಾಗೂ ರಾಮದೂತ ಕಂಪ್ಯೂಟರ್ಸ್ನ ಮಾಲೀಕ ಕೆ.ಎಸ್.ಬಾಬು ಅವರು ಅತಿಥಿಗಳಾಗಿ ಉಪಸ್ಥಿತರಿರುವರು. ಉಪನ್ಯಾಸಕ್ಕೂ ಮುನ್ನ ಬೆಳಗಲ್ಲು ಹನುಮಂತ ಹಾಗೂ ಬೆಳಗಲ್ಲು ರೇಖಾ ಅವರಿಂದ ಭಕ್ತಿ ಸಂಗೀತ

ನಡೆಯಲಿದೆ. ಮುದ್ದಟನೂರು ಎಚ್.ತಿಪ್ಪೇಸ್ವಾಮಿ ಹಾರ್ಮೋನಿಯಂ, ಯೋಗೇಶ್ ಸಂಗನಕಲ್ಲು ತಬಲಾ ಸಾಥ್ ನೀಡುವರು. 2015ರಿಂದ ಸ್ವಾಮಿ ನಿರ್ಭಯಾನಂದ ಶ್ರೀಗಳು ಬಳ್ಳಾರಿಗೆ ಆಗಮಿಸಿ ಉಪನ್ಯಾಸ

ನೀಡುತ್ತಿದ್ದು, ಈ ಭಾಗದ ಭಕ್ತರ ಆಪೇಕ್ಷೆಯ ಮೇರೆಗೆ ಪ್ರತಿ ತಿಂಗಳ ಮೊದಲ ಭಾನುವಾರನಗರದ ಪಾಂಚಜನ್ಯ ಸಭಾಂಗಣದಲ್ಲಿ ಸ್ವಾಮಿ ವಿವೇಕಾನಂದರ ಜೀವನ ಸಂದೇಶಗಳ ಕುರಿತು ವಿವೇಕ ಲೀಲಾಮೃತ' ಉಪನ್ಯಾಸ ನೀಡಲಿದ್ದಾರೆ ಎಂದು ವಿವೇಕ ಮಂಟಪ ಸಂಯೋಜಕ ಪ್ರಭುದೇವ ಕಪ್ಪಗಲ್ಲು ಅವರು ತಿಳಿಸಿದ್ದಾರೆ.

# ಕಾರುಣ್ಯ ಆಶ್ರಮದಲ್ಲಿ ಲಿಂಗೈಕ್ಯ ಶಿವಕುಮಾರ್ ಮಹಾಸ್ವಾಮಿಗಳು 119 ನೇ ಜಯಂತೋತ್ಸವ





• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು**

ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಶ್ರೀಮಠ ಸೇವಾ ಟ್ರಸ್ಟ್(ರಿ)ಹರೇಟನೂರು ಸ್ವಾಮಿ ಚಾರಿಟೇಬಲ್ ಟ್ರಸ್ಟ್ (ರಿ) ಕರಡಕಲ್ ಲಿಂಗಸೂಗೂರು. ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್(ರಿ) ಸಿಂಧನೂರು. ಹಾಗೂ ಆದಿಶಕ್ತಿ ಶ್ರೀ ದ್ಯಾವಮ್ಮ ದೇವಿ ದೇವಸ್ಥಾನ ಸಮಿತಿ,(ರಿ) ಹರೇಟನೂರ ವತಿಯಿಂದ ತ್ರಿವಿಧ ದಾಸೋಹಿ ಮೂರ್ತಿಗಳಾದ ಲಿಂಗೈಕ್ಯ ಶ್ರೀ ಡಾ.ಶಿವಕುಮಾರ ಮಹಾಸ್ವಾಮಿಗಳು ಸಿದ್ದಗಂಗಾ ಮಠ ತುಮಕೂರು ಇವರ 119ನೇ ವರ್ಷದ ಜಯಂತೋತ್ಸವ ಕಾರ್ಯಕ್ರಮವು ಅರ್ಥಪೂರ್ಣವಾಗಿ ನೆರವೇರಿತು.

ಇಂದಿನ ಈ ಕಾರ್ಯಕ್ರಮದ ಮಹಾಪ್ರಸಾದ ಸೇವೆಯನ್ನು ಚಿದಾನಂದ ಹೂಗಾರ ಗಂಗಾವತಿ ಇವರು ಆಶ್ರಮದಲ್ಲಿ ಇಡೀ ದಿನದ ಮಹಾಪ್ರಸಾದ ಸೇವೆಯನ್ನು ಸಲ್ಲಿಸಿ ಆಶ್ರಯದಾತರುಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಸಿದ್ದಗಂಗಾ ಶ್ರೀಗಳ ಜಯಂತೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನೆರವೇರಿಸಿದರು.

ಈ ಕಾರ್ಯಕ್ರಮದಲ್ಲಿ ಚೇತನ ಫೌಂಡೇಶನ್ ಧಾರವಾಡ ಗಂಧದ ಗುಡಿ ಕನ್ನಡ ಸಂಘ ಬೆಂಗಳೂರು ಮತ್ತು ಕಾರುಣ್ಯ ಆಶ್ರಮ ಸಿಂಧನೂರು ಇವರುಗಳಿಂದ ಗಂಗಾವತಿಯ ಸಮಾಜ ಸೇವಕರಾದ ಚಿದಾನಂದ ಹೂಗಾರ ಇವರಿಗೆ " ಸಿದ್ದಗಂಗಾ ಶ್ರೀ ರಾಷ್ಟ್ರೀಯ ಸೇವಾ ಸ್ಪೂರ್ತಿ " ಏನ್ ಓ ಶ್ರೇಷ್ಠ ಪ್ರಶಸ್ತಿಯನ್ನು ವಿತರಿಸಿ ಗೌರವಿಸಿ ಆಶೀರ್ವದಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕಾರುಣ್ಯ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು ಮಾತನಾಡಿ ನಮ್ಮ ನಾಡಿನಲ್ಲಿ ಜನಿಸಿದ ಮಹಾನ್ ಚೇತನ ಸಿದ್ದಗಂಗಾ ಶ್ರೀಗಳು ವಿಶ್ವ ಕಂಡಂತಹ ಶ್ರೇಷ್ಠ ಶರಣ–ರಾಗಿದ್ದರು. ಅವರು ಅಕ್ಷರ ಅನ್ನ ಜ್ಞಾನದಾಸೋಹದ ಮೂರ್ತಿಗಳಾಗಿದ್ದರು.

ಇಂತಹ ನಡೆದಾಡುವ ದೇವರ ಜಯಂತೋತ್ಸವ ಕಾರ್ಯಕ್ರಮ ಪ್ರತಿ ವರ್ಷವೂ ಕೂಡ ಕಾರುಣ್ಯ ಕುಟುಂಬದಿಂದ ನೆರವೇರಿಸಿ ಒಬ್ಬ ಮಹಾನ್ ಸಾಧಕರನ್ನು ಗೌರವಿಸುವುದು ಕಾರುಣ್ಯ ಸಂಸ್ಥೆಯ ಮೂಲ ಉದ್ದೇಶವಾಗಿದೆ. ಸಿದ್ದಗಂಗಾ ಶ್ರೀಗಳು ಜಗತ್ತು ಕಂಡ ದೇವಮಾನವರಾಗಿದ್ದರು.

ಅದೆಷ್ಟು ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ತಾವು ಜೋಳಿಗೆ ಹಾಕಿ ಶಿಕ್ಷಣ ಸಂಸ್ಕಾರ ಸಂಸ್ಕೃತಿಯನ್ನು ಸಮಾಜದಲ್ಲಿ ಪ್ರತಿಯೊಬ್ಬರಿಗೂ ಕೂಡ ಅಳವಡಿಸಿ ಸಾಮಾಜಿಕ ಕಳಕಳಿಯನ್ನು ಜಗತ್ತಿಗೆ ತೋರಿಸಿಕೊಟ್ಟಂತಹ ನಮ್ಮ ಅಪ್ಪಾಜಿ ಕಾರುಣ್ಯ ಕುಟುಂಬದ ನಡೆದಾಡುವ ದೇವರಾಗಿದ್ದಾರೆ.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರವೀಣ್ ಕುಮಾರ್. ಶೈಲಜಾ ಹಿರೇಮಠ.ಶರಣಮ್ಮ ಹಿರೇಮಠ. ಶ್ರೀಮಠ ಸೇವಾ ಟ್ರಸ್ಟ್ ನ ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮೀನಾಕ್ಷಮ್ಮ. ಲಕ್ಷ್ಮಿ. ಹಾಗೂ ಅನೇಕರು ಉಪಸ್ಥಿತರಿದ್ದರು.

# ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಮನವಿ



• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಬಾಲ್ಯವಿವಾಹ ಸಮಾಜದ ಪಿಡುಗಾಗಿದ್ದು, ಬಾಲ್ಯ ವಿವಾಹವನ್ನು ತಡೆಗಟ್ಟಲು ಸಾರ್ವಜನಿಕರು ಅಧಿಕಾರಿಗಳೊಂದಿಗೆ ಕೈಜೋಡಿಸಬೇಕು. ಬಾಲ್ಯವಿವಾಹ ಪ್ರಕರಣಗಳು ಕಂಡುಬಂದಲ್ಲಿ ತಕ್ಷಣ ತುರ್ತಾಗಿ ಮಕ್ಕಳ ಸಹಾಯವಾಣಿ–1098, ಪೊಲೀಸ ಸಹಾಯವಾಣಿ 112, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ದೂರವಾಣಿ ಸಂಖ್ಯೆ: 08482–234003 ಕರೆ ಮಾಡಿ, ಬಾಲ್ಯವಿವಾಹವೆಂಬ ಅನಿಷ್ಠ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸಹಕಾರಿಯಾಗಿ ಮಕ್ಕಳಿಗೆ ಬಾಲ್ಯವನ್ನು ಸಂಪೂರ್ಣವಾಗಿ ಅನುಭವಿಸಲು ಅವಕಾಶ ನೀಡಿ ಜಿಲ್ಲೆಯನ್ನು ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಸಾರ್ವಜನಿಕರು ಸಹಕರಿಸಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲ್ಯವಿವಾಹವು ಒಂದು ಅಭಿವೃದ್ಧಿಗೆ ಮಾರಕವಾಗಿರುವ ಸಮಸ್ಯೆಯಾಗಿದೆ. ಬಾಲ್ಯ ವಿವಾಹವನ್ನು ತಡೆಗಟ್ಟುವುದು ನಮ್ಮೆಲ್ಲರ ಕರ್ತವ್ಯ. ಬಾಲ್ಯ ವಿವಾಹವು ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧ. "ಬಾಲ್ಯ ವಿವಾಹ ನಿಷೇಧ ಕಾಯ್ದೆ –2006"ರ ಪ್ರಕಾರ 18ವರ್ಷದೊಳಗಿನ ಯಾವುದೇ ಹೆಣ್ಣು ಮಗುವಿಗೆ ಹಾಗೂ 21 ವರ್ಷದೊಳಗಿನ ಯಾವುದೇ ಗಂಡು ಮಗುವಿಗೆ ಮದುವೆಯಾದಲ್ಲಿ ಅದನ್ನು "ಬಾಲ್ಯ ವಿವಾಹ" ಎಂದು ಪರಿಗಣಿಸಲಾಗಿದೆ. ಈ ಕಾಯ್ದೆಯ ಪ್ರಕಾರ ಬಾಲ್ಯ ವಿವಾಹ ಆದಲ್ಲಿ ಕೇವಲ ಮದುವೆಯಾಗುವ ವಯಸ್ಕನಿಗೆ ಹಾಗೂ ಹುಡುಗಿಯ ತಂದೆ ತಾಯಿಗಳಿಗಲ್ಲದೇ, ಪೂಜಾರಿಗಳು, ಸಂಬಂಧಿಕರು, ಪ್ರೇರೇಪಿಸಿದವರು, ಉತ್ತೇಜನ ನೀಡಿದವರು, ಬಾಲ್ಯ ವಿವಾಹ ತಡೆಯಲು ವಿಫಲರಾದವರು ಮತ್ತು ಭಾಗವಹಿಸಿದವರು ಎಲ್ಲರೂ ಅಪರಾಧಿಗಳೇ ಆಗುತ್ತಾರೆ. ಅವರ ಮೇಲೆ ಪ್ರಕರಣ ದಾಖಲಿಸಲು ಅವಕಾಶವಿರುತ್ತದೆ. ಬಾಲ್ಯ ವಿವಾಹ ನಿಷೇಧ(ಕರ್ನಾಟಕ ತಿದ್ದುಪಡಿ) ಅಧಿನಿಯಮ 2016ರ ಪ್ರಕಾರ ತಪ್ಪಿತಸ್ಥರಿಗೆ ಕನಿಷ್ಠ 1 ವರ್ಷದಿಂದ ಗರಿಷ್ಠ 2 ವರ್ಷಗಳವರೆಗೆ ಕಾರಾಗೃಹವಾಸ ಮತ್ತು ರೂ. 1.00 ಲಕ್ಷಗಳ ವರೆಗೆ ದಂಡ ಅಥವಾ ಎರಡನ್ನು ವಿಧಿಸಬಹುದಾಗಿದೆ.

ಆದ್ದರಿಂದ ಮದುವೆಯ ಆಮಂತ್ರಣ ಪತ್ರಿಕೆ ಮುದ್ರಿಸುವವರು ಮತ್ತು ಪೂಜಾರಿಗಳು, ಪೌರೋಹಿತ್ಯ ನಡೆಸುವವರು, ಮದುವೆಗಳನ್ನು ನೆರವೇರಿಸುವ ಮಠ/ಚರ್ಚ್/ಮಸೀದಿಗಳ ಧಾರ್ಮಿಕ ಮುಖಂಡರು, ಸಾಮೂಹಿಕ ವಿವಾಹದ ಆಯೋಜಕರು ಹಾಗೂ ಕಲ್ಯಾಣ ಮಂಟಪ/ಫಂಕ್ಷ□□ಹಾ□□ಗಳ ವ್ಯವಸ್ಥಾಪಕರುಗಳು ಇನ್ನು ಮುಂದೆ ಕಡ್ಡಾಯವಾಗಿ ವಧು ಮತ್ತು ವರರ ವಯಸ್ಸಿನ ದೃಢೀಕರಣ ಪತ್ರವನ್ನು ಕುಟುಂಬದವರಿಂದ ಪಡೆದು ಹುಡುಗನಿಗೆ 21 ವರ್ಷ ಹಾಗೂ ಹುಡುಗಿಗೆ 18 ವರ್ಷ ಪೂರ್ಣವಾಗಿದೆ ಎಂದು ಖಾತ್ರಿ ಪಡಿಸಿಕೊಂಡ ನಂತರವಷ್ಟೇ ಮದುವೆ ಲಗ್ನ ಪತ್ರಿಕೆಯನ್ನು ಮುದ್ರಿಸಬೇಕು ಹಾಗೂ ಮದುವೆ ಕಾರ್ಯ ನಡೆಸಲು ಒಪ್ಪಿಕೊಳ್ಳಬೇಕು. ವಧು ವರರ ವಯಸ್ಸಿನ ದೃಢೀಕರಣ ಪತ್ರಗಳಲ್ಲಿ ಜನನ ಪ್ರಮಾಣ ಪತ್ರ, ಶಾಲಾ ವಯಸ್ಸಿನ ದೃಢೀಕರಣ ಪತ್ರ ಎಸ್.ಎಸ್.ಎಲ್.ಸಿ ಅಂಕ ಪಟ್ಟಿ ಅಥವಾ ಸರಕಾರಿ ವೈದ್ಯರು ರೇಡಿಯೋಲಜಿ ಪರೀಕ್ಷೆ ನಡೆಸಿ, ನೀಡಿ ದೃಢೀಕರಿಸಿದ ವಯಸ್ಸಿನ ಪ್ರಮಾಣ ಪತ್ರ ಹೊಂದಿದವರು ಮಾತ್ರ ಮದುವೆಗೆ ಅರ್ಹರಾಗಿರುತ್ತಾರೆ. ಬೇರೆ ಯಾವುದೇ ವಯಸ್ಸಿನ ದೃಢೀಕರಣ ಪತ್ರಗಳು ಮದುವೆಗೆ ಅರ್ಹವಲ್ಲ ಎಂಬುದನ್ನು ಅರಿತು ಕುಟುಂಬದವರಿಂದ ಮೇಲೆ ತಿಳಿಸಿದ ನಿಗದಿತ ವಯಸ್ಸಿನ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಪಡೆಯಬೇಕು.

ಅದೇ ರೀತಿ ಬಾಲ್ಯ ವಿವಾಹ ಕಾಯ್ದೆಯ ಕುರಿತು ಜನರಲ್ಲಿ ಜಾಗೃತಿ ಇಲ್ಲದಿರುವುದರಿಂದ ಅಧಿಕ ಸಂಖ್ಯೆಯಲ್ಲಿ ಬಾಲ್ಯ ವಿವಾಹಗಳು ಇಂದಿಗೂ ಜರುಗುತ್ತಿದೆ. ಈ ಬಾಲ್ಯವಿವಾಹ ಎಂಬ ಅನಿಷ್ಠ ಪದ್ಧತಿಯನ್ನು ತೊಲಗಿಸಲು ಅಭಿಯಾನ ಮಾಡಬೇಕಾಗಿರುತ್ತದೆ. ಆದ್ದರಿಂದ ಎಲ್ಲಾ ಸರಕಾರಿ/ಸರಕಾರೇತರ ಶಾಲೆಗಳಲ್ಲಿ ರಾಷ್ಟ್ರಗೀತೆಯ ನಂತರ ಬಾಲ್ಯ ವಿವಾಹದ ದುಷ್ಪರಿಣಾಮ ಮತ್ತು ಶಿಕ್ಷೆಯ ಬಗ್ಗೆ ಮಾಹಿತಿ ನೀಡುವುದರ ಜೊತೆಗೆ ಮಕ್ಕಳಿಗೆ ಬಾಲ್ಯ ವಿವಾಹ ಮಾಡುವುದಿಲ್ಲವೆಂದು ಪ್ರಮಾಣ ವಚನ ಬೋಧನೆಯನ್ನು ಕಡ್ಡಾಯವಾಗಿ ಮಾಡಿಸತಕ್ಕದ್ದು. ಅದೇ ರೀತಿ ಎಲ್ಲಾ ಗ್ರಾಮ ಪಂಚಾಯ□□ಗಳಲ್ಲಿ ಬಾಲ್ಯವಿವಾಹಗಳನ್ನು ಜರುಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಡೊಂಗುರುವನ್ನು ಸಾರಬೇಕು.

ಸದರಿ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ, ಜಿಲ್ಲಾ, ತಾಲ್ಲೂಕಾ, ಗ್ರಾಮ ಪಂಚಾಯತಿ, ಗ್ರಾಮ/ನಗರಸಭೆ/ಪುರಸಭೆ ಮಟ್ಟದಲ್ಲಿ ಬಾಲ್ಯವಿವಾಹ ನಿಷೇಧಾಧಿಕಾರಿಗಳನ್ನು ನೇಮಿಸಲಾಗಿರುತ್ತದೆ. ಸದರಿ ಅಧಿಕಾರಿಗಳು ಬಾಲ್ಯ ವಿವಾಹ ತಡೆಗಟ್ಟಲು ಸಕ್ರಿಯವಾಗಿ ಕಾರ್ಯೋನ್ಮುಖರಾಗಬೇಕು. ಒಂದು ವೇಳೆ ಸದರಿ ಕಾರ್ಯದಲ್ಲಿ ಉದಾಸೀನತೆ ತೋರಿ ಬಾಲ್ಯವಿವಾಹ ತಡೆಯುವಲ್ಲಿ ವಿಫಲರಾದಲ್ಲಿ ಅವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಅವರು ತಿಳಿಸಿದ್ದಾರೆ.

# ಲಂಚ ಪಡೆದ ಗ್ರಾ, ಆಡಳಿತಾಧಿಕಾರಿ ವಿರುದ್ಧ ಕ್ರಮಕ್ಕೆ ಕಟ್ಟಿಮನಿ ಒತ್ತಾಯ




• **ಮಲ್ಲಮ್ಮ ನುಡಿ ವಾರ್ತೆ, ಮುದಗಲ್**

ಸಮೀಪದ ಕನಸಾವಿ ಗ್ರಾಮದ ಬಸನಗೌಡ ಹನುಮನಗೌಡ ಅವರ ವಂಶಾವಳಿ ಕೊಡಲು ಲಂಚ ಪಡೆದ ಗ್ರಾಮ ಆಡಳಿತಾಧಿಕಾರಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಡಿ.ಎಸ್. ಎಸ್ ತಾಲ್ಲೂಕು ಅಧ್ಯಕ್ಷ ಶರಣಪ್ಪ ಕಟ್ಟಿಮನಿ ಉಪ ತಹಶೀಲ್ದಾರ್ ಗೆ ಒತ್ತಾಯಿಸಿದರು.

ಕನಸಾವಿ ಗ್ರಾಮದ ರೈತ ರಾಮನಗೌಡ ಹನುಮಗೌಡ ಅವರು ತಮ್ಮ ವಂಶಾವಳಿ ಮಾಡಲು ಕೊಡಲು ವಿ.ಎ ಅವರ ಹತ್ತಿರ ಹೋಗಿ ವಿಚಾರಿಸಿದರು. ರೂ.8 ಸಾವಿರ ಆಗುತ್ತದೆ. ಕೊಡಿ ಎಂದು ಪಡೆದರು. ಆನ್ಲೈನ್ ಅರ್ಜಿ ಹಾಕಲು ಸೂಚಿಸಿದರು. ಅರ್ಜಿ ಹಾಕಿದ ನಂತರ ಮೂರು ಬಾರಿ ತಿರಸ್ಕಾರಗೊಂಡಿದೆ ಎಂದು ಉಪ ತಹಶೀಲ್ದಾರ್ ತುಳಜಾ ರಾಮ್ ಸಿಂಗ್ ಅವರ ಮುಂದೆ ವಾಗ್ವಾದ ನಡೆಯಿತು. ನಾನು ಲಂಚ ಪಡೆದಿಲ್ಲ ಎಂದು ವಿ.ಎ ಶಿವಪ್ಪ ಹೇಳಿದರು.

'ಅಧಿಕಾರಿಗಳು ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಲಂಚ ಪಡೆದ ಅನೇಕ ಪ್ರಕರಣಗಳು ನಿಮ್ಮ ಗಮನಕ್ಕೆ ಬಂದಿವೆ. ಲಂಚ ಪಡೆದು ರೈತರಿಗೆ ಶೋಷಣೆ ಮಾಡುವ ವಿ.ಎ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಧ್ಯಕ್ಷ ಶರಣಪ್ಪ ಕಟ್ಟಿಮನಿ ಅವರು ಉಪ ತಹಶೀಲ್ದಾರ್ ಗೆ ಒತ್ತಾಯಿಸಿದರು.

## ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ

# 75 ಹಳ್ಳಿಗಳಲ್ಲಿ ಮೊಳಗಿದ ವಚನ ಜ್ಯೋತಿಯ ನಾದ

ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ನಾಡೋಜ ಬಸವಲಿಂಗಪಟ್ಟದ್ದೇವರ ಅಮೃತ ಮಹೋತ್ಸವದ ಪ್ರಯುಕ್ತ ಹಮ್ಮಿಕೊಂಡಿರುವ "ಬಸವ ಜ್ಯೋತಿ ಯಾತ್ರೆ"ಯು ಭಕ್ತರ ಸಡಗರ ಸಂಭ್ರಮದೊಂದಿಗೆ ಯಶಸ್ವಿಯಾಗಿ ಸಾಗುತ್ತಿದೆ.



ತಾಲೂಕಿನ ಖೇಡ್ ಸಂಗಮ್‌ನ ಡಾ. ಮಹಾದೇವಮ್ಮ ತಾಯಿ ನೀಲಾಂಬಿಕಾ ಆಶ್ರಮದ ನೇತೃತ್ವದಲ್ಲಿ ಈ ವಿಶಿಷ್ಟ ಯಾತ್ರೆಯು ಆಯೋಜನೆಗೊಂಡಿದೆ.

ನಾಗೂರದಿಂದ ಆರಂಭವಾದ ಜ್ಯೋತಿ ಪೂಜ್ಯ ಶ್ರೀಗಳ ಜನ್ಮದಿನದ ಅಂಗವಾಗಿ, ಅವರ ಜನ್ಮಸ್ಥಳವಾದ ತೆಲಂಗಾಣದ ನಾಗೂರ ಗ್ರಾಮದಿಂದ ಈ ವಚನ ಜ್ಯೋತಿ ಯಾತ್ರೆಗೆ ಚಾಲನೆ ನೀಡಲಾಯಿತು.

ಅಲ್ಲಿಂದ ಹೊರಟ ಜ್ಯೋತಿಯು ಮಹಾರಾಷ್ಟ್ರದ ಉದಗೀರ್, ವಾಗ್ದಾರಿ, ಧಾಬಕ, ಬೆಳಕುಣಿ, ಲಕ್ಕಣಗಾಂವ ಹಾಗೂ ಹೊಳಸಮುದ್ರ ಸೇರಿದಂತೆ ಒಟ್ಟು 75 ಗ್ರಾಮಗಳಲ್ಲಿ ಸಂಚರಿಸಲಿದೆ. ಮಹಿಳೆಯರ ಸಡಗರ ಜ್ಯೋತಿಯು ಆಗಮಿಸಿದ ಪ್ರತಿಯೊಂದು ಗ್ರಾಮದಲ್ಲೂ ಭಕ್ತರು ಭಕ್ತಿಭಾವದಿಂದ ಸ್ವಾಗತ ಕೋರುತ್ತಿದ್ದಾರೆ.

ಮನೆ ಮನೆಯಲ್ಲಿ ಜ್ಯೋತಿಯನ್ನು ಪೂಜಿಸಿ, ಪ್ರಾರ್ಥನೆ ಸಲ್ಲಿಸುತ್ತಿದ್ದು, ಹಳ್ಳಿಗಳಲ್ಲಿ ಹಬ್ಬದ ಕಳೆ ಮನೆ ಮಾಡಿದೆ. ಪೂಜ್ಯ ಶ್ರೀಗಳ ಮೇಲಿರುವ ಅಪಾರ ಭಕ್ತಿ ಮತ್ತು ಗೌರವಕ್ಕೆ ಈ ಯಾತ್ರೆಯು ಸಾಕ್ಷಿಯಾಗಿದೆ. ಬಸವ ತತ್ವದ ಪ್ರಸಾರಕ್ಕಾಗಿ ಹಮ್ಮಿಕೊಂಡಿರುವ ಈ ಯಾತ್ರೆಗೆ ಮಹಿಳಾ ಸಂಘಟನೆಗಳು ಹಾಗೂ ಗ್ರಾಮಸ್ಥರಿಂದ ಅಭೂತಪೂರ್ವ ಸಹಕಾರ ವ್ಯಕ್ತವಾಗುತ್ತಿದೆ.

ಏಪ್ರಿಲ್ 22ಕ್ಕೆ ಭವ್ಯ ಸಮಾರೋಪ

ಈ ಯಾತ್ರೆಯ ಮೂಲಕ ಏಪ್ರಿಲ್ 22 ರಂದು ಭಾಲ್ಕಿಯ ಚನ್ನಬಸವ ಆಶ್ರಮದಲ್ಲಿ ನಡೆಯಲಿರುವ ಭವ್ಯ ಕಾರ್ಯಕ್ರಮಕ್ಕೆ ಆಮಂತ್ರಣ ನೀಡಲಾಗುತ್ತಿದೆ. ಈ ಐತಿಹಾಸಿಕ ಸಮಾರಂಭಕ್ಕೆ 75 ಗ್ರಾಮಗಳ ಶ್ರೀಮಠದ ಭಕ್ತರು ಹಾಗೂ ಬಸವ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಆಯೋಜಕರು ವಿನಂತಿಸಿದ್ದಾರೆ.

# ಕುಡಿಯುವ ನೀರಿನ ಅರವಟ್ಟಿಗೆ ಸೇವೆ ಪ್ರಾರಂಭ

• **ಮಲ್ಲಮ್ಮ ನುಡಿ ವಾರ್ತೆ ಹುಣಸಗಿ**

ತಾಲೂಕು, ಕೊಡೇಕಲ್: ಬೇಸಿಗೆಯ ತೀವ್ರ ಬಿಸಿಲಿನಿಂದ ಸಾರ್ವಜನಿಕರಿಗೆ ಉಂಟಾಗುತ್ತಿರುವ ನೀರಿನ ದಾಹವನ್ನು ತಣಿಸುವ ಉದ್ದೇಶದಿಂದ ಕೊಡೇಕಲ್‌ನಲ್ಲಿ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಿ ಉದ್ಘಾಟಿಸಲಾಗಿದ್ದು, ಜೊತೆಗೆ ಅರವಟ್ಟಿಗೆ (ಉಚಿತ ಕುಡಿಯುವ ನೀರಿನ ವಿತರಣೆ) ಸೇವೆಯನ್ನೂ ಪ್ರಾರಂಭಿಸಲಾಯಿತು.


ಶ್ರೀ ಬಸವಜ್ಯೋತಿ ಕೈಗಾರಿಕಾ ತರಬೇತಿ ಸಂಸ್ಥೆ , ಶ್ರೀ ಬಸವಪ್ರಭು ಪದವಿ ಮಹಾವಿದ್ಯಾಲಯ ಕೊಡೇಕಲ್ ಹಾಗೂ ಮಾತೋಶ್ರೀ ತಿಮ್ಮಮ್ಮ ಗೌಡಸಾನಿ ಶಂಭನಗೌಡ ಪಾಟೀಲ್ ಎಮ್ ಟಿ ಎಸ್ ಗ್ರೂಪ್ ಸ್ನೇಹಿತರ ಬಳಗದ ಸಹಕಾರದಿಂದ ಈ ನೀರಿನ ಘಟಕವನ್ನು ನಿರ್ಮಿಸಲಾಗಿದೆ.

ದಿ: ತಿಮ್ಮಮ್ಮ ಗೌಡಸಾನಿ ಶಂ. ಪಾಟೀಲ್ ಹಾಗೂ ದಿ: ಡಾ. ಮಲ್ಲು ನಿಂ.ಬಿರಾದಾರ ಅವರ ಸ್ಮರಣಾರ್ಥವಾಗಿ ನಿರ್ಮಿಸಲಾದ ಈ ಘಟಕವನ್ನು ಶ್ರೀ ಬಸವಜ್ಯೋತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸಂಗನಗೌಡ ನಿಂ. ಬಿರಾದಾರ ಅವರು ಉದ್ಘಾಟಿಸಿದರು. ಇದೇ ವೇಳೆ, ಅವರ ಮುಂದಾಳತ್ವದಲ್ಲಿ ಸಾರ್ವಜನಿಕರ ದಾಹ ತಣಿಸಲು ಕುಡಿಯುವ ನೀರಿನ ಅರವಟ್ಟಿಗೆ ಸೇವೆಯನ್ನೂ ಪ್ರಾರಂಭಿಸಲಾಗಿದೆ.

ಈ ಸಂದರ್ಭದಲ್ಲಿ ಕೈಗಾರಿಕೆ ತರಬೇತಿ ಕಾಲೇಜಿನ ಪ್ರಾಚಾರ್ಯ ಶಶಿಕುಮಾರ್ ಜಾಧವ, ಸಂತೋಷ ಕೆಂಡದ, ಗ್ರಾಮ ಪ್ರಮುಖರಾದ ರಂಗನಾಥ ದೊರಿಗೋಳ, ಸೋಮನಿಂಗಪ್ಪ ದೊರಿ, ಮೋಹನ್ ಪಾಟೀಲ್, ನಿವೃತ್ತ ತಾಲೂಕು ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಚಂದ್ರಶೇಖರ ಹೊಕ್ರಾಣಿ, ರವೀಂದ್ರ ಅಂಗಡಿ, ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷ ಕನಕಯ್ಯ ಜೀರಾಳ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

ಅದೇ ರೀತಿ ಜಿಲ್ಲಾ ನೇಕಾರ ಸಂಘದ ಅಧ್ಯಕ್ಷ ವೀರಸಂಗಪ್ಪ ಹಾವೇರಿ, ರೈತರ ಸಂಘದ ವೀರಸಂಗಪ್ಪ ಅಂಬ್ಲಿಹಾಳ್, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಬಿ.ಬಿ. ಪಡಶೆಟ್ಟಿ, ಶಿಕ್ಷಕ ರಾಜೇಂದ್ರ ಸರ್ ಬೀದರ್, ಕ.ರ.ವೇ ತಾಲೂಕು ಅಧ್ಯಕ್ಷ ರಮೇಶ್ ಬಿರಾದಾರ ಸೇರಿದಂತೆ ಹಲವರು ಹಾಜರಿದ್ದರು.

ಬೇಸಿಗೆಯ ಸಂದರ್ಭದಲ್ಲಿ ಸಾರ್ವಜನಿಕರಿಗೆ ಶುದ್ಧ ಹಾಗೂ ತಂಪು ಕುಡಿಯುವ ನೀರು ಲಭ್ಯವಾಗಲು ಈ ಘಟಕ ಹಾಗೂ ಅರವಟ್ಟಿಗೆ ಸೇವೆ ಸಹಕಾರಿ ಆಗಲಿದ್ದು, ಗ್ರಾಮಸ್ಥರು ಸಂತೋಷ ವ್ಯಕ್ತಪಡಿಸಿದರು.



# ಮೃತ ಕುಟುಂಬಸ್ಥರಿಗೆ ಚವ್ಹಾಣ ಸಾಂತ್ವನ



• **ಮಲ್ಲಮ್ಮ ನುಡಿ ವಾರ್ತೆ ಔರಾದ**

ತಾಲ್ಲೂಕಿನ ಬೋರಾಳ ಗ್ರಾಮದಲ್ಲಿ ನಡೆದ ದುರ್ಘಟನೆಯಲ್ಲಿ ಕೊಟ್ಟಿಗೆಗೆ ಬೆಂಕಿ ತಗುಲಿ ಪ್ರಾಣ ಕಳೆದುಕೊಂಡ ಶಂಕರ ಈರಗೊಂಡ ಮೇತ್ರೆ ಅವರ ಮನೆಗೆ ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಏ.2 ರಂದು ಭೇಟಿ ನೀಡಿ ಸಾಂತ್ವನ ಹೇಳಿದರು.

ಈ ಸಂದರ್ಭದಲ್ಲಿ ಕುಟುಂಬಸ್ಥರು ದುಃಖವನ್ನು ಹಂಚಿಕೊಂಡರು. ಘಟನೆಯ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ. ಘಟನೆಯಿಂದ ಬಹಳಷ್ಟು ನೋವಾಗಿದೆ. 45ಕ್ಕೂ ಹೆಚ್ಚು ಮೇಕೆಗಳು ಮತ್ತು ಸಂಗ್ರಹಿಸಿಟ್ಟಿದ ದವಸ ಧಾನ್ಯಗಳೆಲ್ಲವೂ ಸುಟ್ಟು ಹೋಗಿವೆ. ಇಂತಹ ಅಕಾಲಿಕ ದುರ್ಘಟನೆ ಸಂಭವಿಸಬಾರದು. ದೇವರು ಮೃತರ ಆತ್ಮಕ್ಕೆ ಶಾಂತಿ ನೀಡಲಿ ಮತ್ತು ಕುಟುಂಬಕ್ಕೆ ಈ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸಿದರು.

ಕುಟುಂಬದ ಮುಖ್ಯ ಆಧಾರವಾಗಿದ್ದ ವ್ಯಕ್ತಿಯನ್ನು ಕಳೆದುಕೊಂಡಿರುವುದು ದೊಡ್ಡ ನಷ್ಟವಾಗಿದ್ದು, ಈ ಸಂಕಷ್ಟದ ಸಮಯದಲ್ಲಿ ತಮ್ಮಿಂದ ಸಾಧ್ಯವಿರುವ ಎಲ್ಲಾ ಸಹಾಯ ಒದಗಿಸಲಾಗುವುದು. ಸರ್ಕಾರದಿಂದ ಸೂಕ್ತ ಪರಿಹಾರ ದೊರಕಿಸಲು ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದರು. ಇದೇ ವೇಳೆ ಕುಟುಂಬಸ್ಥರಿಗೆ ವೈಯಕ್ತಿಕ ಧನಸಹಾಯ ಮಾಡಿದರು.

ಬಾದಲಗಾಂವ ಗ್ರಾಮಕ್ಕೆ ಭೇಟಿ: ಕೃಷಿ ಚಟುವಟಿಯಲ್ಲಿ ತೊಡಗಿದ ವೇಳೆ ಅಕಸ್ಮಿಕವಾಗಿ ಸಿಡಿಲು ಬಡಿದು ಮೃತಪಟ್ಟ ಬಾದಲಗಾಂವ ಗ್ರಾಮದ ರಾಹುಲ ಭಾಸ್ಕರೆ ಅವರ ಮನೆಗೆ ಶಾಸಕರು ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ವೈಯಕ್ತಿಕ ಧನಸಹಾಯ ಮಾಡಿದರು.

ಕುಟುಂಬದ ಏಕೈಕ ಆದಾಯ ಮೂಲವಾಗಿರುವ ಯುವಕ ನಿಧನರಾಗಿರುವುದು ಭಾರೀ ಆಘಾತವನ್ನುಂಟುಮಾಡಿದೆ. ನಾನು ನಿಮ್ಮ ಕುಟುಂಬದ ಜೊತೆಗಿದ್ದೇನೆ. ಇಂತಹ ಸಂದರ್ಭದಲ್ಲಿ ಕುಟುಂಬಸ್ಥರು ಧೈರ್ಯ ಕಳೆದುಕೊಳ್ಳಬಾರದು. ನಾನು ಎಲ್ಲ ರೀತಿಯ ಸಹಕಾರ ನೀಡುತ್ತೇನೆ. ಸರ್ಕಾರದಿಂದಲೂ ಶೀಘ್ರ ಪರಿಹಾರ ಒದಗಿಸಲು ಪ್ರಯತ್ನಿಸುವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಹಸೀಲ್ದಾರರಾದ ಮಹೇಶ ಪಾಟೀಲ, ಮುಖಂಡರಾದ ಶಿವಾಜಿರಾವ ಪಾಟೀಲ ಮುಂಗನಾಳ, ಯಾದುರಾವ ಮೇತ್ರೆ, ಅನೀಲ ನಾರಾಯಣಪೂರ, ದಾಮೋದರ ಶೇರಿಕಾರ, ಮಧುಸುಧನ ಬಿರಾದಾರ, ಜನಾರ್ಧನ ಪಾಟೀಲ, ಉದ್ಧವ್ ಪಾಟೀಲ, ಬಜರಂಗ ಪಾಂಡ್ರೆ, ಗಣಪತಿ ಸೇರಿದಂತೆ ಇತರರು ಉಪಸ್ಥರಿದ್ದರು.

# ಏ11ಕ್ಕೆ ಬೃಹತ್ ಹೋರಾಟಕ್ಕೆ ಸಮಿತಿಯ ನಿರ್ಧಾರ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಕಾರಂಜಾ ರೈತ ಸಂತ್ರಸ್ತರಿಗೆ ಮಾನವೀಯತೆ ಹಾಗೂ ವೈಜ್ಞಾನಿಕ ಮಾದರಿಯ ಆಧಾರದ ಮೇಲೆ ಸಮರ್ಪಕ ಪರಿಹಾರ ನೀಡಬೇಕೆಂದು ದೀರ್ಘಕಾಲದಿಂದ ನಡೆಯುತ್ತಿರುವ ಹೋರಾಟಕ್ಕೆ ಸರ್ಕಾರ ಸ್ಪಂದಿಸಿದರೂ, ವಿವಿಧ ಕಾರಣಗಳಿಂದ ವಿಳಂಬ ಮಾಡುತ್ತಿರುವುದನ್ನು ಖಂಡಿಸಿ ಏಪ್ರಿಲ್ 11ರಂದು ಬೀದರ್ ನಗರದಲ್ಲಿ ಬೃಹತ್ ಹೋರಾಟ ನಡೆಸಲು ಸಮಿತಿ ನಿರ್ಧರಿಸಿದೆ.

ಈ ಕುರಿತು ಗುರುವಾರ ರಂದು ಕಲ್ಯಾಣ ಕರ್ನಾಟಕ ಪ್ರದೇಶದ ಹಿರಿಯ ಹೋರಾಟಗಾರರಾದ ಡಾ. ಲಕ್ಷ್ಮಣ ದಸ್ತಿ ಅವರ ನೇತೃತ್ವದಲ್ಲಿ ಬೀದರ್ ನಗರದ ಅಂಬೇಡ್ಕರ್ ವೃತ್ತದ ಸಮೀಪದ ಪಿಡಬ್ಲ್ಯೂಡಿ ವಿಶ್ರಾಂತಿ ಗೃಹದಲ್ಲಿ ಮಹತ್ವದ ಸಭೆ ನಡೆಯಿತು.

ಸಭೆಯಲ್ಲಿ ಏಕಮತದಿಂದ ತೀರ್ಮಾನ ಕೈಗೊಂಡು, ಏಪ್ರಿಲ್ 11ರಂದು ಅಂಬೇಡ್ಕರ್ ವೃತ್ತದಲ್ಲಿ ಬೃಹತ್ ಹೋರಾಟ ನಡೆಸಲು ನಿರ್ಧರಿಸಲಾಯಿತು. ಅಗತ್ಯವಿದ್ದಲ್ಲಿ ಸ್ಥಳ ಬದಲಾವಣೆಯ ಬಗ್ಗೆ ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಲಾಗುವುದು ಎಂದು ತಿಳಿಸಲಾಯಿತು.

ಅದೇ ದಿನ ಬೀದರ್ ನಗರ–ಕ್ಕೆ ಆಗಮಿಸಲಿರುವ ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರಿಗೆ ಕಾರಂಜಾ ರೈತ ಸಂತ್ರಸ್ತರ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸುವ ಕುರಿತು ಅಧಿಕೃತ ಘೋಷಣೆ ಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ಒತ್ತಾಯಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಈ ಹೋರಾಟದಲ್ಲಿ ಕಾರಂಜಾ ನೀರಾವರಿ ಯೋಜನೆಗಾಗಿ ಭೂಮಿ ನೀಡಿದ ಹಾಗೂ ಮನೆ–ಮಠ ಕಳೆದುಕೊಂಡ 28 ಹಳ್ಳಿಗಳ ರೈತ ಸಂತ್ರಸ್ತರ ಕುಟುಂಬದ ಎಲ್ಲಾ ಸದಸ್ಯರು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಲಾಗಿದೆ.

ಕಾರಂಜಾ ಯೋಜನೆ ಬೀದರ್ ಜಿಲ್ಲೆಯ ಜನಜೀವನದ ಜೀವನಾಡಿಯಾಗಿದ್ದು, ಈ ಯೋಜನೆಯಿಂದ ಲಕ್ಷಾಂತರ ಜನರಿಗೆ ಕುಡಿಯುವ ನೀರು ದೊರೆಯುತ್ತಿದೆ. ಜೊತೆಗೆ ಅನೇಕ ರೈತರ ಕೃಷಿಭೂಮಿಗಳಿಗೆ ನೀರಾವರಿ ಸೌಲಭ್ಯ ಒದಗುತ್ತಿದೆ. ಆದ್ದರಿಂದ ಈ ಹೋರಾಟವನ್ನು ಯಶಸ್ವಿಗೊಳಿಸಲು ಜಿಲ್ಲೆಯ ಎಲ್ಲ ನಾಗರಿಕರು ಭಾಗವಹಿಸಬೇಕೆಂದು ಸಮಿತಿ ಮನವಿ ಮಾಡಿಕೊಂಡಿದೆ.

ಬೃಹತ್ ಹೋರಾಟದ ಯಶಸ್ಸಿಗಾಗಿ ಗ್ರಾಮವಾರು ಕ್ರಿಯಾ ಸಮಿತಿಗಳನ್ನು ರಚಿಸಿ ಸಿದ್ಧತೆ ನಡೆಸಲು ನಿರ್ಧರಿಸಲಾಗಿದೆ. ಈ ಹೋರಾಟಕ್ಕೆ ಉಸ್ತುವಾರಿ ಸಚಿವರು, ಜಿಲ್ಲೆಯ ಸಚಿವರು, ಶಾಸಕರು, ವಿವಿಧ ರಾಜಕೀಯ ಪಕ್ಷಗಳ ನಾಯಕರು ಪಕ್ಷಭೇದ ಮರೆತು ಬೆಂಬಲ ನೀಡಬೇಕೆಂದು ಸಮಿತಿ ಕೋರಿದೆ.

ಹಾಗೂ ವಿವಿಧ ಸಂಘ–ಸಂಸ್ಥೆಗಳ ಸದಸ್ಯರು ಈ ಹೋರಾಟದಲ್ಲಿ ಭಾಗವಹಿಸಿ ಜಿಲ್ಲೆಯ ಜ್ವಲಂತ ಸಮಸ್ಯೆ ಪರಿಹಾರಕ್ಕೆ ಕೈಜೋಡಿಸಬೇಕೆಂದು ಕಾರಂಜಾ ಮುಳುಗಡೆ ಸಂತ್ರಸ್ತ ರೈತ ಹಿತರಕ್ಷಣಾ ಸಮಿತಿ ಹಾಗೂ ಬೀದರ್ ಜಿಲ್ಲಾ ಸಮಗ್ರ ಅಭಿವೃದ್ಧಿ ಜಂಟಿ ಕ್ರಿಯಾ ಸಮಿತಿ ಮನವಿ ಮಾಡಿಕೊಂಡಿವೆ.

ಸಭೆಗೆ ಸಮಿತಿಯ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲ ಹುಚಕನಳ್ಳಿ ಅಧ್ಯಕ್ಷತೆ ವಹಿಸಿದ್ದರು. ಪದಾಧಿಕಾರಿಗಳಾದ ವಿನಯಕುಮಾರ ಮಾಳಗೆ, ರಾಜಪ್ಪ ಕೋಸಂ, ರಾಜಪ್ಪ ರೇಕುಳಗಿ, ವೀರೇಂದ್ರ ಭತಮರ್ಗೆ, ಮಾದಪ್ಪ ಕೌದೆ, ರೇವಣಪ್ಪ ರಂಜೋಳ, ಸಂಗಾರೆಡ್ಡಿ ಔರಾದ, ಯೂಸುಫ್ ರೆಕುಳಗಿ, ಮಹಮ್ಮದ ಸೊಲಾಪೂರೆ, ಲಕ್ಷ್ಮೀ ಕೌದೆ, ಚಂದ್ರಶೇಖರ್ ಒಡ್ಡಿ, ಶಿವಕುಮಾರ್ ಬಗದಲ, ಲಕ್ಷ್ಮಣ ಭೂತಾಳೆ, ಸೂರ್ಯಕಾಂತ ಕುಲಕರ್ಣಿ, ಸಂಜಯ್ ಪಾಟೀಲ್ ಸೇರಿದಂತೆ ಅನೇಕರು ಮಾತನಾಡಿದರು.

ಈ ಸಭೆಯಲ್ಲಿ ನೂರಾರು ರೈತ ಸಂತ್ರಸ್ತರು ಭಾಗವಹಿಸಿದ್ದರು.

# ಏ. 5 ರಂದು ಮಹಿಳಾ ಕ್ರಿಕೆಟ್ ಪಟುಗಳ ಆಯ್ಕೆ ಅಶೋಕ್ ಚೌಹಾಣ್

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಆವರಣದಲ್ಲಿ 10 ರಿಂದ 22 ರ್ವ ವಯಸ್ಸಿನ ಮಹಿಳಾ ಕ್ರಿಕೆಟ್ ಪಟುಗಳನ್ನು ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು ಎಂದು ಮಹಿಳಾ ಕ್ರಿಕೆಟ್ ಅಕಾಡೆಮಿಯ ಕರ‍್ಯಾಧ್ಯಕ್ಷ ಅಶೋಕ್ ಚೌಹಾಣ್ ತಿಳಿಸಿದರು.



ಈ ಕುರಿತು ಅವರಿಂದ ಮಾಧ್ಯಮದ ಜೊತೆ ಮಾತನಾಡಿ, ಕಳೆದ 15 ರ್ವಗಳ ಹಿಂದೆ ಬಿ ಎಚ್ ಎಂ ವಿರೂಪಾಕ್ಷಯ್ಯನವರು ಹುಟ್ಟುಹಾಕಿದ ಮಹಿಳಾ ಕ್ರಿಕೆಟ್ ಅಕಾಡೆಮಿ ವತಿಯಿಂದ ಈ ಹಿಂದೆ ನಡೆದ ಕ್ರಿಕೆಟ್ ಪಂದ್ಯಾವಳಿಯಲ್ಲಿ ದೇಶದ ಮಹಿಳಾ ಕ್ರಿಕೆಟ್ ನಲ್ಲಿ ಖ್ಯಾತನಾಮರಾದ ವೇದ ಕೃಷ್ಣಮರ್ತಿ , ರಾಜೇಶ್ವರಿ ಗಾಯಕ್ವಾಡ್ ಮತ್ತು ನೆರೆಯ ಆಂಧ್ರಪ್ರದೇಶದ ದಯಾನಾ ಅವರುಗಳು ಬಳ್ಳಾರಿ ಜಿಲ್ಲೆಯ ಕ್ರೀಡಾಪಟುಗಳೊಂದಿಗೆ ಕ್ರಿಕೆಟ್ ಆಟವನ್ನು ಆಡಿ ರಾಷ್ಟ್ರಾದ್ಯಂತ ಹೆಸರುಗಳಿಸಿದ್ದಾರೆ. ಅದೇ ರೀತಿಯಲ್ಲಿ ಇಂದು ಬಳ್ಳಾರಿ ಜಿಲ್ಲಾ ಮಹಿಳಾ ಕ್ರಿಕೆಟ್ ಅಕಾಡೆಮಿ ವತಿಯಿಂದ ಮಹಿಳಾ ಕ್ರಿಕೆಟ್ ಪಂದ್ಯಾವಳಿಗಳನ್ನು ನಡೆಸಲು ಉದ್ದೇಶಿಸಲಾಗಿದ್ದು ಈ ಪಂದ್ಯಾವಳಿಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವ 10 ರಿಂದ 22 ರ್ವಗಳ ವಯೋಮಾನದ ಯುವತಿಯರು ಇದೇ ಏಪ್ರಿಲ್ 5 ರಂದು ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಮೈದಾನದಲ್ಲಿ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿದವರು ಭಾಗವಹಿಸಿ ತಮ್ಮ ಅದೃಷ್ಟವನ್ನು ಪರೀಕ್ಷಿಸಿಕೊಳ್ಳಬಹುದಾಗಿದೆ ಎಂದರು.

# ವಸತಿ ನಿಲಯದಲ್ಲಿ ಕಳಪೆ ಆಹಾರ: ಇಬ್ಬರು ಅಧಿಕಾರಿಗಳು ಅಮಾನತು

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯ ಸಿರುಗುಪ್ಪ ತಾಲೂಕಿನ ಹಚ್ಚೊಳ್ಳಿ ಗ್ರಾಮದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ ಪರಿಶಿಷ್ಟ ಪಂಗಡ ಮೆಟ್ರಿಕ್ ಪೂರ್ವ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗೆ ಕಳಪೆ ಗುಣಮಟ್ಟದ ಆಹಾರ ಪೂರೈಕೆ ಮಾಡಲಾಗುತ್ತಿರುವ ಗಂಭೀರ ಆರೋಪಗಳ ಹಿನ್ನೆಲೆ, ಇಬ್ಬರು ಅಧಿಕಾರಿಗಳನ್ನು ಅಮಾನತುಗೊಳಿಸಿ ಜಿಲ್ಲಾ ಆಡಳಿತ ಕಠಿಣ ಕ್ರಮ ಕೈಗೊಂಡಿದೆ.

ಜಿಲ್ಲಾ ಪರಿಶಿಷ್ಟ ಪಂಗಡ ಕಲ್ಯಾಣಾಧಿಕಾರಿ ಷಾಶು ಮೋಹಿನುದ್ದೀನ್ ಅವರು ನೀಡಿದ ಆದೇಶದಂತೆ, ವಸತಿ ನಿಲಯದ ಪ್ರಿನ್ಸಿಪಾಲ್ ಕೆ.ವಿ. ಕೋಟೇಶ್ವರ್ ಹಾಗೂ ಮೇಲ್ವಿಚಾರಕಿ ಎನ್.ವಿ. ಉಮಾದೇವಿ ಅವರನ್ನು ತಕ್ಷಣದಿಂದಲೇ ಅಮಾನತು ಮಾಡಲಾಗಿದೆ. ಆಹಾರದ ಗುಣಮಟ್ಟದ ಬಗ್ಗೆ ಗಂಭೀರ ಆರೋಪ ವಸತಿ ನಿಲಯದಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳಿಗೆ ಹುಳು ಬಿದ್ದ ಗೋಧಿ, ಕೊಳೆತ ತರಕಾರಿ ಹಾಗೂ ಕಳಪೆ ಗುಣಮಟ್ಟದ ಆಹಾರ ನೀಡಲಾಗುತ್ತಿದೆ ಎಂಬ ದೂರುಗಳು ಕೇಳಿಬಂದಿದ್ದವು. ಈ ಕುರಿತು ಪೋಷಕರು ಹಾಗೂ ಸ್ಥಳೀಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು.

ಸ್ಥಳ ಪರಿಶೀಲನೆ ವೇಳೆ ಅಕ್ರಮಗಳು ಬಹಿರಂಗ ದೂರುಗಳ ಆಧಾರದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹ್ಯಾರೀಸ್ ಸುಮೇರ್ ಅವರು ಪ್ರಾಥಮಿಕ ಮಾಹಿತಿ ಸಂಗ್ರಹಿಸಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಮಕ್ಕಳ ಊಟಕ್ಕೆ ಬಳಸಲಾಗುತ್ತಿದ್ದ ಆಹಾರ ಪದಾರ್ಥಗಳಲ್ಲಿ ಹಾಳಾದ ಧಾನ್ಯಗಳು ಹಾಗೂ ಕೊಳೆತ ತರಕಾರಿಗಳು ಬಳಸಿರುವುದು ದೃಢಪಟ್ಟಿದೆ ಎಂದು ಮೂಲಗಳು ತಿಳಿಸಿವೆ. ನಿಯಮಾವಳಿ ಪ್ರಕಾರ ಕ್ರಮ ಈ ಗಂಭೀರ ಲೋಪವನ್ನು ಪರಿಗಣಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ 1957ರ ನಿಯಮ 10(1)(ಡಿ) ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ತಿದ್ದುಪಡಿ ನಿಯಮಗಳು 2005ರ ಷೆಡ್ಯೂಲ್–3 ಅನ್ವಯ ಕ್ರಮ ಕೈಗೊಳ್ಳಲಾಗಿದೆ. ಸಂಬಂಧಿತ ಅಧಿಕಾರಿಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಲಾಗಿದ್ದು, ತನಿಖೆ ಪೂರ್ಣಗೊಳ್ಳುವವರೆಗೆ ಅಮಾನತು ಮುಂದುವರಿಯಲಿದೆ.

ಮಕ್ಕಳ ಆರೋಗ್ಯದೊಂದಿಗೆ ನಿರ್ಲಕ್ಷ್ಯ ಅಸಹ್ಯ: ಸಾರ್ವಜನಿಕರ ಆಕ್ರೋಶ ವಿದ್ಯಾರ್ಥಿಗಳ ಆರೋಗ್ಯದೊಂದಿಗೆ ಈ ರೀತಿಯ ನಿರ್ಲಕ್ಷ್ಯ ತೋರಿರುವುದು ಗಂಭೀರ ವಿಷಯವಾಗಿದ್ದು, ಸಂಬಂಧಪಟ್ಟವರ ವಿರುದ್ಧ ಇನ್ನಷ್ಟು ಕಠಿಣ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

**ತಕ್ಷಣ ಜಾರಿಗೆ ಬಂದ ಆದೇಶ**

ಅಮಾನತು ಆದೇಶ ತಕ್ಷಣದಿಂದಲೇ ಜಾರಿಗೆ ಬರುವಂತೆ ಸೂಚನೆ ನೀಡಲಾಗಿದ್ದು, ವಸತಿ ನಿಲಯದ ಕಾರ್ಯಚಟುವಟಿಕೆಗಳನ್ನು ತಾತ್ಕಾಲಿಕವಾಗಿ ಪರ್ಯಾಯ ವ್ಯವಸ್ಥೆಯ ಮೂಲಕ ಮುಂದುವರಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಸಿಲೆಂಡರ್ ಸಂಕಷ್ಟ: ಮುಂಜಾನೆಯಿಂದಲೇ ಸಾಲಿನಲ್ಲಿ ಜನರ ನರಳಾಟ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯಲ್ಲಿ ಅಡುಗೆ ಅನಿಲದ ತೀವ್ರ ಕೊರತೆ ಕಾಣಿಸಿಕೊಂಡಿದ್ದು, ಗ್ರಾಹಕರು ಸಿಲೆಂಡರ್‌ಗಾಗಿ ಮುಂಜಾನೆಯಿಂದಲೇ ಸಾಲಿನಲ್ಲಿ ನಿಂತು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕುರುಗೋಡು ತಾಲೂಕಿನ ಕೋಳೂರು ಗ್ರಾಮದಲ್ಲಿ ಈ ಸಂಕಷ್ಟ ಗಂಭೀರ ಸ್ವರೂಪ ಪಡೆದುಕೊಂಡಿದೆ.

ಗ್ರಾಮದಲ್ಲಿರುವ ಗ್ಯಾಸ್ ಗೋಡೌನ್ ಮುಂದೆ ಇಂದು ಮುಂಜಾನೆ 6 ಗಂಟೆಯಿಂದಲೇ ಮಹಿಳೆಯರು, ಹಿರಿಯರು, ಮಕ್ಕಳು ಸೇರಿದಂತೆ ನೂರಾರು ಜನರು ಸಾಲಿನಲ್ಲಿ ಕುಳಿತಿದ್ದು, ಅಡುಗೆ ಅನಿಲ ತುಂಬಿದ ಲೋಡ್ ವಾಹನ ಬರುವ ನಿರೀಕ್ಷೆಯಲ್ಲಿ ಗಂಟೆಗಟ್ಟಲೆ ಕಾಯುತ್ತಿದ್ದರು. ಕೆಲವರು ರಾತ್ರಿ ಹೊತ್ತಿಗೇ ಬಂದು ಸ್ಥಳ ಕಾಯ್ದುಕೊಂಡಿದ್ದಾರೆಯೆಂಬ ಮಾಹಿತಿಯೂ ಲಭ್ಯವಾಗಿದೆ.


ಸಿಲೆಂಡರ್ ಕೊರತೆಯಿಂದಾಗಿ ದಿನನಿತ್ಯದ ಅಡುಗೆ ಕಾರ್ಯವೇ ಅಸ್ತವ್ಯಸ್ತಗೊಂಡಿದ್ದು, ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳು ಹೆಚ್ಚು ಸಂಕಷ್ಟಕ್ಕೆ ಸಿಲುಕಿವೆ. ವಿಶೇಷವಾಗಿ ಮಹಿಳೆಯರು, ಅಂಗವಿಕಲರು ಮತ್ತು ವೃದ್ಧರು ಗ್ಯಾಸ್ ಪಡೆಯಲು ಹರಸಾಹಸ ಪಡುತ್ತಿರುವ ದೃಶ್ಯಗಳು ಮನಕಲುಕುವಂತಿವೆ.

ಲೋಡ್ ವಾಹನ ಬರುವ ಸೂಚನೆ ದೊರಕುತ್ತಿದ್ದಂತೆ ಜನರು ಆತುರದಲ್ಲಿ ಮುಗ್ಗರಿಸಿ ಮುಂದೆ ಸಾಗಲು ಯತ್ನಿಸುತ್ತಿದ್ದು, ಕೆಲವೊಮ್ಮೆ ತಳ್ಳಾಟ–ಒದ್ದಾಟವೂ ಉಂಟಾಗುತ್ತಿದೆ. ಸರಿಯಾದ ವ್ಯವಸ್ಥೆಯ ಕೊರತೆಯಿಂದ ಗೊಂದಲ ಹೆಚ್ಚುತ್ತಿರುವುದಾಗಿ ಸ್ಥಳೀಯರು ಆರೋಪಿಸಿದ್ದಾರೆ.

"ಪ್ರತಿದಿನವೂ ಇದೇ ಪರಿಸ್ಥಿತಿ. ಮುಂಜಾನೆ ಬಂದರೂ ಸಿಲೆಂಡರ್ ಸಿಗುವುದಕ್ಕೆ ಖಚಿತತೆ ಇಲ್ಲ. ದಿನಗೂಲಿ ಕೆಲಸ ಬಿಟ್ಟು ಇಲ್ಲಿ ಕಾದು ಕುಳಿತುಕೊಳ್ಳಬೇಕಾಗಿದೆ," ಎಂದು ಗ್ರಾಹಕರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಮಸ್ಯೆ ಕುರಿತು ಅಧಿಕಾರಿಗಳು ತಕ್ಷಣ ಗಮನಹರಿಸಿ, ಸಮರ್ಪಕವಾಗಿ ಅನಿಲ ಸರಬರಾಜು ವ್ಯವಸ್ಥೆ ಮಾಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ನಿಯಂತ್ರಣ ವ್ಯವಸ್ಥೆ ಬಲಪಡಿಸದಿದ್ದರೆ ಮುಂದಿನ ದಿನಗಳಲ್ಲಿ ಸಮಸ್ಯೆ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆ ಇದೆ.

# ಬಳ್ಳಾರಿಯಲ್ಲಿ ಆಟೋ ಚಾಲಕರಿಗೆ ಎಲ್‌ಪಿಜಿ ಸಂಕಷ್ಟ: ಕಿಮೀ ಗಟ್ಟಲೇ ಕ್ಯೂ, ಬದುಕು ಅಸ್ತವ್ಯಸ್ತ



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದಲ್ಲಿ ಆಟೋ ಚಾಲಕರಿಗೆ ಎಲ್‌ಪಿಜಿ ಗ್ಯಾಸ್ ಕೊರತೆ ತೀವ್ರವಾಗಿದ್ದು, ಸಾವಿರಾರು ಆಟೋಗಳು ಕಿಲೋಮೀಟರ್‌ಗಳಷ್ಟು ಉದ್ದವಾದ ಸಾಲಿನಲ್ಲಿ ನಿಂತು ಪರದಾಡುತ್ತಿರುವ ದೃಶ್ಯಗಳು ಕಾಣಿಸಿಕೊಂಡಿವೆ. ನಗರದ ಕೆಇಬಿ ಸರ್ಕಲ್ ಸಮೀಪ ಇರುವ 'ಪರ್ಪಲ್' ಆಟೋ ಎಲ್‌ಪಿಜಿ ಬಂಕ್ ಮುಂದೆ ಬೆಳಗ್ಗೆಯಿಂದಲೇ ವಾಹನಗಳ ದೀರ್ಘ ಸಾಲು ಉಂಟಾಗಿದೆ.

ನಗರದಲ್ಲಿರುವ ಐದು ಆಟೋ ಎಲ್‌ಪಿಜಿ ಬಂಕ್‌ಗಳ ಪೈಕಿ ನಾಲ್ಕು ಬಂಕ್‌ಗಳು ವಿವಿಧ ಕಾರಣಗಳಿಂದ ಬಂದ್ ಆಗಿರುವ ಹಿನ್ನೆಲೆಯಲ್ಲಿ, ಒಂದೇ ಬಂಕ್‌ನಲ್ಲಿ ಗ್ಯಾಸ್ ಪೂರೈಕೆ ನಡೆಯುತ್ತಿದೆ. ಇದರಿಂದ ಆಟೋ ಚಾಲಕರು ಹಲವು ಗಂಟೆಗಳ ಕಾಲ ಕಾಯುವ ಪರಿಸ್ಥಿತಿ ಎದುರಾಗಿದೆ. ಕೆಲವರು 3ರಿಂದ 5 ಕಿಲೋಮೀಟರ್‌ಗಳವರೆಗೆ ಸಾಲಿನಲ್ಲಿ ನಿಂತಿರುವುದು ಗಮನಾರ್ಹ.

ಇದಕ್ಕೂ ಮೀರಿ, ಎಲ್‌ಪಿಜಿ ದರದಲ್ಲೂ ಏರಿಕೆ ಕಂಡುಬಂದಿದ್ದು, ಲೀಟರ್‌ಗೆ –84.56 ಇದ್ದ ಬೆಲೆ ಇದೀಗ –93.56ಕ್ಕೆ ಏರಿಕೆಯಾಗಿದೆ. ದರ ಏರಿಕೆ ಹಾಗೂ ಗ್ಯಾಸ್ ಕೊರತೆ ಎರಡೂ ಸೇರಿ ಆಟೋ ಚಾಲಕರ ಸಂಕಷ್ಟವನ್ನು ಮತ್ತಷ್ಟು ಗಂಭೀರಗೊಳಿಸಿದೆ.

'ಬೆಳಿಗ್ಗೆ ಬಂದು ಸಾಲಿನಲ್ಲಿ ನಿಂತರೂ ಸಂಜೆಗಷ್ಟೇ ಗ್ಯಾಸ್ ಸಿಗುತ್ತದೆ. ದಿನವಿಡೀ ಬಾಡಿಗೆ ಇಲ್ಲದೇ ಹೋದರೆ ಮನೆ ನಡೆಸೋದು ಹೇಗೆ? ಇಒಖ ಕಟ್ಟೋದು ಹೇಗೆ?' ಎಂದು ಹಲವಾರು ಚಾಲಕರು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ಇದರಿಂದ ದಿನಸಿ ಆದಾಯದ ಮೇಲೆ ಬದುಕು ನಡೆಸುವ ಆಟೋ ಚಾಲಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಕುಟುಂಬ ನಿರ್ವಹಣೆಯಲ್ಲೂ ಸಮಸ್ಯೆ ಎದುರಿಸುತ್ತಿದ್ದಾರೆ. ತಕ್ಷಣವೇ ಗ್ಯಾಸ್ ಪೂರೈಕೆ ಸುಧಾರಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ನಗರದಲ್ಲಿ ಇಂತಹ ಅವ್ಯವಸ್ಥೆ ಮುಂದುವರಿದರೆ ಸಾರಿಗೆ ವ್ಯವಸ್ಥೆಯ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ ಎಂಬ ಆತಂಕ ವ್ಯಕ್ತವಾಗುತ್ತಿದೆ.

# ಇಂದೋರ್ ಪ್ರವಾಸಕ್ಕೆ ಪಾಲಿಕೆ ಸದಸ್ಯರು,ಅಧಿಕಾರಿಗಳು

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಇಲ್ಲಿನ ಮಹಾನಗರ ಪಾಲಿಕೆಯ ಚುನಾಯಿತ ಸದಸ್ಯರು ಹಾಗೂ ನಾಮನಿರ್ದೇಶಿತ ಸದಸ್ಯರು ಹಾಗೂ ಪಾಲಿಕೆಯ ಅಧಿಕಾರಿಗಳನ್ನೊಳಗೊಂಡು 50 ಜನರನ್ನು ಒಳಗೊಂಡ ತಂಡ ಇಂದೋರ್ ನಗರಕ್ಕೆ ಅಧ್ಯಯನ ಪ್ರವಾಸ ಮಾಡಲು ಇಂದು ನಡೆದ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಅನುಮೋದನೆ ನೀಡಲಾಯ್ತು.

ಮಹಾನಗರ ಪಾಲಿಕೆಗೆ ಎಸ್.ಬಿ.ಎಂ2.0 ಅಡಿಯಲ್ಲಿ ಸಾಮಾರ್ಥ್ಯಾಭಿವೃದ್ಧಿ ಘಟಕದಿಂದ ಪಾಲಿಕೆಯಲ್ಲಿ ಚುನಾಯಿತ 39 ಹಾಗೂ 5 ಜನ ನಾಮನಿರ್ದೇಶಿತ ಸದಸ್ಯರು ಮತ್ತು 6 ಜನ ಪಾಲಿಕೆ ಅಧಿಕಾರಿ ಸಿಬ್ಬಂಧಿಗಳನ್ನು ಒಳಗೊಂಡ 50 ಜನರೊಂದಿಗೆ ರಾಷ್ಟ್ರದಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆಯಲ್ಲಿ ಉತ್ತಮ ಸಾಧನೆ ತೋರಿರುವ ಮಧ್ಯಪ್ರದೇಶ ರಾಜ್ಯದ ಇಂದೋರ್ ನಗರಕ್ಕೆ ಏ.5 ರಿಂದ 8 ರ ವರೆಗೆ ಅಧ್ಯಯನ ಪ್ರವಾಸ ಕೈಗೊಳ್ಳಲು ಉದ್ದೇಶಿಸಿದೆ ಎಂದು ಮೇಯರ್ ಗಾದೆಪ್ಪ ತಿಳಿಸಿದಾಗ. ಇದಕ್ಕೆ ಅನುಮೋದನೆ ಕೊಡಲಿದೆ. ಆದರೆ ನಮ್ಮನ್ನೆಲ್ಲ ಸಭೆ ಕರೆದು ಚರ್ಚಿಸಿ ಬೇರೊಂದು ದಿನಾಂಕ ನಿಗಧಿಪಡಿಸಬೇಕು ಎಂದು ಬಿಜೆಪಿ ಸದಸ್ಯರಾದ ಶ್ರೀನಿವಾಸ್ ಮೋತ್ಕರ್, ಸಿ.ಇಬ್ರಾಹಿಂ ಬಾಬು ಆಗ್ರಹಿಸಿದರು. ಆಗ ಮೇಯರ್ ಆಯ್ತು ನಿಮ್ಮಂತೆ ಸಭೆ ಕರೆದು ನಿರ್ಧರಿಸಲಿದೆಂದರು.

**ಕುಡಿಯುವ ನೀರು:**

ನಗರಕ್ಕೆ ಸಮಪರ್ಕ ಕುಡಿಯುವ ನೀರನ್ನು ಬೇಸಿಗೆ ಅವಧಿಯಲ್ಲಿ



ಸರಬರಾಜು ಮಾಡಲು. ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಸದಸ್ಯರಾದ ವಿ. ಶ್ರೀನಿವಾಸಲು ಮಿಂಚು. ಗುಡಿಗಂಟಿ ಹನುಮಂತಪ್ಪ ಅವರು ಹೇಳಿದರು. ನಾಳೆಯಿಂದ ಕಾಲುವೆಗೆ ನೀರು ಬಿಡಲಿದೆ. ಆ ನೀರನ್ನು ಅಲ್ಲಿಪುರ ಕೆರೆಗೆ ಪಂಪ್ ಮಾಡಲು ವ್ಯವಸ್ಥೆ ಮಾಡಿದೆಂದು ಆಯುಕ್ತರು ತಿಳಿಸಿದರು.

ಪಾಲಿಕೆ ಸದಸ್ಯರಿಗೆ ಕುಡಿಯುವ ನೀರು ಯಾವಾಗ ಬಿಡುತ್ತದೆ ಎಂದು ಪ್ರತಿ ವಾರ್ಡ್ ಸದಸ್ಯರು ಕೇಳಿದರು. ನಮಗೆ ಮಾಹಿತಿ ನೀಡಿ ನಾವು ಜನರಿಗೆ ತಿಳಿಸಲಿದೆಂದರು. ಅದಕ್ಕೆ ಆಯುಕ್ತ ಪಿ.ಎಸ್. ಮಂಜುನಾಥ ಅವರು ಈ ಬಗ್ಗೆ ಸರ್ವಾಜನಿಕರಿಗೆ ತಿಳಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಿದೆಂದರು.

**ಸ್ವಸಹಾಯ ಸಂಘಕ್ಕೆ:**

ಪಾಲಿಕೆಯಲ್ಲಿ ಬಾಕಿ ಇರುವ ಕುಡಿಯುವ ನೀರಿನ ಮತ್ತು ಆಸ್ತಿ ತೆರಿಗೆ ಸಂಗ್ರಹ ಕಾರ್ಯವನ್ನು ಡೇ ನಲ್ಮ್ ಯೋಜನೆಯಡಿ ರಚಿಸಿರುವ ಅರ್ಹ ಮಹಿಳಾ ಸ್ವಸಹಾಯ ಸಂಘಗಳಿಗೆ ವಹಿಸಲು ಸಭೆ ಅನುಮೋದನೆ ನೀಡಿತು. ಸಂಗ್ರಹಿಸಿದ ಮೊತ್ತಕ್ಕೆ ಶೇ.5 ರಷ್ಟನ್ನು ಸ್ವಸಹಾಯ ಸಂಘಗಳಿಗೆ ಪ್ರೋತ್ಸಾಹ ಧನ ನೀಡಲು ಸಮ್ಮತಿಸಿತು. ಈ ಪ್ರೋತ್ಸಾಹ ಧನವನ್ನು ಸಂಘಗಳಿಗೆ ಪ್ರತಿ ತಿಂಗಳ 10 ರೊಳಗೆ ಪಾಲಿಕೆಯಿಂದ ನೀಡಬೇಕಿದೆ.

**ವಾಪಸ್ ಕರೆಸಲಿದೆ:**

ಪಾಲಿಕೆಯಲ್ಲಿಯೇ ಸಿಬ್ಬಂದಿಯ ಕೊರತೆ ಇದೆ. ಹೀಗಿರುವಾಗ ಹೊರ ಸೇವೆಗೆ ಏಕೆ ಕಳಿಸಿದೆಂದು ಇಬ್ರಾಹಿಂ ಬಾಬು ಪ್ರಶ್ನಿಸಿದಾಗ. ಆಯುಕ್ತರು ಆರು ಜನ ಹೊರ ಸೇವೆಗೆ ಹೋಗಿದ್ದಾರೆ ಅವರನ್ನು ಹಿಂದಕ್ಕೆ ಕರೆಸಿಕೊಳ್ಳಲಿದೆಂದು ಹೇಳಿದರು.

**ಪೂಜೆ ಮಾಡಿದರೆ ಸಾಲದು:**

ನಗರದಲ್ಲಿ ಅನೇಕ ರಸ್ತೆಗಳ ಅಭಿವೃದ್ಧಿಗೆ ಬ್ಯಾನರ್ ಹಾಕಿ ಪೂಜೆ ಮಾಡಿ ಮೂರು ತಿಂಗಳಾದರೂ ಕಾಮಗಾರಿ ಆರಂಭ ಮಾಡಲ್ಲ ಎಂದರೆ ಯಾಕೆ. ಹೀಗೆ ಮಾಡಬೇಕು. ಅನೇಕ ಕಡೆ ತೋಡಿ ಹಾಗೆ ಬಿಟ್ಟಿದೆ ಹೀಗೆ ಆದರೆ ಪ್ರತಿಭಟನೆ ಮಾಡಬೇಕಾಗುತ್ತದೆಂದು ಮೋತ್ಕರ್ ಹೇಳಿದರು.

ಕ್ಯಾಪಾಸಿಟಿ ಇಲ್ಲದ ಗುತ್ತಿಗೆದಾರರಿಗೆ ಏಕೆ ಟೆಂಡರ್ ಕೊಡುತ್ತೀರಿ ಎಂದು ಇಬ್ರಾಹಿಂಬಾಬು ಪ್ರಶ್ನಿಸಿದರು. ನಗರದಲ್ಲಿ ಅನೇಕ ಕಾಮಗಾರಿಗಳನ್ನು ಅರ್ಧಂ ಮರ್ಧ ಮಾಡಿ ಬಿಡಲಾಗಿದೆ ಎಂದು ಆರೋಪಿಸಿದರು.

ಇದಕ್ಕೆ ಸಭೆಯಿಂದ ಉತ್ತರ ಬರಲಿಲ್ಲ ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ವಿ.ಕುಬೇರ, ಕೆ.ಹನುಂಮತಪ್ಪ, ಕವಿತಾ ವನ್ನಪ್ಪ ಮೊದಲಾದವರು. ಪಾಲ್ಗೊಂಡಿದ್ದರು.

# : C I T A T I O N :

**IN THE COURT OF THE PRL. CIVIL JUDGE AND JMFC., AT HUMNABAD.**

**CRL. MISC. No.2272/2026.**

**Petitioners:**

1. **Dasharath S/o Ningappa,** Age: 57-yrs. Occu: Agriculture.
2. **Kashinath S/o Dasharath,** Age: 37-yrs. Occu: Agriculture. R/o H. No.24-144, Teachers Colony, Town Humnabad.
3. **Laxmi D/o Dasharath W/o Dayanand,** Age: 32-yrs. Occu: House hold. R/o Village Boral, Tq. Chitguppa.
4. **Mamata D/o Dasharath W/o Kashinath,** Age: 30-yrs. Occu: House hold. R/o Village Mustari, Tq. Chitguppa.
5. **Sagar S/o Dasharath**, Age: 28-yrs. Occu: Agriculture.
6. **Sharanbasappa S/o Dasharath,** Age: 24-yrs. Occu:Agriculture, R/o H.No.24-144, Teachers Colony, Hankuni road Town Humnabad.

**Respondent:**

The Registrar of Birth and Death through The Chief officer TMC Humnabad.

**Sub:- Petition U/Sec. 13(3) of Birth and Death Registration Act-1969**

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Wife of petitioner No.1 and mother of the petitioner No. 2 to 6 by namely LATE. NAGAMMA W/O DASHARATH, who was died on 26.02.2015 at Teachers Colony, Humnabad Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 28.04.2026 at 11.00 AM in person or any authorized pleader to answer such claim otherwise the matter will be heard and determined in your absence as per law.

***Given under my hand and seal of he court, this the 28-03-2026***

**//By order of the court//**
**Chief Ministerial Officer,**
**Prl. Civil Judge & JMFC Court,**
**Humnabad.**

# DTAFTNOTICE

**BEFORE THE PERMANENT LOK ADALAT GULBARGA. PLAC. NO.1957 /2025**

**Between:**

Canara Bank a body corporate constituted under the Banking companies

(Acquisition and transfer of undertaking) Act. 1970, head office at Bangalore

through its Sr. Manager / Principal Officer, Canara Bank Humanabad-II Branch Tq. Humanabad & Dist. Bidar.

**--- Petitioner.**

V/s

**1) Sri. Mallikarjun S/o. Shivappa Borale** Age: 64 years Occ: Agriculture

**2) Sri Shivashankrappa @ Sidram S/o. Prabanna** Age: 64 years. Occ: Agriculture

Both are R/o: Gadavanti village, Tq: Humanabad, Dist: Bidar

**.Respondent..**

Claim petition for recovery of Money.

To,

The above named Respondents Whereas, the above named Petitioner has filed a Petition for recovery of money of Rs. 51,57,138/- together with interest at 7% along with penal interest P. A. against you the Respondent The notices issued through RPAD

By this Adalat returned un-served stating that you the Respondents thus notices issued by this Adalat to you returned un served On One ground or the other.

Hence this paper publication is published for your appearance in this Adalat in person or through a pleader duly instructed and able to answer all the material questions relating to the claim for recovery of money on 28/04/2026 at 11.30 A.M., to answer the claim of the above said Petitioner, failing which, you will be placed ex-parte and the matter will be decided as per law.

**Given under the hand and seal of this Permanent Lok Adalat on this the-12-day** March of 2026.

**S. M. Bijanalli**
**I/C SHERIDTEDAR PLAC,**
**Advocate**
**KALABURAGI**

# ಅರ್ಥಪೂರ್ಣವಾಗಿ ಶರಣೆ ದಾನಮ್ಮ ದೇವಿ ಉತ್ಸವ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಗುಣತೀರ್ಥವಾಡಿ ಕಲ್ಯಾಣ ಮಹಾಮನೆಯಲ್ಲಿ ಏಪ್ರಿಲ್ 4 ಮತ್ತು 5 ರಂದು ಶರಣೆ ದಾನಮ್ಮದೇವಿ ಉತ್ಸವ ಹಾಗೂ 4ನೇ ಶರಣ ಸಮಾಗಮ & ಜ್ಞಾನ ಶಿಬಿರ ಹಮ್ಮಿಕೊಳ್ಳಲಾಗಿದೆ. ಎರಡು ದಿನದ ಉತ್ಸವದಲ್ಲಿ ದಾಂಪತ್ಯ ಧರ್ಮ ಸಮಾವೇಶ, ಕಾಯಕ ಶರಣರ ಸಮಾವೇಶ, ಶರಣ ಜ್ಞಾನ ಗೋಷ್ಠಿಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಗುರುವಂದನಾ ಹಾಗೂ ಜ್ಯೋತಿ ಯಾತ್ರೆಯ ಸಮಾರೋಪ ಸಮಾರಂಭ ನೆರವೇರಲಿದೆ ಎಂದು ಪೂಜ್ಯ ಶ್ರೀ ಸದ್ಗುರು ಬಸವಪ್ರಭು ಸ್ವಾಮೀಜಿಯವರು ತಿಳಿಸಿದ್ದಾರೆ. ತಾಲೂಕಿನ ಗುಣತೀರ್ಥವಾಡಿ ಮಾಹಾಮನೆಯಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಶ್ರೀಗಳು ಶರಣೆ ದಾನಮ್ಮ ಉತ್ಸವದ ವೇದಿಕೆಯಲ್ಲಿ ದಿನಾಂಕ 4ರಂದು ಬೆಳಿಗ್ಗೆ 5 ರಿಂದ 6ಗಂಟೆಗೆ ಪತಂಜಲಿ ಯೋಗ ಗುರು ಬಸವರಾಜ ಮಾಳಿ, ಶರಣೆ ಮೇಘಾ ಯೋಗಾಸನ ಹೇಳಿಕೊಡಲಿದ್ದಾರೆ. ಬೆಳಿಗ್ಗೆ 7 ರಿಂದ 9ರವರೆಗೆ ಸಾಮೂಹಿಕ ಇಷ್ಟಲಿಂಗ ಪೂಜೆ, ಲಿಂಗಾನುಭಾವ ಮತ್ತು ಇಷ್ಟಲಿಂಗ ದೀಕ್ಷೆ ಕಾರ್ಯಕ್ರಮ ಹಾಗೂ ವಚನ ಪಠಣ, ದಾನಮ್ಮ ದೇವಿ ಮಂತ್ರ ಪಠಣ ನೆರವೇರಲಿದೆ. ಬೆಳಿಗ್ಗೆ 10 ಗಂಟೆಗೆ ಪೂಜ್ಯರ ಮತ್ತು ಸರ್ವ ಶರಣರ ಸಮ್ಮುಖದಲ್ಲಿ ನಿವೃತ್ತ ನ್ಯಾಯಾಧೀಶರಾದ ಎಸ್ ಎಸ್ ನಾಗರಾಳೆಯವರು ಷಟಸ್ಥಲ ಧ್ವಜಾರೋಹಣ ನೆರವೇರಿಸಲಿದ್ದಾರೆ. ದಿವ್ಯ ಸಾನಿಧ್ಯವನ್ನು ಹುಲಸೂರಿನ ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳು ವಹಿಸಲಿದ್ದಾರೆ. ಕಾರ್ಯಕ್ರಮದ ಉದ್ಘಾಟನೆಯನ್ನು ಬೈಲೂರು ನಿಷ್ಕಲ ಮಂಟಪದ ಪೂಜ್ಯ ಶ್ರೀ ನಿಜಗುಣಪ್ರಭು ಮಹಾಸ್ವಾಮಿಗಳು ನೆರವೇರಿಸಲಿರುವರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ವಚನ ಕುಮಾರಸ್ವಾಮಿ ರೂಪಾ ಅವರು ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಶರಣ ದಿಲೀಪ ಶಿಂದೆ ಆಶಯ ನುಡಿಯಾಡಲಿದ್ದಾರೆ. ಇದೇ ಸಂದರ್ಭದಲ್ಲಿ ಪೂಜ್ಯ ಶ್ರೀ ಸದ್ಗುರು ಬಸವಪ್ರಭು ಸ್ವಾಮೀಜಿಯವರು ರಚಿಸಿದ *ಜೀವನ ದರ್ಶನ* ಕೃತಿ ಬಿಡುಗಡೆಗೊಳ್ಳಲಿದ್ದು, ಈ ಕೃತಿಯನ್ನು ಹಾವೇರಿಯ ಹಿರಿಯ ಸಾಹಿತಿಗಳಾದ ಸತೀಷ ಕುಲಕರ್ಣಿ ಅವರು ಬಿಡುಗಡೆ ಮಾಡಲಿದ್ದಾರೆ. ಪೂಜ್ಯ ಶ್ರೀ ಡಾ. ಶಿವಲಿಂಗೇಶ್ವರ ಸ್ವಾಮಿಗಳು ಸಂಖ, ಪ್ರಭುದೇವ ಮಹಾಸ್ವಾಮೀಜಿಯವರು ಗೋರ್ಟಾ ದಿವ್ಯ ಸಮ್ಮುಖ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ಶರಣು ಸಲಗರ. ಹುಮನಾಬಾದ ಶಾಸಕರಾದ ಸಿದ್ದು ಪಾಟೀಲ ಆಗಮಿಸಲಿದ್ದಾರೆ.

# ಕಲ್ಯಾಣ ಅತ್ಯಂತ ಪವಿತ್ರವಾದ ನೆಲ: ಸಿದ್ಧಬಸವ ಕಬೀರ ಶ್ರೀ

• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ




ಬಸವಕಲ್ಯಾಣ ಅತ್ಯಂತ ಪವಿತ್ರವಾದ ನೆಲ. ಎಲ್ಲರನ್ನೂ ಒಗ್ಗೂಡಿಸಿದ, ಎಲ್ಲೆಡೆ ಇರುವ ಕತ್ತಲೆಯನ್ನು ಕಳೆದವರು ಬಸವಣ್ಣನವರು ಎಂದು ಚಿಗರಳ್ಳಿಯ ಮರುಳಶಂಕರದೇವ ಗುರುಪೀಠದ ಪೂಜ್ಯಶ್ರೀ ಸಿದ್ಧಬಸವ ಕಬೀರ ಮಹಾಸ್ವಾಮಿಗಳ ಹೇಳಿದರು.

ನಗರದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಹಾಗೂ ವಿಶ್ವಸ್ಥ ಸಮಿತಿಯ ವತಿಯಿಂದ ಶ್ರೀ ಬಸವೇಶ್ವರ ಜಾತ್ರೆ ಪ್ರಯುಕ್ತ ಬುಧವಾರ ಏರ್ಪಡಿಸಿದ್ದ ಬಸವತತ್ವ ಆಧ್ಯಾತ್ಮಿಕ ಪ್ರವಚನದ ಉದ್ಘಾಟನಾ ಸಮಾರಂಭದಲ್ಲಿ ನೇತೃತ್ವ ವಹಿಸಿ ಆಶೀರ್ವಚನ ನೀಡಿದ ಅವರು, ಎಲ್ಲರಿಗೂ ಮಾತನಾಡಲು ಶಕ್ತಿ ನೀಡಿದ್ದು ಈ ನೆಲ. ಅದು ಬಸವಣ್ಣನವರಿಂದ ಎಂದರು.

ಎಡ ಬಲ ಎಂಬ ಭೇದ ತೆ–ೂಡದದ್ದು ಬಸವಣ್ಣ. ಇಷ್ಟಲಿಂಗ ಎಡಗೈಯಲ್ಲಿ ಇರಿಸಿ, ಎಡಗೈಗೆ ಆದ್ಯತೆ ನೀಡಿದ ಜಗತ್ತಿನ ಮೊದಲ ದಾರ್ಶನಿಕ. ಶರಣರ ಜೊತೆ ಸೇರಿ ಮಾತುಕತೆಗಾಗಿ ಅಕ್ಕಮಹಾದೇವಿ ಕಲ್ಯಾಣಕ್ಕೆ ಬಂದಿದ್ದರು. ಎಲ್ಲರನ್ನೂ ಮುನ್ನೆಲೆಗೆ ತಂದಿದ್ದು ಬಸವಣ್ಣ ಎಂದರು.

ಸಾನಿಧ್ಯ ವಹಿಸಿದ ಹುಲಸೂರಿನ ಶ್ರೀ ಗುರು ಬಸವೇಶ್ವರ ಸಂಸ್ಥಾನ ಮಠದ ಪೀಠಾಧಿಪತಿ ಪೂಜ್ಯ ಶ್ರೀ ಡಾ. ಶಿವಾನಂದ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ನಾಂದಿ ಹಾಡಿದ ಪ್ರಖರ ಚಿಂತಕರು. ಸಮಾನತೆಗಾಗಿ ಶ್ರಮಿಸಿದ ದಾರ್ಶನಿಕ. ಬಸವ ಸಿದ್ಧಾಂತ ತಿಳಿದು

ಬಾಳಿದರೆ ಬದುಕು ಸಾರ್ಥಕ. ಬಸವಣ್ಣನವರ ತತ್ವ ಚಿಂತನೆ ಪ್ರಸಾರದಲ್ಲಿ ಶ್ರೀ ಬಸವೇಶ್ವರ ದೇವಸ್ಥಾನ ಪಂಚ ಕಮಿಟಿ ಹಾಗೂ ವಿಶ್ವಸ್ಥ ಸಮಿತಿಯ ಪಾತ್ರ ದೊಡ್ಡದು ಎಂದರು. ಹರಳಯ್ಯನವರ ಪೀಠದ ಪೂಜ್ಯ ಡಾ. ಗಂಗಾಂಬಿಕಾ ಅಕ್ಕನವರು ನೇತೃತ್ವ ವಹಿಸಿ ಆಶೀರ್ವಚನ ನೀಡಿ, ಜಗತ್ತಿನ ಎಲ್ಲ ಸಮಸ್ಯೆಗಳನ್ನೂ ನೀಗಿಸುವ ಶಕ್ತಿ ಬಸವ ತತ್ವದಲ್ಲಿ ಅಡಗಿದೆ. ಬಸವಣ್ಣನವರ ವಚನಗಳು ಸತ್ಯಶುದ್ಧ ಬದುಕಿನ ದಾರಿಯನ್ನು ತೋರುವ ದೀಪಗಳಾಗಿವೆ ಎಂದರು.

ಸಹಾಯಕ ಆಯುಕ್ತರಾದ ಪ್ರಕಾಶ ಕುದರೆ ಸಮಾರಂಭ ಉದ್ಘಾಟಿಸಿ ಮಾತನಾಡಿ, ಬಸವಾದಿ ಶರಣ–ರು ಜಗತ್ತಿಗೆ ಅತ್ಯಂತ ಶ್ರೇಷ್ಠ ಆಲೋಚನೆಗಳು ಕೊಟ್ಟಿದ್ದಾರೆ. ಸಹಬಾಳ್ವೆ, ಸಹಜತೆ, ಸಮಾನತೆಯ ಅಂಶಗಳು ವಚನದಲ್ಲಿ ಅಡಗಿವೆ. ಬಸವಣ್ಣನವರ ವಿಚಾರಗಳು ಎಂದಿಗೂ ಪ್ರಸ್ತುತ ಎಂದರು.

ಬಿಡಿಪಿಸಿ ಅಧ್ಯಕ್ಷರಾದ ಅನಿಲಕುಮಾರ ರಗಟೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬಿಡಿವಿಸಿ ಅಧ್ಯಕ್ಷರಾದ ಶಶಿಕಾಂತ ದುರ್ಗೆ, ಬಿಡಿಪಿಸಿ ಉಪಾಧ್ಯಕ್ಷ ಮಲ್ಲಿಕಾರ್ಜುನ ಕುರ–ಕೋಟೆ, ಕೋಶಾಧ್ಯಕ್ಷ ಜಗನ್ನಾಥ ಖೂಬಾ, ಕಾರ್ಯದರ್ಶಿ ಅಶೋಕ ನಾಗರಾಳೆ, ಸಹಕಾರ್ಯದರ್ಶಿ ಸುನಿಲಕುಮಾರ ರಾಯವಾಡೆ, ನಿರ್ದೇಶಕರಾದ ಬಸವರಾಜ ಕೋರಕೆ, ವೀರಣ್ಣ ಹಲಶೆಟ್ಟೆ, ಭದ್ರಿನಾಥ ಪಾಟೀಲ, ವಿವೇಕಾನಂದ ಹೊದಲೂರೆ, ಬಸವರಾಜ ತೊಂಡಾರೆ, ಮಲ್ಲಿಕಾರ್ಜುನ ಚಿರಡೆ, ಸುನಿಲ್ ಹೊಳಕುಂದೆ, ಪುಷ್ಪಾ ಮಾಮಾ, ಬಿಡಿವಿಸಿ ಉಪಾಧ್ಯಕ್ಷ ಡಾ ಜಿ. ಎಸ್. ಭುರಳೆ. ಕಾರ್ಯದರ್ಶಿ ನಾಗಯ್ಯ ಸ್ವಾಮಿ, ಕೋಶಾಧ್ಯಕ್ಷರಾದ ಶಿವರಾಜ್ ಶಾಶೆಟ್ಟೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಬಿಡಿಪಿಸಿ ಸಹ ಕಾರ್ಯದರ್ಶಿಗಳಾದ ಬಸವರಾಜ ಬಾಲಕಿಲೆ ಸ್ವಾಗತಿಸಿದರು. ಜ್ಯೋತಿ ತುಗಾವೆ ನಿರೂಪಿಸಿದರು.

ರಂಜನಾ ಭೂಶೆಟ್ಟಿ ಹಾಗೂ ಮಂಜುನಾಥ ಹೇಮಶೆಟ್ಟಿ ಅವರಿಂದ ವಚನ ಗಾಯನ ನಡೆಯಿತು.

# ಏ, 4ಕ್ಕೆ ಯಲಬುರ್ಗಾದ ನೂತನ ನ್ಯಾಯಾಲಯ ಸಂಕೀರ್ಣ ಕಟ್ಟಡ ಉದ್ಘಾಟನೆ

ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಜಿಲ್ಲಾ ನ್ಯಾಯಾಂಗ ಇಲಾಖೆ, ಲೋಕೋಪಯೋಗಿ ಇಲಾಖೆ ಕೊಪ್ಪಳ ಹಾಗೂ ಬಾರ್ ಅಸೋಸಿಯೇಷನ್ ಯಲಬುರ್ಗಾ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಯಲಬುರ್ಗಾ ಪಟ್ಟಣದಲ್ಲಿ ನಿರ್ಮಿಸಲಾದ ನೂತನ ನ್ಯಾಯಾಲಯ ಸಂಕೀರ್ಣ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಏಪ್ರಿಲ್ 04ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳಾದ ಗೌರವಾನ್ವಿತ ನ್ಯಾಯಮೂರ್ತಿ ಹಂಚಾಟೆ ಸಂಜೀವ್‌ಕುಮಾರ್, ಗೌರವಾನ್ವಿತ ನ್ಯಾಯಮೂರ್ತಿ ಎಂ.ಜಿ. ಶುಕುರೆ ಕಮಲ ಹಾಗೂ ಗೌರವಾನ್ವಿತ ನ್ಯಾಯಮೂರ್ತಿ ಪಿ. ಶ್ರೀ ಸುಧಾ ಅವರ ಘನ ಉಪಸ್ಥಿತಿಯಲ್ಲಿ ಕರ್ನಾಟಕ ಹೈಕೋರ್ಟ್ ನ್ಯಾಯಾಧೀಶರು ಮತ್ತು ಕೊಪ್ಪಳ ಜಿಲ್ಲೆಯ ಆಡಳಿತ ನ್ಯಾಯಾಧೀಶರಾದ ಗೌರವಾನ್ವಿತ ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ ಅವರು ಯಲಬುರ್ಗಾದ ನೂತನ ನ್ಯಾಯಾಲಯ ಸಂಕೀರ್ಣ ಕಟ್ಟಡದ ಉದ್ಘಾಟನೆ ನೆರವೇರಿಸುವರು. ಕರ್ನಾಟಕ ಸರ್ಕಾರದ ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರಾದ ಎಚ್.ಕೆ. ಪಾಟೀಲ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು. ಗೌರವಾನ್ವಿತ ಅತಿಥಿಗಳಾಗಿ ಲೋಕೋಪಯೋಗಿ ಇಲಾಖೆಯ ಸಚಿವರಾದ ಸತೀಶ್ ಜಾರಕಿಹೊಳಿ, ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ತಂಗಡಗಿ ಶಿವರಾಜ್ ಸಂಗಪ್ಪ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ, ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ, ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಹಾಗೂ ಕೊಪ್ಪಳ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಚಂದ್ರ ಶೇಖರ್ ಸಿ., ಯಲಬುರ್ಗಾ ವಕೀಲರ ಸಂಘದ ಅಧ್ಯಕ್ಷರಾದ ಸುಭಾಷಚಂದ್ರ ಎಸ್. ಹೊಂಬಳ, ಪ್ರಧಾನ ಕಾರ್ಯದರ್ಶಿ ಇ.ಟಿ. ಮಹಾಂತೇಶ ಹಾಗೂ ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಹೇಮಂತ್ ರಾಜ್ ಸೇರಿದಂತೆ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಯಲಬುರ್ಗಾ ಬಾರ್ ಅಸೋಸಿಯೇಷನ್‌ನ ಎಲ್ಲಾ ಸದಸ್ಯರು ಪಾಲ್ಗೊಳ್ಳುವರು ಎಂದರು.

# ಎಫ್‌ಐಡಿ ಕಡ್ಡಾಯ

ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ಪ್ರಸಕ್ತ ಸಾಲಿನಿಂದ ಕೆ–ಕಿಸಾನ ತಂತ್ರಾಂಶದ ಮೂಲಕವೇ ರೈತರಿಗೆ ರಸಗೊಬ್ಬರ ವಿತರಣೆ ಮಾಡಲು ತಿಳಿಸಿದನ್ವಯ ಹಾಗೂ ಕೃಷಿ ಇಲಾಖೆಯ ಪ್ರಮುಖ ಯೋಜನೆಗಳ ಲಾಭ ಪಡೆಯಲು ರೈತರು ಕಡ್ಡಾಯವಾಗಿ ಎಫ್‌ಐಡಿ ಯನ್ನು ಹೊಂದಿರಬೇಕು.ರೈತರ ಎಲ್ಲಾ ಸರ್ವೇ ನಂಬರ್ ಆ ಎಫ್‌ಐಡಿ ಗೆ ಲಿಂಕ್ ಆಗಿರಬೇಕು. ಆದ ಕಾರಣ ರೈತರು ಈಗಾಗಲೇ ಎಫ್‌ಐಡಿ ಯನ್ನು ಹೊಂದಿದ್ದಲ್ಲಿ ಅಥವಾ ಹೊಂದಿರದೆ ಇದ್ದಲ್ಲಿ ತಮ್ಮ ಎಲ್ಲಾ ಪಹಣಿಯನ್ನು ಹಾಗೂ ಆಧಾರಕಾರ್ಡಗಳನ್ನು ತೆಗೆದುಕೊಂಡು ಸಮೀಪದ ರೈತ ಸಂಪರ್ಕ ಕೇಂದ್ರ, ಸಾಮಾನ್ಯ ಸೇವಾ ಕೇಂದ್ರಗಳು ಮತ್ತು ಗ್ರಾಮ್ ಒನ್ ಕೇಂದ್ರಗಳಿಗೆ ಭೇಟಿ ನೀಡಬೇಕು.

ಎಫ್‌ಐಡಿ ಯನ್ನು ಹೊಂದಿದ್ದಲ್ಲಿ ನಿಮ್ಮ ಎಲ್ಲಾ ಸರ್ವೇ ನಂಬರ್‌ಗಳನ್ನು ಆ ಎಫ್‌ಐಡಿ ಗೆ ಲಿಂಕ್ ಮಾಡಿಸಿಕೊಳ್ಳಲು ಹಾಗೂ ಎಫ್‌ಐಡಿ ಯನ್ನು ಹೊಂದಿರದೆ ಇದ್ದಲ್ಲಿ ಹೊಸದಾಗಿ ಎಫ್‌ಐಡಿ ಯನ್ನು ಸೃಜಿಸಿಕೊಳ್ಳಬೇಕು (ಸೃಜಿಸಿಕೊಳ್ಳಲು ಅಗತ್ಯ ದಾಖಲಾತಿಗಳೊಂದಿಗೆ ಕೇಂದ್ರಗಳನ್ನು ಸಂಪರ್ಕಿಸಬೇಕು) ಎಂದು ಕೊಪ್ಪಳ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉತ್ತಮ ಶಿಕ್ಷಣದಿಂದ ಮಾತ್ರ ಮಕ್ಕಳ ಪ್ರಗತಿ ಸಾಧ್ಯ: ಜಮಾದಾರ



• ಮಲ್ಲಮ್ಮನುಡಿ ವಾರ್ತೆ, ಹುಮನಾಬಾದ

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣವು ತುಂಬಾ ಅವಶ್ಯಕತೆವಾಗಿದೆ. ಕೇವಲ ತೊರಿಕೆಗೆ ಮಾತ್ರ ಶಿಕ್ಷಣ ನೀಡಿದರೆ ಸಾಲದು,ಶಿಕ್ಷಣವು ಮಕ್ಕಳ ಸರ್ವಾಂಗಿಣ ವಿಕಾಸಕ್ಕೆ ಮೂಲ ಬುನಾದಿಯಾಗಬೇಕು ಉತ್ತಮ ಶಿಕ್ಷಣದಿಂದ ಮಾತ್ರ ಮಕ್ಕಳ ಪ್ರಗತಿ ಸಾಧ್ಯ ಎಂದು ತಾಲೂಕಿನ ಚಿನಕೆರಾ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ಎಂಟನೇ ವಿದ್ಯಾರ್ಥಿಗಳ ಬಿಳ್ಕೊಡಿಗೆ ಸಮಾರಂಭದಲ್ಲಿ ಮಾಜಿ ಗ್ರಾಮ ಪಂಚಾಯತ್ ಸದಸ್ಯರಾದ ವೆಂಕಟೇಶ್ ಜಮಾದಾರ್ ಮಾತನಾಡುತ್ತ ನುಡಿದರು.

ಈ ಸಂದರ್ಭದಲ್ಲಿ ಶಾಲಾ ವಿದ್ಯಾರ್ಥಿಗಳ ಸಂಗೀತ ಹಾಗೂ ನೃತ್ಯ ಕಾರ್ಯಕ್ರಮ ಎಲ್ಲರ ಮನಸೂರೆಗೊಂಡಿತು.

ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಶಾಲೆಯ ಮುಖ್ಯಗುರುಗಳಾದ ಶ್ರೀಮತಿ ಕಾಂತಾ ಸಜ್ಜನ, ಶಾಲೆಯ ಎಸ್ ಡಿ ಎಮ್ ಸಿ ಅಧ್ಯಕ್ಷರಾದ ಸುಭಾಸಚಿಂಚೋಳಿಕರ್, ಸದಸ್ಯರಾದ ರಾಜು ಶೀರ್ಷಿಕರ್ ಆಕಾಶರೆಡ್ಡಿ ಮರ್ತುಲೇ, ಲಕ್ಷ್ಮಣ್ ಕಡ್ಡಿ ಹಾಗು ಎಲ್ಲಾ ಶಾಲಾ ಶಿಕ್ಷಕರು, ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

# ಮಾತೃಶ್ರೀ ಹೇಮಾವತಿ ಅಮ್ಮನವರ ಹುಟ್ಟುಹಬ್ಬ ನಿಮಿತ್ತ ಹಣ್ಣು ವಿತರಣೆ



• ಮಲ್ಲಮ್ಮ ನುಡಿವಾರ್ತೆ ಕಲಘಟಗಿ

ಪಟ್ಟಣದ ಮಾಚಾಪೂರ ಗ್ರಾಮದಲ್ಲಿ ಬಡತನದಲ್ಲಿರುವ ಫಲಾನುಭವಿಗಳಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಡಿಯಲ್ಲಿ ವಾತ್ಸಲ್ಯ ಕಾರ್ಯಕ್ರಮದನ್ವಯ ಮಾತೃಶ್ರೀ ಅಮ್ಮನವರ ಹುಟ್ಟುಹಬ್ಬದ ಪ್ರಯುಕ್ತ ಹಣ್ಣುಹಂಪಲು ವಿತರಿಸಲಾಯಿತು.

ಯೋಜನಾಧಿಕಾರಿಗಳಾದ ಪ್ರಶಾಂತ್ ನಾಯ್ಕ ಮಾತನಾಡಿ ಮಾತೃಶ್ರೀ ಹೇಮಾವತಿ ಅಮ್ಮನವರ ಮಾರ್ಗದರ್ಶನದಲ್ಲಿ ಸಮಾಜದಲ್ಲಿರುವ ಕಡುಬಡತನದಲ್ಲಿರುವ ಕುಟುಂಬದ ವೈಯಕ್ತಿಕ ಸರ್ವೇಕ್ಷಣೆ ನಡೆಸಿ, ಅವರಿಗೆ ಬೇಕಾಗುವ ಅತೀ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಎಂದರು

ಈ ಸಂದರ್ಭದಲ್ಲಿ ಸುರೇಶ್ ಮರಲಿಂಗಣ್ಣವರ, ಗೀತಾ ಮರಲಿಂಗಣ್ಣವರ ಮೇಲ್ವಿಚಾರಕರಾದ ನಿಶ್ಚಿತಾ ಗುನಗಾ, ಸೇವಾಪ್ರತಿನಿಧಿ ಶಂಕ್ರಮ್ಮ ಇದ್ದರು.

ಚಿತ್ರ ಇದೆ 02ಕೆ.ಎಲ್.ಜಿ1 ಮಾಚಾಪುರ ಗ್ರಾಮದಲ್ಲಿ ಲಕ್ಷ್ಮವ್ವ ಶಿಂದೆ ಇವರಿಗೆ ಮಾತೃಶ್ರೀ ಅಮ್ಮನವರ ಹುಟ್ಟುಹಬ್ಬದ ಪ್ರಯುಕ್ತ ಹಣ್ಣು–ಹಂಪಲುಗಳನ್ನು ವಿತರಣೆ ಮಾಡಲಾಯಿತು.

# ಮಾಶಾಸನ ಫಲಾನುಭವಿಗಳಿಗೆ ಹಣ್ಣು ಹಂಪಲು ವಿತರಣೆ



• ಮಲ್ಲಮ್ಮ ನುಡಿವಾರ್ತೆ ಕೊಪ್ಪಳ

ತಾಲೂಕಿನ ಸರ್ದಾರ್ ಗಲ್ಲಿ ವಲಯದ ವರ್ಕರ್ ಓಣಿ ಕಾರ್ಯ–ಕ್ಷೇತ್ರದ ಮಾತೃಶ್ರೀ ಡಾ.ಹೇಮಾವತಿ ವೀರೇಂದ್ರ ಹೆಗಡೆ ಅಮ್ಮನವರ ಹುಟ್ಟುಹಬ್ಬದ ಪ್ರಯುಕ್ತ ಇವತ್ತು ರಾಜ್ಯಾದ್ಯಂತ ಮಸಶಾನ ಪಡೆಯುವ ಎಲ್ಲಾ ಪಲಾನುಭವಿಗಳಿಗೆ.ಹಣ್ಣು ಹಂಪಲು ನೀಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದು. ಕೊಪ್ಪಳದ ಗೌರಿ ಅಂಗಳ ಓಣಿಯ ಮಾಶಾಸನ ಫಲಾನುಭವಿಯಾದ ಬಿಬಿಜಾನ್ ರವರಿಗೆ.ತಾಲೂಕಿನ ಯೋಜನಾಧಿಕಾರಿಗಳಾದ ಶ್ರೀ ಜಗದೀಶ್ ಕೆ ಎಚ್ ರವರು .ಹಣ್ಣು ಹಂಪಲು ವಿತರಣೆ ಮಾಡಿ ವಿಶೇಷರೀತಿಯಲ್ಲಿ ಹುಟ್ಟುಹಬ್ಬವನ್ನು ಆಚರಣೆ ಮಾಡಿ ಶುಭಾಶಯಗಳು ತಿಳಿಸಲಾಯಿತು . ಒಕ್ಕೂಟದ ಅಧ್ಯಕ್ಷರಾದ ರಾಜಶ್ರೀ, ವಲಯದ ಮೇಲ್ವಿಚಾರಕರಾದ ಅಶೋಕ, ವಿಕಾಸ ಸಮನ್ವಯಧಿಕಾರಿ ಗೀತಾ, ಸೇವಾ ಪ್ರತಿನಿಧಿ ರೂಪ, ಸ್ವಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು,


# ಉಚಿತ ವಸತಿ ಶಾಲೆಗೆ ಅರ್ಜಿ ಆಹ್ವಾನ

ಬಳ್ಳಾರಿ: ಸುತ್ತೂರು ಕ್ಷೇತ್ರದ ಜೆ.ಎಸ್.ಎಸ್ ಉಚಿತ ವಸತಿ ಶಾಲೆಯಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಗ್ರಾಮೀಣ ಭಾಗದ ಬಡ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ, 1 ರಿಂದ 8ನೇ ತರಗತಿಯವರೆಗೆ ಹೊಸದಾಗಿ ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಆಸಕ್ತ ಪೋಷಕರು ಶಾಲೆಯ ಅಧಿಕೃತ ವೆಬ್‌ಸೈಟ್‌ಗಳಾದ www.jssschoolsuttur.org ಅಥವಾ www.jssonline.org ಮೂಲಕ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಜೊತೆಗೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.ಏಪ್ರಿಲ್ 2 ರಿಂದ ಅರ್ಜಿ ವಿತರಣೆ ಪ್ರಾರಂಭ, ಮೇ 16 ಅರ್ಜಿ ಸಲ್ಲಿಸಲು ಕೊನೆಯ ದಿನ. ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ "ಮುಖ್ಯೋಪಾಧ್ಯಾಯರು, ಜೆ.ಎಸ್.ಎಸ್. ಸಂಸ್ಥೆಗಳು, ಸುತ್ತೂರು, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ  571129" ಈ ವಿಳಾಸಕ್ಕೆ ನೇರವಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬೇಕು.

ಅರ್ಜಿಯ ಜೊತೆಗೆ ವಿದ್ಯಾರ್ಥಿಯ ಹಿಂದಿನ ತರಗತಿಯ ಅಂಕಪಟ್ಟಿ, ಜಾತಿ ಮತ್ತು ಆದಾಯ ಪ್ರಮಾಣಪತ್ರ ಹಾಗೂ ಆಧಾರ್ ಕಾರ್ಡ್ ಪ್ರತಿಗಳನ್ನು ಲಗತ್ತಿಸಬೇಕು.ಹೆಚ್ಚಿನ ಮಾಹಿತಿಗಾಗಿ ಮೊ.7411486938, ದೂ.08221–232332 ಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ಆಡಳಿತಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಗುರುಮಿಟಕಲ್ ಪಟ್ಟಣದ ಶ್ರೀ ಶಿವಶರಣ ಹರಳಯ್ಯ ಸಮಾಜದ ವತಿಯಿಂದ ಶಿವಶರಣ ಹರಳಯ್ಯ ಜಯಂತಿಯನ್ನು ಆಚರಿಸಲಾಯಿತು.

# ಯಶಸ್ವಿಯಾಗಿ ಗ್ರ್ಯಾಜುವೇಶನ್ ಕಾರ್ಯಕ್ರಮ ಮಕ್ಕಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡಿ: ಪಾಟೀಲ್




• ಮಲ್ಲಮ್ಮ ನುಡಿ ವಾರ್ತೆ ಕಮಲಾಪುರ

ಶಿಕ್ಷಕರು ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ನೀಡಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ತಯಾರಿಸಬೇಕೆಂದು ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಶಿವಶೆಟ್ಟಿ ಪಾಟೀಲ್ ತಾಲೂಕಿನ ಡೊಂಗರಗಾಂವ ಗ್ರಾಮದ ಡೊಂಗರದೇವಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡ ಗ್ರ್ಯಾಜುವೇಶನ್ ಡೇ ಹಾಗೂ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ತಿಳಿಸಿದರು. ಸರ್ಕಾರದಿಂದ ಯಾವುದೇ ಅನುದಾನ ತೆಗೆದುಕೊಳ್ಳದೆ ಡೊಂಗರಾದೇವಿ ಪ್ರಾಥಮಿಕ ಶಾಲೆ ಒಳ್ಳೆಯ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದರು. ಈ ಗ್ರಾಮಕ್ಕೆ ಜೂನಿಯರ್ ಕಾಲೇಜ್ ಕೂಡ ಮಂಜೂರು ಮಾಡಲು ಶಾಸಕರು ಸೇರಿದಂತೆ ನಾವೆಲ್ಲ ಹೋರಾಟ ಮಾಡಿದ್ದೇವೆ. ಕೆಲವು ಅನಿವಾರ್ಯ ಕಾರಣಗಳಿಂದ ಈ ಸಾಲಿನಲ್ಲಿ ಪದವಿ ಪೂರ್ವ ಕಾಲೇಜು ಮಂಜೂರಾಗಿಲ್ಲ ಎಂದು ವಿಷಾದದಿಂದ ನುಡಿದರು.

ಬೀದರ್ ಪರಿಸರವಾಹಿನಿ ಅಧ್ಯಕ್ಷ ಶೈಲೇಂದ್ರ ಕಾವಡಿ ಮಾತನಾಡಿ ಕಮಲಾಪುರ ತಾಲೂಕಿನಲ್ಲಿ ಡೊಂಗರಾಂವ ಗ್ರಾಮ ಆದರ್ಶ ಗ್ರಾಮಗಳಲ್ಲಿ ಒಂದಾಗಿದೆ. ಈ ಗ್ರಾಮ ಅಭಿವೃದ್ಧಿಯತ್ತ ಮುನ್ನಡೆಯುತ್ತಿದೆ. ಎಂದರು. ಶಿಕ್ಷಕರು ಮಕ್ಕಳಿಗೆ ಒಳ್ಳೆಯ ಸಂಸ್ಕೃತಿ ದೇಶಭಕ್ತಿ ಭಾವನೆ ಮೂಡಿಸುವಂಥ ಶಿಕ್ಷಣ ನೀಡಲು ಕೂಡ ಗಮನಹರಿಸಬೇಕು ಎಂದು ಶಿಕ್ಷಕರಿಗೆ ಕಿವಿಮಾತು ಹೇಳಿದರು. ಡೊಂಗರಗಾಂವ ಗ್ರಾಮ ಕಳೆದ 20 ವರ್ಷಗಳಿಂದ ಈ ಗ್ರಾಮದ ಶಾಲೆಗಳ ವಿದ್ಯಾರ್ಥಿಗಳಲ್ಲಿ ಪರಿಸರ ಸಂರಕ್ಷಣೆ ಜಾಗೃತಿ ಮೂಡಿಸಲು ಶ್ರಮಿಸುತ್ತಿದ್ದೇನೆ ಎಂದರು. ವಿದ್ಯಾರ್ಥಿಗಳು ತಮ್ಮ ಮನೆಯ ಅಂಗಳದಲ್ಲಿ ಕಡ್ಡಾಯವಾಗಿ ಸಾಂಕ್ರಾಮಿಕ ರೋಗಗಳನ್ನು ಹೋಗಲಾಡಿಸುವ ಅದ್ಭುತ ಶಕ್ತಿ ಹೊಂದಿರುವ ತುಳಸಿ ಗಿಡ ಪ್ರತಿ ಮನೆಮನೆಗೆ ನೀಡಬೇಕೆಂದು ತಿಳಿಸಿದರು.


ಈ ವರ್ಷ ಡೊಂಗರಾದೇವಿ ಪ್ರಾಥಮಿಕ ಶಾಲೆ, ದತ್ತು ತೆ–ಗೆದುಕೊಂಡು ಮಕ್ಕಳಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಆರೋಗ್ಯ ಸಂರಕ್ಷಣೆಗೆ ಹಾಗೂ ಪರಿಸರ ಸಂರಕ್ಷಣೆಗೆ ದತ್ತು ತೆಗೆದುಕೊಳ್ಳಲಾಗುತ್ತಿದೆ ಎಂದು ಪರಿಸರವಾದಿ ಶೈಲೇಂದ್ರ ಕಾವಡಿ ಘೋಷಿಸಿದರು.

ಸಂಸ್ಥೆಯ ಅಧ್ಯಕ್ಷರಾದ ವಿಜಯಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ನಿವೃತ್ತ ಸಹಾಯಕ ಕೃಷಿ ನಿರ್ದೇಶಕರಾದ ಮಡಿವಾಳಯ್ಯ ಸ್ವಾಮಿ, ಲಲಿತಾ ವಡ್ಡನಕೇರಿ, ಸಿದ್ದಮಲ್ಲಪ್ಪ ಕೆಮುಗಳಿ, ಶಿವ ಶರಣಪ್ಪ ಗುಳೇದ್ ಶಾಲಾ ಮುಖ್ಯಗುರುರಾದ ಮಂಜುಳಾ ಆರ್ ದೇಶಮುಖ್,

ನಾಗಯ್ಯ ಸ್ವಾಮಿ ನೀಲಕಂಠ ಹಿರೇಗೌಡರ್ ಡಾ. ಶ್ರೀಕಾಂತ್ ಕಾಂಬಳೆ. ಬಸವರಾಜ್ ಆರ್ ವಡ್ಡನಕೇರಿ ರವೀಂದ್ರ ಕೆ ಪಾಟೀಲ್ ದಶರತ್ ಸಿತಾಳಗೇರಿ, ರವೀಂದ್ರ ಕೆ ಪಾಟೀಲ್ , ಕುಮಾರಿ ಪ್ರಿಯಾಂಕಾ ಕಿಣ್ಣಿ, ಶಿವಲಿಲಾ ಎಸ್ ಕಾರಮಗಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಗ್ರಾಜುಯೇಷನ್ ಪ್ರಮಾಣ ಪತ್ರ ವಿತರಿಸಲಾಯಿತು ಹಾಗೂ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಗ್ರಾಮಸ್ಥರನ್ನು ಜನಮನ ರಂಜಿಸಿದವು.

# ಜನಗಣತಿ ಏ1 ರಿಂದ ಮೇ 15 ವರೆಗೆ: ಪಂಚಾಳ

• ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ



ಸರ್ಕಾರದ ನಿರ್ದೇಶನದಂತೆ ತಾಲೂಕಿನಲ್ಲಿ 2027ರ ಭಾರತೀಯ ಜನಗಣತಿಯ ಮೊದಲ ಹಂತ ಏಪ್ರಿಲ್ 1ರಿಂದ ಮೇ 15ರ ವರೆಗೆ ಮನೆಗಳ ಪಟ್ಟಿ ಮತ್ತು ಮನೆ ಗಣತಿ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ತಹಶೀಲ್ದಾರ್ ಮಂಜುನಾಥ ಪಂಚಾಳ ತಿಳಿಸಿದ್ದಾರೆ. ಜನಗಣತಿ ಎರಡು ಹಂತಗಳಲ್ಲಿ ನಡೆಯಲ್ಲಿದ್ದು ಮೊದಲನೇ ಹಂತದಲ್ಲಿ ಮನೆಗಳ ಪಟ್ಟಿ ಮತ್ತು ಮನೆಗಳ ಮಾಹಿತಿ ಸಂಗ್ರಹಿಸುವ ಕಾರ್ಯ ನಡೆಯಲಿದೆ. ಇದರೊಂದಿಗೆ ನಾಗರಿಕರಿಗೆ ಸ್ವಯಂ ಗಣತಿ ಮಾಡುವ ಅವಕಾಶ ಕಲ್ಪಿಸಲಾಗಿದ್ದು, ಕೇಂದ್ರ ಸರ್ಕಾರವು ಝಣಣಠಿ://, ಜ.ಛಿಜಟಿಜಿಟಿ.ರಠಿ. ಟಿ ವೆಬ್ ಪೋರ್ಟಲ್ ಸಿದ್ಧಪಡಿಸಿದೆ. ಪೋರ್ಟಲ್ ಮೂಲಕ ಮನೆಯ ಸಂಪೂರ್ಣ ವಿವರ ಭರ್ತಿ ಮಾಡುವುದರ ಮುಖಾಂತರ ಸ್ವಯಂ ಪ್ರೇರಿತ ಗಣತಿ ಎಲ್ಲಾ ನಾಗರಿಕರು ಮಾಡಿಕೊಳ್ಳಬೇಕು. ಗಣತಿ ಪೂರ್ಣಗೊಂಡ ನಂತರ ತಮ್ಮ ಮನೆಗೆ ಗಣತಿದಾರರು ಭೇಟಿ ನೀಡಿದ್ದಾಗ ಸ್ವಯಂ ಗಣತಿ ಐಡಿಯನ್ನು ನೀಡುತ್ತಾರೆ. ಮೊಬೈಲ್ ಅಥವಾ ಇ ಮೇಲ್ ಮೂಲಕ ಐಡಿ ಪಡೆಯಬಹುದು ಗಣತಿ–ದಾರರು ತಮ್ಮ ಮನೆಗೆ ಭೇಟಿ ನೀಡಿದ್ದಾಗ ಅವರೊಂದಿಗೆ ಐಡಿ ಹಂಚಿಕೊಳ್ಳಬೇಕು. ತಾಲೂಕಿನ ಎಲ್ಲ ಸಾರ್ವಜನಿಕರು ಸ್ವಯಂ ಪ್ರೇರಿತವಾಗಿ ಗಣತಿ ಕಾರ್ಯದಲ್ಲಿ ಪಾಲ್ಗೊಂಡು ಸರ್ಕಾರದ ಕೆಲಸಕ್ಕೆ ಕೈ ಜೋಡಿಸಬೇಕೆಂದು ತಹಶೀಲ್ದಾರ್ ಮಂಜುನಾಥ್ ಪಂಚಾಳ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲೂಪ್ ಟ್ರೈಲರ್ ಕಿಕ್..!



**ಬೆಂಗಳೂರು:** ಕಾಲ ಬದಲಾದಂತೆ ಆಟ ಆಡುವ ವೈಖರಿ ಬದಲಾಗುತ್ತಿದೆಯೇ ವರೆತು ಆಟ ಆಡುವವನ ಮನಸ್ಥಿತಿ ಎಂದಿಗೂ ಬದಲಾಗಿಲ್ಲ ಎಂಬ ಸಂದೇಶವನ್ನಿಟ್ಟುಕೊಂಡೇ 'ಲೂಪ್' ಚಿತ್ರದ ಟ್ರೈಲರ್ ರಿಲೀಸ್ ಆಗಿದೆ..! ಲವ್ ಮತ್ತು ಸಸ್ಪೆನ್ಸ್ ಅಂಶಗಳನ್ನ ಹೊಂದಿರೋ 'ಲೂಪ್' ಸಿನಿಮಾ ಒಂದು ಆಟದ ಸುತ್ತ ಸುತ್ತುತ್ತಾ ಕುತೂಹಲಕಾರಿ ಕ್ಲೈಮ್ಯಾಕ್ಸ್ ನೀಡುತ್ತಂತೆ. ಸ್ಟಾಪ್ ಬೆಟ್ಟಿಂಗ್ಸ್, ನೋ ಡ್ರಗ್ಸ್ ಎನ್ನುವ ಸಂದೇಶವನ್ನು ಈ ಸಿನಿಮಾದಲ್ಲಿ ತೋರಿಸಲಾಗಿದೆಯಂತೆ. ಬೆಂಗಳೂರಿನ ಮಲ್ಲೇಶ್ವರಂ ರೇಣುಕಾಂಬ ಸ್ಟುಡಿಯೋದಲ್ಲಿ 'ಲೂಪ್' ಚಿತ್ರದ ಟ್ರೈಲರ್ ಲಾಂಚ್ ನೆರವೇರಿದ್ದು, ಒಳ್ಳೆ ಹುಡುಗ ಪ್ರಥಮ್ ಬಂದು ವಿಶ್ ಮಾಡಿದ್ರು. ಚಿತ್ರಕ್ಕೆ ಯಶವಂತ ಆಕ್ಷನ್-ಕಟ್ ಹೇಳಿದ್ದು, ಎಸ್.ಕೆ.ಎಲ್ಲಪ್ಪ ಹಾಗೂ ಯುವಿ ಪ್ರಮೋಷನ್ ಉಮೇಶ್ ಎ ಓ ಬಂಡವಾಳ ಹೂಡಿದ್ದಾರೆ. ಶಶಿಕಿರಣ್ ಗೆ ಶೋಭಿತ ಜೋಡಿಯಾಗಿದ್ದು ಮಿಮಿಕ್ರಿ ಗೋಪಿ, ಅಪ್ಪುರಾಜ್, ಅಭಿ ಸಾಮ್ರಾಟ್, ಮಂಜುಳಾ ಅರಸ್, ಗಣೇಶ್, ಜೀವನ್ ಗೌಡ ಕೂಡ ನಟಿಸಿದ್ದಾರೆ. ಜೀವನ್ ಗೌಡ ಸಿನಿಮಾಟೋಗ್ರಾಫಿ, ಸಂತೋಷ್ ಜೋಶ್ವ ಮ್ಯೂಸಿಕ್ ಮತ್ತು ಅನಿಲ್ ಆಚಾರ್ ಸಂಕಲನ 'ಲೂಪ್' ಆಟದ ಓಟ ಹೆಚ್ಚಿಸುತ್ತಂತೆ. ಪ್ರಚಾರದ ಕೆಲಸಗಳ ಹೊಣೆಯನ್ನ ಶ್ರೀಧರ್ ವಹಿಸಿಕೊಂಡಿದ್ದು, ಸದ್ಯದಲ್ಲೇ 'ಲೂಪ್' ಚಿತ್ರದ ರಿಲೀಸ್ ದಿನಾಂಕ ಘೋಷಣೆಯಾಗುತ್ತೆ..!

# ಭೀಮಣ್ಣ ಖಂಡ್ರೆ ಪ್ರಶಸ್ತಿಗೆ ರಾಮು ಪಾಟೀಲ ಆಯ್ಕೆ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**

ಸ್ವಾತಂತ್ರ ಹೋರಾಟಗಾರ, ಶತಾಯುಷಿ, ಮಾಜಿ ಸಚಿವ ಮತ್ತು ಲೋಕನಾಯಕರಾದ ದಿ.ಭೀಮಣ್ಣ ಖಂಡ್ರೆ ಅವರ ಹೆಸರಿನಲ್ಲಿ ಅವರ ಸುಪುತ್ರರಾದ ಈಶ್ವರ ಬಿ ಖಂಡ್ರೆ ಅವರು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದಲ್ಲಿ 3 ಲಕ್ಷ ರೂ ದತ್ತಿ ನಿಧಿ ಸ್ಥಾಪನೆ ಮಾಡಿದ್ದು, ಮೊದಲ ಪ್ರಶಸ್ತಿಗೆ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸಹಾಯಕ ಸ್ಥಾನಿಕ ಸಂಪಾದಕರಾದ ರಾಮು ಪಾಟೀಲ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಕಲಬುರ್ಗಿ ಜಿಲ್ಲೆ ಸೇಡಂನವರಾದ ರಾಮು ಪಾಟೀಲ್ ಅವರು 1997ರಲ್ಲಿ ಪತ್ರಿಕೋದ್ಯಮ ಪ್ರವೇಶ ಮಾಡಿದರು. ವೀಕ್ ಪತ್ರಿಕೆ, ಮಸ್ಕತ್ ಡೈಲಿಯಲ್ಲಿ ಸೇವೆ ಸಲ್ಲಿಸಿ ಬಳಿಕ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗೆ ಮುಖ್ಯ ವರದಿಗಾರರಾಗಿ ಸೇರ್ಪಡೆಗೊಂಡರು. ಸತತ 25 ವರ್ಷಗಳ ವೃತ್ತಿ ಸೇವೆ ಮಾಡಿರುವ ಅವರು ಈಗಲೂ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಸಹಾಯಕ ಸ್ಥಾನಿಕ ಸಂಪಾದಕರಾಗಿ ಕಾರ್ಯ ನಿರ್ವಹಣೆ ಮಾಡುತ್ತಿದ್ದಾರೆ. ಬೀದರ್‌ನಲ್ಲಿ



ಏ.11 ಮತ್ತು 12 ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು.

**ಲಿಂಗಸುಗೂರು ಸಿದ್ರಾಮಪ್ಪ ಪ್ರಶಸ್ತಿ:**


ಲಿಂಗಸುಗೂರು ಸಿದ್ರಾಮಪ್ಪ ಹೆಸರಿನಲ್ಲಿ ಹೊಸದಾಗಿ ಅವರು ಪುತ್ರ ಶಿವರಾಜ ಕೆಂಭಾವಿ ಅವರು ಸ್ಥಾಪನೆ ಮಾಡಿರುವ ಪ್ರಶಸ್ತಿಗೆ ಹಾಸನ ಜಿಲ್ಲೆ ಹಾಸನವಾಣಿ ಪತ್ರಿಕೆ ಬೇಲೂರು ತಾಲೂಕು ವರದಿಗಾರರಾದ ಭಾರತಿಗೌಡ ಮತ್ತು ವಿಜಯಪುರ ಜಿಲ್ಲೆ ಸುವರ್ಣ ನ್ಯೂಸ್ ಟಿವಿ ಜಿಲ್ಲಾ ವರದಿಗಾರರಾದ ಷಡಾಕ್ಷರಿ ಬಸವರಾಜು ಕಂಪೂನವರ (ಷಡಾಕ್ಷರಿ ಬಿ ಕಂಪೂನವರ) ಅವರು ಆಯ್ಕೆಯಾಗಿದ್ದಾರೆ.

# ಸರ್ವಧರ್ಮ ಸುಖಿನೂಭವವೆ ಇಲ್ಲಿನ ಜನರ ಮಂತ್ರ: ಮುಜಾಹಿದ್ ಮರ್ಚೆಡ್

**ರಾಯಚೂರು:** ರಾಯಚೂರು ತಾಲೂಕಿನ ಮರ್ಚೆಡ್ ಗ್ರಾಮದಲ್ಲಿಯ ಶ್ರೀರಾಮಲಿಂಗೇಶ್ವರ ಜಾತ್ರೆಯನ್ನು ಭಕ್ತಿ ಭಾವದಿಂದ ಹಾಗೂ ಅದ್ದೂರಿಯಾಗಿ ಆಚರಿಸಲಾಯಿತು ತಾಲೂಕಿನಾದ್ಯಂತ ಬಂದ ಭಕ್ತರ ಸಹಕಾರದಿಂದ ಯಶಸ್ವಿಯಾಗಿ ಜರುಗಿತು. ಜಾತ್ರೆ ಸಂದರ್ಭದಲ್ಲಿ ಶರಣು ಸ್ವಾಮಿ, ಸಿದ್ರಾಮಯ್ಯ ಸ್ವಾಮಿ, ಶಿವು ಸ್ವಾಮಿ ಪೂಜೆ ನೆರವರಿಸಿ ತೇರು ಎಳೆಯುವುದು, ವಿಶೇಷ ಪೂಜೆ, ಧಾರ್ಮಿಕ ಕಾರ್ಯಕ್ರಮಗಳು ಹಾಗೂ ಅನ್ನಸಂತರ್ಪಣೆ ನಡೆಸಲಾಗಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾದರು.

ಈ ಜಾತ್ರೆ ಗ್ರಾಮ ಎಲ್ಲಾ ಧರ್ಮಗಳ ಜನರ ನಡುವೆ ಸೌಹಾರ್ದತೆ ಮತ್ತು ಐಕ್ಯತೆಯನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಜಾತ್ರೆಯ ಯಶಸ್ವಿ ಆಯೋಜನೆಗೆ ಸಹಕರಿಸಿದ ಎಲ್ಲಾ ಭಕ್ತರು, ಸಾರ್ವಜನಿಕರು ಹಾಗೂ ಸಂಘಟನೆಗಳ ಪದಾಧಿಕಾರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಲಾಗುತ್ತದೆ.

ಈ ಸಂದರ್ಭದಲ್ಲಿ ದೇವರ ಆಶೀರ್ವಾದದಿಂದ ಎಲ್ಲರ ಜೀವನದಲ್ಲಿ ಸುಖ, ಶಾಂತಿ ಮತ್ತು ಸಮೃದ್ಧಿ ನೆಲೆಸಲಿ ಎಂದು ಪ್ರಾರ್ಥಿಸಲಾಗಿಯಿತು, ಸದರಿ ಜಾತ್ರೆಯ ಕುರಿತು ಮುಜಾಹಿದ್ ಮರ್ಚೆಡ್



ಮಾತನಾಡಿ ಭಾರತದಲ್ಲಿ ವೈವಿಧ್ಯತೆಯಲ್ಲಿ ಏಕತೆಯನ್ನುಬಕಾಣುವ ದೇಶ ಇಲ್ಲಿ ಎಲ್ಲರೂ ಒಂದಾಗಿ ಪ್ರತಿ ಸಂತೋಷ ಸಮಯದಲ್ಲಿ ಭಕ್ತಿಭಾವದಿಂದ ಪಾಲ್ಗೊಂಡು ಒಂದಾಗಿರುತ್ತಾರೆ ಅದೇ ರೀತಿ ಶಾಂತಿಯುತ ವಾಗಿ ಸರ್ವಧರ್ಮ ಸುಖಿಭವೋ ಜೀವನವೇ ಇಲ್ಲಿಯ ಜನರ ಮಂತ್ರ ಎಂದರು, ಈ ಸಂಧರ್ಭದಲ್ಲಿ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಮಲ್ಲನಗೌಡ ಪಾಟಿಲ್ ಮಾತನಾಡಿ ಐತಿಹಾಸಿಕ ಶಿಲಾ ಶಾಸನ ಹೊಂದಿದ ಆಂದರೆ ಸುಮಾರು ಆಶೋಕನ ಕಾಲದ ಗುಡಿಯಾಗಿದ್ದು ಇಲ್ಲಿ ಇತಿಹಾಸ ಇದನ್ನು ನಾಗರಾಜನ ಕೋಟೆ ಎಂದು ಕರೆಯುತ್ತಾರೆ ಎಂದು ಈ ಕೊಟೆಗೆ ರಾಮಲಿಂಗೇಶ್ವರ ದೇವರೆ ಸರ್ವಸ್ವ ಎಂದರು.

## ಎಂ ಬಿ ಪಾಟೀಲರಿಗೆ ಸ್ವಾಭಿಮಾನ ಇದ್ದರೆ ಅವರು ಸಹಿತ ಬಾಗೇವಾಡಿಯಲ್ಲಿ ಪ್ರಚಾರಕ್ಕೆ ಹೋಗಬಾರದು

**ವಿಜಯಪುರ:** ಚರಂತಿಮಠ ಪರ ಯತ್ನಾಳ ಪ್ರಚಾರ ವಿಚಾರದಲ್ಲಿ



ಯತ್ನಾಳ ವಾಪಸ್ ಬಿಜೆಪಿಗೆ ಸೇರಬೇಕಿದೆ ಅದಕ್ಕೆ ಇದೆಲ್ಲ ಮಾಡುತ್ತಿದ್ದಾರೆ ಎಂದ ಸಚಿವ ಎಂ ಬಿ ಪಾಟೀಲ ಹೇಳಿಕೆಗೆ ಪ್ರತಿಕ್ರಿಯಿಸಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನನಗೆ ಉಚ್ಚಾಟನೆ ಮಾಡಿಸಿದ್ದು ಯಾರು, ಇದು ಅವರ ಚುನಾವಣೆ ಅಲ್ಲ ಎಂದು ಟಾಂಗ್ ನೀಡಿದರು.

ಭಾರತೀಯ ಜನತಾ ಪಕ್ಷದ ಚುನಾವಣೆ ಇದುವೀರಣ್ಣ ಚರಂತಿಮಠ ಅವರು ನನಗೆ ಅತ್ಯಂತ ಆತ್ಮೀಯರು, ನಮ್ಮ ಕಷ್ಟ ಸುಖದಲ್ಲಿ ಜೊತೆಗಿದ್ದಾರೆ ರಾಜಕಾರಣದಲ್ಲಿ ಎಲ್ಲವೂ ಕೃತಜ್ಞತೆ ಇರ್ಬೇಕು ರಾಜಕಾರಣದಲ್ಲಿಯಾವ ಪಕ್ಷ ನಮ್ಮನ್ನ ಬೆಳೆಸಿದೆ ಅದಕ್ಕೆ ಕೃತಜ್ಞರಾಗಿರಬೇಕು ಎಂದರು, ಯಾವುದೋ ಒಂದು ಕುಟುಂಬದ ಸಲುವಾಗಿ ಪಕ್ಷಕ್ಕೆ ದ್ರೋಹ ಮಾಡುವದು , ನಮಗೆ ಉಪಕಾರ ಮಾಡಿದವರಿಗೆ ದ್ರೋಹ ಮಾಡಿ ರಾಜಕಾರಣ ಮಾಡುವದು ಅರ್ಥವಿಲ್ಲ ಸಿದ್ದರಾಮಯ್ಯ ಹಾಗೂ ಎಂ ಬಿ ಪಾಟೀಲ್ ಹೇಳ್ತಾರ ಸ್ವಾಭಿಮಾನ ಇದ್ದರೆ ಯತ್ನಾಳ್ ಪ್ರಚಾರಕ್ಕೆ ಹೋಗಬಾರದು ಎಂದು ಎಂ ಬಿ ಪಾಟೀಲರಿಗೆ ಸ್ವಾಭಿಮಾನ ಇದ್ದರೆ ಅವರು ಸಹಿತ ಬಾಗೇವಾಡಿಯಲ್ಲಿ ಪ್ರಚಾರಕ್ಕೆ ಹೋಗಬಾರದು ಎಂದು ಟಾಂಗ್ ನೀಡಿ ಬಬಲೇಶ್ವರದಲ್ಲಿ ಬಿಜೆಪಿ ಅಭ್ಯರ್ಥಿ ಪರವಾಗಿ ಅವರ ಅಣ್ಣ ಮುಸುಕುಧಾರಿಯಾಗಿ ಹೋಗಿ ಪ್ರಚಾರ ಮಾಡಿದ್ದಾರೆ.

ನಿಮಗೆ ಸ್ವಾಭಿಮಾನ ಇದ್ದರೆ ನೀವು ಕೂಡಾ ಬಸವನ ಬಾಗೇವಾಡಿಯಲ್ಲಿ ಹೋಗಿ ಎಂ ಬಿ ಪಾಟೀಲ ಪ್ರಚಾರ ಮಾಡಬೇಡಿ ಎಂದು ಟಾಂಗ್ ನೀಡಿದರು. ನಾನು ಬಿಜೆಪಿಗೆ ಬರುತ್ತೇನೆ ಎಂದು ಹೇಳಿ ಯಾರ ಕೈಕಾಲು ಹಿಡಿದಿಲ್ಲ, ನಾನು ಪ್ರಚಾರಕ್ಕೆ ಬರುವಂತೆ ಹಿಂದು ಕಾರ್ಯಕರ್ತರ ಒತ್ತಾಯವಾಗಿದೆ ಹಾಗಾಗಿ ಪ್ರಚಾರಕ್ಕೆ ಹೋಗುತ್ತೇನೆ ಎಂದು ತಿಳಿಸಿದರು. ವಿಜಯೇಂದ್ರ ನಾಮಿನೇಷನ್ ಮಾಡಲು ಬಂದ ಸಂದರ್ಭದಲ್ಲಿ 2028 ರ ಸಿಎಂ ಯತ್ನಾಳ ಎಂದು ಹಿಂದು ಕಾರ್ಯಕರ್ತರು ಕೂಗಿದ್ದಾರೆ, ನನಗೆ ಬಿಜೆಪಿ ಪಕ್ಷದ ಋಣ ಇದೆ, ಜೊತೆಗೆ ಹಿಂದೂ ಕಾರ್ಯಕರ್ತರು ಕರೆಯುತ್ತಿದ್ದಾರೆ ಹೀಗಾಗಿ ಹೋಗುತ್ತಿರುವೆ, ಆದರೆ ನನಗೆ ದಾವಣಗೇರೆಯಲ್ಲಿ ಆಹ್ವಾನ ನೀಡಿಲ್ಲ, ಹೀಗಾಗಿ ಹೋಗಲ್ಲ ಎಂದರು.

# ಡಾ. ಶಿವುಕುಮಾರ ಮಹಾಸ್ವಾಮಿ ಜಯಂತ್ಯುತ್ಸವ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ / ಕಂಪ್ಲಿ:**

ಪಟ್ಟಣದ ಪೇಟೆ ಬಸವೇಶ್ವರ ದೇವಸ್ಥಾನ ಮುಂಭಾಗದಲ್ಲಿ ಶ್ರೀ ಪೇಟೆ ಬಸವೇಶ್ವರ ದೇವಸ್ಥಾನ ಸಮಿತಿ ಹಾಗೂ ದಿವಂಗತ ಸಜ್ಜನ್ ವೀರಭದ್ರಪ್ಪ ಕುಟುಂಬವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪರಮಪೂಜ್ಯ ತ್ರಿವಿಧ ದಾಸೋಹಿ, ಕರ್ನಾಟಕ ರತ್ನ, ಪದ್ಮಭೂಷಣ ಸಿದ್ದಗಂಗಾಮಠದ ಡಾ. ಶಿವುಕುಮಾರ ಮಹಾಸ್ವಾಮಿ ಅವರ 119ನೇ ಜಯಂತ್ಯೋತ್ಸವ ಸಂಭ್ರಮದಿಂದ ದ ಬುಧವಾರ ಆಚರಿಸಿದರು. ವೀರಶೈವ ಸಮಾಜದ ತಾಲೂಕು ಅಧ್ಯಕ್ಷ ಎಸ್.ಎಂ.ನಾಗರಾಜ ಮಾತನಾಡಿ, ಶ್ರೀಗಳು ವೈಯಕ್ತಿವಾಗಿ ಏನನ್ನೂ ಬಯಸದೆ ಸಮಾಜಕ್ಕಾಗಿ ದುಡಿದರು. ಸಮಾಜಕ್ಕೆ ಬದುಕನ್ನು ಮುಡುಪಾಗಿಟ್ಟರು. ಶೈಕ್ಷಣಿಕವಾಗಿ ಕ್ರಾಂತಿ ಮಾಡಿದ ಸ್ವಾಮೀಜಿ, ಲಕ್ಷಾಂತರ ಮಕ್ಕಳ ಬದುಕು ಹಸನು ಮಾಡಿದ್ದಾರೆ. ಶಿವಕುಮಾರ ಸ್ವಾಮೀಜಿಯವರ ಕಾಯಕ ಶ್ರದ್ಧೆ ನಮ್ಮ ಬದುಕಿನ ದಾರಿಯಾದಾಗ ಮಾತ್ರ ಅವರ ತತ್ವಗಳ ಆಚರಣೆಗೆ



ನಿಜವಾದ ಅರ್ಥ ಸಿಗುತ್ತದೆ. ಪೂಜ್ಯರ ಕಾಲಘಟ್ಟದಲ್ಲಿ ಇದ್ದು, ಅವರ ಸೇವೆ ಮಾಡಿದ ನಾವೆಲ್ಲರೂ ಅವರ ಜೀವನ ಸಂದೇಶಗಳನ್ನು ಜಗತ್ತಿಗೆ ಸಾರುವ ಜವಾಬ್ದಾರಿಯನ್ನೂ ಹೊತ್ತು, ನಿಷ್ಠೆಯಿಂದ ಪೂರೈಸಬೇಕು ಎಂದರು. ಮೊದಲಿಗೆ ಶಿವುಕುಮಾರ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆ, ಮಹಾಮಂಗಳಾರತಿ ಸಲ್ಲಿಸಿದ ನಂತರ ಜಯಂತಿ ಆಚರಿಸಿದರು. ತದನಂತರ ಸಿಹಿ ಮತ್ತು ಮಜ್ಜಿಗೆ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ಡಿ.ವೀರಪ್ಪ, ಕಂಪ್ಲಿ ಜೆಸಿಐ ಅಧ್ಯಕ್ಷ ಡಾ.ಭರತ್ ಪದ್ಮಸಾಲಿ, ಮುಖಂಡರಾದ ಸಜ್ಜನ್ ಶರಣಪ್ಪ, ಸಜ್ಜನ್ ವಿಶ್ವನಾಥ,ಎಸ್.ಎಸ್.ಎಂ.ಚನ್ನಯ್ಯಸ್ವಾಮಿ,ವಾಲಿಕೊಟ್ರಪ್ಪ, ರಾಕೇಶ ಬಾಗ್ರಾಚಾ ಸೇರಿದಂತೆ ಇತರರು ಇದ್ದರು.

# ಸಾಮರಸ್ಯ ಬೆಸೆಯುವಲ್ಲಿ ಕ್ರೀಡೆಗಳ ಪಾತ್ರ ಅಮೋಘ

• **ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ**

"ಕ್ರೀಡೆಯಿಂದ ಆರೋಗ್ಯ ವರ್ಧನೆ ಜತೆಗೆ ಪರಸ್ಪರ ಮನಸ್ಸುಗಳನ್ನು ಒಂದುಗೂಡಿಸಲು ಸಾಧ್ಯ," ಎಂದು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ್ ನಾಯ್ಕ ಅಭಿಪ್ರಾಯಪಟ್ಟರು,

ತಾಲೂಕಿ ಚಿಲಗೋಡು ಗ್ರಾಮದಲ್ಲಿ ಇಂದು ನಡೆದ ಸಿಪಿಎಲ್ ಕ್ರಿಕೆಟ್ ಟೂರ್ನಿಗೆ ಚಾಲನೆ ನೀಡಿ ಮಾತನಾಡಿದರು. "ಯುವಕರು ಬದುಕು ಮತ್ತು ಕ್ರೀಡೆಯಲ್ಲಿ ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವಂತಾಗಬೇಕು, ಪಠ್ಯದ ಜತೆಗೆ ಪಠೇತರ ಚಟುವಟಿಕೆಗಳಲ್ಲೂ ಉತ್ತಮ ಸಾಧನೆ ಮಾಡಬೇಕು. ಪ್ರತಿ ನಿತ್ಯವೂ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸಿದರೆ ಮಾನಸಿಕ, ದೈಹಿಕ ಆರೋಗ್ಯ ವೃದ್ಧಿಯಾಗಲಿದೆ.ಸದಾ ಕ್ರಿಯಾಶೀಲವಾಗಿ ಬದುಕಬಹುದು. ಸಾಮಾಜಿಕ ವ್ಯವಸ್ಥೆಯಲ್ಲಿ ಆರೋಗ್ಯ ಬಹಳ ಮುಖ್ಯ," ಎಂದು ಹೇಳಿದರು.



ಪುರಸಭೆ ಅಧ್ಯಕ್ಷ ಎಂ.ಮರಿ ರಾಮಪ್ಪ ಮಾತನಾಡಿ, "ಈ ಹಿಂದಿನ ಅವಧಿಯಲ್ಲಿದ್ದ ಶಾಸಕ ಎಸ್.ಭೀಮನಾಯ್ಕ ಅವರು ತಾಲೂಕಿನಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸಿರುವುದು ಕ್ರೀಡಾ ಚಟುವಟಿಕೆಗಳಿಗೆ ಸಹಕಾರಿಯಾಗಿದೆ ಎಂದರು.

ಕಾಂಗ್ರೆಸ್ ಬ್ಲಾಕ್ ಅಧ್ಯಕ್ಷ ಗೋಣಿಬಸಪ್ಪ ಮಾತನಾಡಿದರು. ಪುರಸಭೆ ಸದಸ್ಯ ಉಪ್ಪಾರ ಬಾಳಪ್ಪ, ಚಿಂತ್ರಪಳ್ಳಿ ಮಂಜುನಾಥ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಗುರುಬಸವರಾಜ ಸೊನ್ನದ್, ಎಪಿಎಂಸಿ ಮಾಜಿ ನಿರ್ದೇಶಕ ಬಾಲಕೃಷ್ಣಬಾಬು, ಚೌಟಿ ಬಸವರಾಜ, ಸಂಪತ್ ಇತರರು ಇದ್ದರು.

# ದಾಖಲಾತಿಗಳ ಪರಿಶೀಲನೆಯನ್ನು ವಾರದೊಳಗೆ ಪೂರ್ಣಗೊಳಿಸಿ ವರದಿ

• **ಮಲ್ಲಮ್ಮ ನುಡಿ ವಾರ್ತೆ ಹುಣಸೂರು**

ಆಶ್ರಯ ಯೋಜನೆಯಡಿ 22 ವರ್ಷಗಳ ಹಿಂದೆ ಹಕ್ಕುಪತ್ರ ಪಡೆದ 870 ಫಲಾನುಭವಿಗಳ ಪೈಕಿ ದಾಖಲೆಗಳನ್ನು ನೀಡಿರುವ 248 ಫಲಾನುಭವಿಗಳ ದಾಖಲಾತಿಗಳ ಪರಿಶೀಲನೆಯನ್ನು ವಾರದೊಳಗೆ ಪೂರ್ಣಗೊಳಿಸಿ ವರದಿ ನೀಡುವಂತೆ ಶಾಸಕ ಜಿ.ಡಿ.ಹರೀಶ್‌ಗೌಡ ನಗರಸಭೆ ಪೌರಾಯುಕ್ತರಿಗೆ ಸೂಚಿಸಿದರು.

ನಗರಸಭೆ ಮುಂಭಾಗ ಮಂಗಳವಾರ ತಾಲೂಕು ನಾಗರಿಕ ಹಿತರಕ್ಷಣಾ ಸಮಿತಿಯಿಂದ ಆಶ್ರಯ ಯೋಜನೆಯಡಿ ಹಕ್ಕುಪತ್ರ ಪಡೆದ ಫಲಾನುಭವಿಗಳಿಗೆ ನಿವೇಶನ ಗುರುತಿಸಿ ಹಸ್ತಾಂತರಿಸಬೇಕೆಂಬ



ಬೇಡಿಕೆಯನ್ನೊಳಗೊಂಡ ಮನವಿ ಪತ್ರವನ್ನು ಸ್ವೀಕರಿಸಿ ಮಾತನಾಡಿದರು.

22 ವರ್ಷಗಳ ಹಿಂದೆ ಅಂದಿನ ಶಾಸಕ ಕೋಡಿ ವಿ.ಪಾಪಣ್ಣ ನಗರದ ಬಾಚಳ್ಳಿ ರಸ್ತೆಯಲ್ಲಿ ನಿವೇಶನ ಗುರುತಿಸಿ 870 ಫಲಾನುಭವಿಗಳನ್ನು ಆಯ್ಕೆ ಮಾಡಿ ಹಕ್ಕುಪತ್ರ ನೀಡಿರುವುದು ಸರಿ. ಆದರೆ ಹಕ್ಕುಪತ್ರ ಪಡೆದವರಿಗೆ ನಿವೇಶನ ಗುರುತಿಸಿ ಹಸ್ತಾಂತರಿಸುವ ಕಾರ್ಯ ಈವರೆಗೆ ನಗರಸಭೆಯಿಂದ ಆಗಿಲ್ಲ. ತಾವು ಅಧಿಕಾರಕ್ಕೆ ಬಂದ ನಂತರ 2024ರಲ್ಲಿ ಹಕ್ಕುಪತ್ರ ಪಡೆದ ಫಲಾನುಭವಿಗಳು ತಮ್ಮಲ್ಲಿರುವ ದಾಖಲೆಗಳನ್ನು ತಂದು ನಗರಸಭೆಗೆ ನೀಡಲು ಕೋರಿ 2 ತಿಂಗಳ ಕಾಲಾವಕಾಶ ನೀಡಲಾಗಿತ್ತು ಎಂದರು.

ಮನೆಮನೆಗೆ ತೆರಳಿ ಪರಿಶೀಲಿಸಿ: ಆ ವೇಳೆ 248 ಫಲಾನುಭವಿಗಳು ದಾಖಲೆಗಳನ್ನು ಒದಗಿಸಿದ್ದಾರೆ. ಇದೀಗ ಮೊದಲ ಹಂತವಾಗಿ ಈ ಎಲ್ಲ 248 ಫಲಾನುಭವಿಗಳ ದಾಖಲೆಗಳ ಪರಿಶೀಲನೆ ಆಗಬೇಕು. ಮುಂಬರುವ ಶನಿವಾರ ಮತ್ತು ಭಾನುವಾರ ಅಧಿಕಾರಿಗಳ ತಂಡ ಪ್ರತಿ ಮನೆಮನೆಗೆ ಭೇಟಿ ನೀಡಿ ಫಲಾನುಭವಿಗಳ ಕುರಿತ ಮಾಹಿತಿ ಕಲೆಹಾಕಿ ವೀಡಿಯೋ ಮಾಡಬೇಕು. ಏ.6ರಂದು ಆಯೋಜನೆಗೊಂಡಿರುವ ಆಶ್ರಯ ಸಮಿತಿ ಸಭೆಯಲ್ಲಿ ಈ ಎಲ್ಲ ದಾಖಲೆಗಳನ್ನು ಮಂಡಿಸಬೇಕು. ಇನ್ನೂ ದಾಖಲೆ ಒದಗಿಸಿದ ಫಲಾನುಭವಿಗಳಿಗೆ ಮತ್ತೆ ಒಂದು ತಿಂಗಳ ಕಾಲಾವಕಾಶ ನೀಡಲು ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳೋಣ. ಫಲಾನುಭವಿಗಳ ಕೈಯಲ್ಲಿರುವ ದಾಖಲೆಗಳ ಫೋರ್ಜರಿಯಾಗಿರುವ, ತಿದ್ದಿರುವ ಪ್ರಕರಣಗಳು ಕಂಡುಬಂದಿವೆ ಎಂದು ಕೆಲ ಮಾಹಿತಿ ಹಕ್ಕು ಕಾರ್ಯಕರ್ತರು ತಮ್ಮ ಬಳಿ ದೂರು ನೀಡಿದ್ದು ಎಲ್ಲವನ್ನೂ ಅಧಿಕಾರಿಗಳು ಸಮಗ್ರವಾಗಿ ಪರಿಶೀಲಿಸಬೇಕು ಎಂದು ಸೂಚನೆ ನೀಡಿದರು. ಫಲಾನುಭವಿಗಳ ಪೈಕಿ ಹುಣಸೂರು ನಗರದಲ್ಲಿ ಪ್ರಸ್ತುತ ವಾಸವಿಲ್ಲದ, ಫೋರ್ಜರಿಯೆಂದು ಖಚಿತಗೊಂಡ ಮತ್ತು ಸರ್ಕಾರಿ ನೌಕರರಾಗಿದ್ದಲ್ಲಿ ಅಂತಹವರ ಮಂಜೂರಾತಿಯನ್ನು ರದ್ದುಪಡಿಸಬೇಕು ಎಂದರು.

## ಶಿಕ್ಷಣದ ಜೊತೆಗೆ ಕ್ರೀಡೆಯಲ್ಲೂ ಹೆಸರು



**ಗಂಗಾವತಿ:** ಫ್ಲೈಯಿಂಗ್ ಫೆದರ್ಸ್ ಬ್ಯಾಡ್ಮಿಂಟನ್ ಅಕಾಡೆಮಿಯ 3ನೇ ವರ್ಷದ ಬೇಸಿಗೆ ಶಿಬಿರಕ್ಕೆ ತಾಲೂಕ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಶ್ರೀಮತಿ ಸರಸ್ವತಿ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಗಂಗಾವತಿಯು ಶಿಕ್ಷಣದಲ್ಲಿ ಬಹಳಷ್ಟು ಹೆಸರು ಮಾಡುತ್ತಿದೆ. ಅದರ ಜೊತೆಗೆ ಹಲವಾರು ಕ್ರೀಡೆಗಳಲ್ಲೂ ರಾಜ್ಯ/ರಾಷ್ಟ್ರ ಮಟ್ಟದಲ್ಲಿ ನಮ್ಮ ತಾಲೂಕಿನ ಮಕ್ಕಳು ಆಯ್ಕೆಯಾಗಿ ಪ್ರಶಸ್ತಿ ಪಡೆಯುತ್ತಿದ್ದಾರೆ. ಇಂತಹ ಕಾಲಘಟ್ಟದಲ್ಲಿ ಫ್ಲೈಯಿಂಗ್ ಫೆದರ್ಸ್ ಬ್ಯಾಡ್ಮಿಂಟನ್ ಅಕಾಡೆಮಿ ಗಂಗಾವತಿಯಲ್ಲಿ ಸುಸಜ್ಜಿತ ಅಂತರಾಷ್ಟ್ರೀಯ ಮಟ್ಟದ ಸಿಂಥೇಟಿಕ್ ಒಳಾಂಗಣ ಕ್ರೀಡಾಂಗಣ ನಿರ್ಮಿಸುವುದರ ಜೊತೆಗೆ ಮಕ್ಕಳಿಗೆ ಅತ್ಯುತ್ತಮ ತರಬೇತಿ ನೀಡುತ್ತಿರುವುದು ಶ್ಲಾಘನೀಯವಾಗಿದೆ ಎಂದರು.

ಈ ಸಂದರ್ಭದಲ್ಲಿ ಬ್ಯಾಡ್ಮಿಂಟನ್ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷರಾದ ಡಾ॥ ಸತೀಶ್ ರಾಯಕರ್, ಅಧ್ಯಕ್ಷರಾದ ಡಾ॥ ಪ್ರಶಾಂತ್ ದೇಸಾಯಿ, ಕಾರ್ಯದರ್ಶಿ ಆಜಾದ್ ಗನ್ನಮನಿ, ಖಜಾಂಚಿ ನಾಗೇಶ ಗುನ್ನಾಳ, ನಿರ್ದೇಶಕರಾದ ಡಾ॥ ಶಿವಕುಮಾರ ಮಾಲಿಪಾಟೀಲ್, ರಮೇಶ ವಲ್ಕಂದಿನ್ನಿ, ಅಶೋಕ ಗನ್ನಮನಿ, ತರಬೇತಿದಾರರಾದ ಪೀರಾವಲಿ, ವ್ಯವಸ್ಥಾಪಕರಾದ ಹೇಮಂತ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಎರಡು ತಿಂಗಳು ನಡೆಯುವ ಈ ಬೇಸಿಗೆ ಶಿಬಿರದಲ್ಲಿ 50 ಕ್ಕಿಂತಲೂ ಹೆಚ್ಚಿನ ಮಕ್ಕಳು ಪಾಲ್ಗೊಳ್ಳಲಿದ್ದಾರೆ.

# ಹಿಂದಿ ಗ್ರೇಡ್ ಅಸ್ಪಷ್ಟ ನೀತಿ, ಸರ್ಕಾರಿ ಶಾಲೆಗಳ ಐಸಿಯು ಸ್ಥಿತಿ.!



ಭೋಗ-ಐಭೋಗ

• ವೀರಣ್ಣ ಕಲಕೇರಿ

ಕೆಂಭಾವಿ

ಭಾರತದ ಸಂವಿಧಾನವು 6 ರಿಂದ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕಾಗಿಸಿದೆ. ಆದರೆ, ಇಂದು ಪ್ರಾಯೋಗಿಕವಾಗಿ ನೋಡಿದರೆ ಗುಣಮಟ್ಟದ ಶಿಕ್ಷಣವು ಕೇವಲ 'ಹಣವಿದ್ದವರಿಗೆ ಮಾತ್ರ' ಎನ್ನುವ ಅಲಿಖಿತ ನಿಯಮ ಜಾರಿಗೆ ಬಂದಂತಿದೆ. ಸರ್ಕಾರಿ ಶಾಲೆಗಳ ವ್ಯವಸ್ಥಿತ ನಿರ್ಲಕ್ಷ್ಯ, ಖಾಸಗಿ ಸಂಸ್ಥೆಗಳ ಅತಿರೇಕದ ಲಾಭಕೋರತನ ಮತ್ತು ಪರೀಕ್ಷಾ ಪದ್ಧತಿಯಲ್ಲಿನ ಸಡಿಲಿಕೆ ಇಂದಿನ ಶೈಕ್ಷಣಿಕ ವ್ಯವಸ್ಥೆಯನ್ನು ಅಧೋಗತಿಗೆ ತಳ್ಳುತ್ತಿವೆ ಎಂಬುವುದು ಸಾರ್ವಜನಿಕ ವಲಯದ ಕಟು ಸತ್ಯವಾಗಿದೆ.

**ಸರ್ಕಾರಿ ಶಾಲೆಗಳ 'ಐಸಿಯು' ಸ್ಥಿತಿ ಮತ್ತು ತೋರಿಕೆಯ ಸೌಲಭ್ಯ:** ಇಂದು ಹಲವೆಡೆ ಸರ್ಕಾರಿ ಶಾಲೆಗಳು ಮಕ್ಕಳ ಸಂಖ್ಯೆಯಿಲ್ಲದೆ, ಕೇವಲ ದಾಖಲಾತಿಗೆ ಸೀಮಿತವಾಗಿವೆ. ಶಿಕ್ಷಣ ಇಲಾಖೆಯ ಸೌಲಭ್ಯಗಳು ಕೇವಲ 'ಮೂಗಿಗೆ ಬೆಣ್ಣೆ ಸವರುವ' ತಂತ್ರಗಳಾಗಿ ಮಾರ್ಪಟ್ಟಂತೆ ಕಾಣುತ್ತಿದೆ, ಶಾಲೆಗಳು 'ಐಸಿಯು' ಸ್ಥಿತಿಯಲ್ಲಿ ಗೋಚರಿಸುತ್ತಿವೆ. ಸರಿಯಾದ ವಿಷಯ ಬೋಧಕರಿಲ್ಲದೆ ಶಾಲೆಗಳು ಬಣಗುಡುತ್ತಿವೆ. 'ಅತಿಥಿ ಶಿಕ್ಷಕ'ರ ನೇಮಕಾತಿಯ ಸಬೂಬು ನೀಡಿ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಇದರಿಂದ ಬೋಧನೆಯ ನಿರಂತರತೆ ತಪ್ಪಿ ಬಡ ಮಕ್ಕಳ ಶಿಕ್ಷಣ ಕುಂಠಿತವಾಗುತ್ತಿದೆ. ಯಾವ ಸರ್ಕಾರ ಬಂದರೂ ಗುಣಮಟ್ಟದ ಶಿಕ್ಷಣ ನೀಡುವುದು ಗಗನಕುಸುಮವಾಗಿದೆ. ಇದನ್ನರಿತೆ ಸ್ವತಃ ಶಿಕ್ಷರು ಸೇರಿದಂತೆ ಸರಕಾರಿ ನೌಕರರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಯ ಬಾಗಿಲು ತಟ್ಟಿದ್ದಾರೆ.

**80ಕ್ಕೆ 13 ಅಂಕ: ಇದು ಉತ್ತೀರ್ಣವೇ ಅಥವಾ ಜ್ಞಾನದ ಕೊಲೆಯೇ?:** ಇತ್ತೀಚಿನ ಪರೀಕ್ಷಾ ಸುಧಾರಣೆಗಳು ಗುಣಮಟ್ಟವನ್ನು ಅಕ್ಷರಶಃ ಪಾತಾಳಕ್ಕೆ ತಳ್ಳಿವೆ. ಎಸ್.ಎಸ್.ಎಲ್.ಸಿ ಲಿಖಿತ ಪರೀಕ್ಷೆಯಲ್ಲಿ 80 ಅಂಕಗಳಿಗೆ ಕೇವಲ 13 ಅಂಕ ಪಡೆದರೂ ಆ ಮಗುವನ್ನು ಪಾಸ್ ಮಾಡಲಾಗುತ್ತಿದೆ. ಶಾಲೆಯ ಆಂತರಿಕ 20 ಅಂಕಗಳನ್ನು ಸೇರಿಸಿ 33ರ ಗಡಿ ದಾಟಿಸುವ ಈ ತಂತ್ರದಿಂದ ವಿದ್ಯಾರ್ಥಿಗಳಲ್ಲಿ ಓದಿನ ಬಗ್ಗೆ ಇರುವ ಭಯ ಮತ್ತು ಶ್ರದ್ಧೆ ಮಾಯವಾಗುತ್ತಿದೆ. ಇದು ಕೇವಲ 100% ಫಲಿತಾಂಶಕ್ಕಾಗಿ ಮಾಡುತ್ತಿರುವ ಜ್ಞಾನದ ಕೊಲೆಯಲ್ಲವೇ? ಎಂಬ ಪ್ರಶ್ನೆ ಹಲವರದ್ದು.

**ಶಿಕ್ಷಣದ ವ್ಯಾಪಾರೀಕರಣ ಮತ್ತು ಕೂಲಿ ಕಾರ್ಮಿಕರ ಸಂಕಷ್ಟ:** ರಾಜಕಾರಣಿಗಳು ಸೇರಿದಂತೆ ಸ್ಥಿತಿವಂತರು ಹಳ್ಳಿಗೊಂದು, ಪಟ್ಟಣಕ್ಕೆ ಎರಡರಂತೆ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವ ಮೂಲಕ ಶಿಕ್ಷಣವನ್ನು ವ್ಯಾಪಾರೀ ಕೇಂದ್ರಗಳನ್ನಾಗಿ ಪರಿವರ್ತಿಸಿದ್ದಾರೆ. ಗ್ರಾಮೀಣ ಭಾಗದ ಖಾಸಗಿ ಶಾಲೆಗಳಲ್ಲೂ ಮಗುವಿನ ದಾಖಲಾತಿಗೆ ಕನಿಷ್ಠ 50 ಸಾವಿರ ನೀಡಬೇಕು. ಪ್ರೌಢಶಾಲೆಯ ನಂತರ ವರ್ಷಕ್ಕೆ 2.5 ಲಕ್ಷದ ಜೊತೆಗೆ ಹಾಸ್ಟೆಲ್ ವೆಚ್ಚ ಭರಿಸುವುದು, ಈ ಪರಿಸ್ಥಿತಿಯಲ್ಲಿ ದಿನಕ್ಕೆ 500–700 ರೂ. ದುಡಿಯುವ ಕೃಷಿ ಕಾರ್ಮಿಕನಿಗೆ ತಮ್ಮ ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ಕೊಡಿಸುವುದು ಅಸಾಧ್ಯದ ಮಾತು. ಈ ವ್ಯವಸ್ಥೆಯಿಂದಾಗಿ ಗುಣಮಟ್ಟದ ಶಿಕ್ಷಣ ಎಂಬುದು ಬಡವರ ಕೈಗೆ ಎಟುಕದ ಮರೀಚಿಕೆಯಾಗುತ್ತಿದೆ.

**ವ್ಯವಸ್ಥೆಯ ವಿರುದ್ಧ ಶಿಕ್ಷಕರ ಒಕ್ಕೊರಲ ಆಕ್ರೋಶ:** ಸರಕಾರಿ ಶಿಕ್ಷಣ ವ್ಯವಸ್ಥೆ ಹೀಗಿದ್ದರೆ ಶಿಕ್ಷಕರ ಗೋಳು ಬೇರೆನೆ ಇದೆ ?ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಿಕ್ಷಕರಾದ ನಾವುಗಳು ಕೇವಲ ಬೋಧನಾ ಯಂತ್ರಗಳಾಗಿ ಬದಲಾಗುತ್ತಿರುವುದು ದುರಂತ. ಶಿಕ್ಷಕ ವಲಯದಿಂದ ಕೇಳಿಬರುತ್ತಿರುವ ಆಕ್ರೋಶದ ನುಡಿಗಳು ಇವು. "ನಮಗೂ ವೈಯಕ್ತಿಕ ಬದುಕು ಮತ್ತು ವಿಶ್ರಾಂತಿಯ ಹಕ್ಕಿದೆ ಎಂಬುದನ್ನು ಶಿಕ್ಷಣ ಇಲಾಖೆ ಮರೆತಂತಿದೆ. ರಜೆಗಳಿಲ್ಲದ ದುಡಿಮೆ, ಹಗಲಿರುಳಿನ ಕೆಲಸದ ಒತ್ತಡ ಹಾಗೂ ಹೆಚ್ಚುವರಿ ವೇತನವಿಲ್ಲದ ಓಟಿ ದುಡಿಮೆಯಿಂದಾಗಿ ನಾವು ದೈಹಿಕವಾಗಿ ಮತ್ತು ಮಾನಸಿಕವಾಗಿ ಜರ್ಜರಿತರಾಗುತ್ತಿದ್ದೇವೆ. ಒಂದೇ ಸಮಯದಲ್ಲಿ ಪರೀಕ್ಷೆಗಳು, ಮೌಲ್ಯಮಾಪನ ಮತ್ತು ಜನಗಣತಿ ತರಬೇತಿಯಂತಹ ಕೆಲಸಗಳ ಹೊರೆಯನ್ನು ಹೊರುವುದು ನಮ್ಮ ಕಥೆ ವ್ಯಥೆಯಾಗಿದೆ. ಇದು ಸಂಪೂರ್ಣವಾಗಿ ಅವೈಜ್ಞಾನಿಕ. ಅಧಿಕಾರಿಗಳು ಕೇವಲ ಫಲಿತಾಂಶಕ್ಕಾಗಿ ಹಪಹಪಿಸದೆ, ಶಿಕ್ಷಕರನ್ನು ಮನುಷ್ಯರೆಂದು ಪರಿಗಣಿಸಿ ಮಾನವೀಯತೆಯಿಂದ ನಡೆಸಿಕೊಳ್ಳಲಿ." ?ಹೀಗೆ ಬೋಧನೆಯ ಜೊತೆಗೆ ಶಿಕ್ಷಣೇತರ ಕೆಲಸಗಳ ಸುಳಿಯಲ್ಲಿ ಸಿಲುಕಿರುವ ಶಿಕ್ಷಕರು, ಗುಣಮಟ್ಟದ ಶಿಕ್ಷಣ ನೀಡಲು ಹೇಗೆ ತಾನೇ ಸಾಧ್ಯ? ಎಂಬುವುದು ಶಿಕ್ಷಕ ವಲಯದ ಮಾತುಗಳು ಒಂದೆಡೆ.

**ಹಿಂದಿ 'ಗ್ರೇಡ್' ವ್ಯವಸ್ಥೆ ಮತ್ತು ಅಸ್ಪಷ್ಟ ನೀತಿಗಳು:** ಪ್ರಸಕ್ತ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಹಿಂದಿ ವಿಷಯಕ್ಕೆ ಅಂಕಗಳ ಬದಲಾಗಿ ಕೇವಲ 'ಗ್ರೇಡ್' ನೀಡುವ ಸರ್ಕಾರದ ದಿಢೀರ್ ನಿರ್ಧಾರವು ವಿದ್ಯಾರ್ಥಿಗಳ ಶ್ರಮಕ್ಕೆ ಬೆಲೆಯಿಲ್ಲದಂತೆ ಮಾಡಿದೆ. ಶೇಕಡಾವಾರು ಅಂಕಗಳನ್ನು ಹೆಚ್ಚಿಸಿಕೊಳ್ಳಲು ಆಸರೆಯಾಗುತ್ತಿದ್ದ ಭಾಷಾ ವಿಷಯವನ್ನು ಹೀಗೆ ಮೂಲೆಗುಂಪು ಮಾಡಿರುವುದು ಪ್ರತಿಭಾವಂತ ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನು ಕುಗ್ಗಿಸಿದೆ ಎಂದೆ ಹೇಳಬಹುದು. ಹಿಂದಿ ವಿಷಯದಲ್ಲಿ ನಾವು ಪಡೆಯುವ ಅಂಕಗಳು ನಮ್ಮ ಒಟ್ಟು ಫಲಿತಾಂಶವನ್ನು ಸುಧಾರಿಸಲು ಸಹಾಯ ಮಾಡುತ್ತಿದ್ದವು. ಈಗ ಕೇವಲ ಗ್ರೇಡ್ ನೀಡುವುದರಿಂದ ಆ ವಿಷಯಕ್ಕೆ ನಮ್ಮ ಇಡೀ ವರ್ಷದ ಶ್ರಮ ವ್ಯರ್ಥವಾದಂತಾಗಿದೆ.

ಗಣಿತ ಅಥವಾ ವಿಜ್ಞಾನದಂತಹ ಕಠಿಣ ವಿಷಯಗಳಲ್ಲಿ ಅಂಕಗಳು ಕಡಿಮೆಯಾದಾಗ, ಭಾಷಾ ವಿಷಯವಾದ ಹಿಂದಿ ಹೆಚ್ಚಿನ ಅಂಕ ತಂದುಕೊಟ್ಟು ಒಟ್ಟು ಶೇಕಡಾವಾರು ಹೆಚ್ಚಿಸಲು ಆಸರೆಯಾಗುತ್ತಿತ್ತು. ಪರೀಕ್ಷಾ ಸಮಯದಲ್ಲಿ ಇಂತಹ ಗೊಂದಲಕಾರಿ ನಿರ್ಧಾರಗಳು ಸರಿಯಲ್ಲ ಎಂದು ಪರೀಕ್ಷಾರ್ಥಿ ವಿದ್ಯಾರ್ಥಿಗಳಿಂದ ಕೇಳಿಬರುವು ಮಾತುಗಳಾದರೆ,

ಇದು ಕೇವಲ 'ಶೇ. 100 ರಷ್ಟು ಫಲಿತಾಂಶ' ದಾಖಲಿಸುವ ಸರ್ಕಾರದ ಶಾರ್ಟ್‌ಕಟ್ ಹಾದಿಯಾಗಿದೆಯೆ ಎಂಬುವುದು ಪ್ರಜ್ಞಾವಂತ ಶಿಕ್ಷಣ ಪ್ರೇಮಿಗಳ ಪ್ರಶ್ನೆ.

ಒಟ್ಟಾರೆಯಾಗಿ ಇಂದಿನ ರಾಜಕೀಯ ವ್ಯವಸ್ಥೆಯ ಸರಕಾರಿ ಶಾಲಾ ಸೌಲಭ್ಯಗಳನ್ನು ಹೇಳಿಕೆಯ ವಸ್ತುಗಳಾಗಿವೆ ಹೊರತು ವಾಸ್ತವದ ಕನ್ನಡಿಯೇ ವಿಭಿನ್ನವಾಗಿ ಬಡಮಕ್ಕಳು ಮೌಲ್ಯಯುತ ಶಿಕ್ಷಣದಿಂದ ವಂಚಿಸುತ್ತಿದೆ. ಶಿಕ್ಷಣವು ಸರಕಾರಿ ಅಧಿಕಾರಿಗಳು ಶ್ರೀಮಂತರ ಮತ್ತು ರಾಜಕಾರಣಿಗಳ ಸ್ವತ್ತಾಗುತ್ತಿರುವುದು ದೇಶದ ಭವಿಷ್ಯಕ್ಕೆ ದೊಡ್ಡ ಅಪಾಯ. ಇದು ಗ್ರಾಮೀಣ ಬಡವರ ಮಕ್ಕಳಿಗೆ ಮೌಲ್ಯಯುತ ಶಿಕ್ಷಣಕ್ಕೆ ಹೊಡೆತ ಬೀಳುತ್ತಿರುವುದಂತೂ ಸತ್ಯ. ಸಂಖ್ಯೆಗಳಿಗಿಂತ 'ಸತ್ವ'ಕ್ಕೆ ಪ್ರಾಮುಖ್ಯತೆ ನೀಡದಿದ್ದರೆ, ಮುಂದಿನ ಪೀಳಿಗೆಯು ಅಕ್ಷರಸ್ಥರಾಗಿಯೂ ಅರೆಜ್ಞಾನಿಗಳಾಗಿ ಉಳಿಯುಬಹುದೇನೋ?

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)